# ಸಂಪ್ರೀತಿ ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ


Sampreethi - Samruddhi | Volume : 6 | Issue : 06 | Oct. 2023 | Pages : 32 | ₹ 20/-
ಸಂಪ್ರೀತಿ ಸಮೃದ್ಧಿ | ಸಂಪುಟ : 6 | ಸಂಚಿಕೆ : 06 | ಅಕ್ಟೋಬರ್ 2023 | ಪುಟಗಳು : 32 | ₹ 20 ರೂ.


## ವಿಜಯದಶಮಿ

### ಹಬ್ಬದ ಶುಭಾಶಯಗಳು



|| Jai Sri Gurudev ||



# SJ BGS POLYTECHNIC



(A Venture of Sri Adichunchanagiri Shikshana Trust ®)

(Approved by All India Council for Technical Education, New Delhi & Recognised by Government of Karnataka)

B G NAGAR, (BGSIT CAMPUS), NAGAMANGALA TALUK, MANDYA DISTRICT.

**COURSES OFFERED:**

- **CIVIL ENGINEERING**
- **MECHANICAL ENGINEERING (General)**
- **COMPUTER SCIENCE & ENGINEERING**
- **ELECTRICAL & ELECTRONICS ENGINEERING**
- **ELECTRONICS & COMMUNICATION ENGINEERING**

Eligibility:-
Pass in SSLC or Equivalent Examination with 35% aggregate.



**OUR VISION:**

To Impart Quality Education

Transformation of Child through Excellent Education

Child Centered Education


## *Hunt Your Dreams*

**Institution Code : 541**



**Salient Features**

- Highly Qualified and Experienced Faculty
- Spacious well equipped Class Rooms, Labs, Workshops and Seminar Halls
- Internet Facility
- Hostel Facility for Boys & Girls
- Sports Facility
- Transportation
- Canteen Facility
- Library



**For Admissions, Contact :**

**PRINCIPAL**
**SJ BGS POLYTECHNIC,**

BGSIT CAMPUS, BG Nagar (Bellur Cross)
Nagamangala Taluk, Mandya District
Karmataka - 571 448

**E-mail :** ppl.sjbgsp@gmail.com
**Web :** www.sjbgsp.com
**Cell No. :** 9448207483

# ಸಂಪ್ರೀತಿ – ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ

## ಸಂಪಾದಕೀಯ

**ಅಕ್ಟೋಬರ್ : 2023**

**ಸಂಪುಟ 6, ಸಂಚಿಕೆ 6**

ಸಂಪಾದಕರು

**ಡಾ|| ಸಿ. ನಂಜುಂಡಯ್ಯ**

**ಚಂದಾ ವಿವರ :**

| | |
|---|---|
| 10 ವರ್ಷಕ್ಕೆ | ರೂ.2000/- |
| 05 ವರ್ಷಕ್ಕೆ | ರೂ.1000/- |
| 02 ವರ್ಷಕ್ಕೆ | ರೂ.500/- |

ಹಣವನ್ನು ಮನಿಯಾರ್ಡರ್, ಬ್ಯಾಂಕ್ ಡ್ರಾಫ್ಟ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.



ಸಂಪಾದಕರು

**ಸಂಪ್ರೀತಿ – ಸಮೃದ್ಧಿ**

ನಂ. 83, ಬಸವಣ್ಣ ದೇವಸ್ಥಾನ ರಸ್ತೆ
ದೊಡ್ಡಸೋಮನಹಳ್ಳಿ,
ಮಾಗಡಿ ತಾಲ್ಲೂಕು,
ರಾಮನಗರ ಜಿಲ್ಲೆ– 562 131.

**#66, ಸಂಪ್ರೀತಿ – ಸದನ**
**ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ,**
**ಮಾಗಡಿ – 562 120 ರಾಮನಗರ ಜಿಲ್ಲೆ.**

ಮುದ್ರಕರು

- **ಕಂಪ್ಯೂಟರ್ ವರ್ಲ್ಡ್**
ಜಿ.ಟಿ.ವರ್ಲ್ಡ್ ಮಾಲ್ ಹತ್ತಿರ
ಮಲ್ಲಿಗೆ ತೋಟ, ಮಾಗಡಿ ರಸ್ತೆ,
ಬೆಂಗಳೂರು – 560 023.

- ಓದುಗರು ತಮ್ಮ ಅಭಿಪ್ರಾಯಗಳನ್ನು ಮತ್ತು ಲೇಖಕರು ಲೇಖನಗಳನ್ನು ಕೆಳಗಿನ ಈ–ಮೇಲ್ ವಿಳಾಸಕ್ಕೆ ಕಳುಹಿಸಬಹುದು.

sampreethisamruddhi@gmail.com
8971608213



ಸಂಪ್ರೀತಿ – ಸಮೃದ್ಧಿ


**ವಿಜಯದಶಮಿ ಆಚರಣೆ**

ಆಶ್ವಯುಜ ಶುಕ್ಲ ದಶಮಿಗೆ ವಿಜಯದಶಮಿ ಎನ್ನುವ ಹೆಸರಿದೆ. ಇದು ನವರಾತ್ರಿಯ ನಂತರದ ದಿನವಾಗಿದ್ದು ಹಾಗಾಗಿ ಇದನ್ನು ನವರಾತ್ರಿಯ ಸಮಾಪ್ತಿ ದಿನವೆಂದು ಪರಿಗಣಿಸುತ್ತಾರೆ. ಈ ದಿನ ಸೀಮೋಲ್ಲಂಘನ, ಶಮೀ ಪೂಜೆ, ಅಪರಾಜಿತಾ ಪೂಜೆ ಮತ್ತು ಆಯುಧ ಪೂಜೆ ಮಾಡಲಾಗುತ್ತದೆ.

**ಸೀಮೋಲ್ಲಂಘನ:** ಅಪರಾಹ್ನ ಕಾಲದಲ್ಲಿ ಊರಿನ ಗಡಿಯಾಚೆ ಈಶಾನ್ಯ ದಿಕ್ಕಿನ ಕಡೆ ಸೀಮೋಲ್ಲಂಘನಕ್ಕಾಗಿ ಹೋಗುತ್ತಾರೆ ಮತ್ತು ಶಮೀ ವೃಕ್ಷ ಹಾಗೂ ಮಂದಾರ ವೃಕ್ಷವಿರುವಲ್ಲಿ ನಿಲ್ಲುತ್ತಾರೆ. ನಂತರ ಶಮೀ ಪೂಜೆಯನ್ನು ಮಾಡಿ, ಆ ವೃಕ್ಷದ ಬುಡದಲ್ಲಿ ಅಕ್ಕಿ, ಅಡಿಕೆ ಮತ್ತು ಬಂಗಾರದ ನಾಣ್ಯಗಳನ್ನು ಇಡುತ್ತಾರೆ. ನಂತರ ವೃಕ್ಷಕ್ಕೆ ಪ್ರದಕ್ಷಿಣೆ ಹಾಕಿ ಅದರ ಬುಡದಲ್ಲಿನ ಸ್ವಲ್ಪ ಮಣ್ಣು ಮತ್ತು ಮರದ ಎಲೆಗಳನ್ನು ಮನೆಗೆ ತರುತ್ತಾರೆ. ಶಮಿಯ ಎಲೆಗಳನ್ನಲ್ಲದೇ ಮಂದಾರದ ಎಲೆಗಳನ್ನು ಬಂಗಾರವೆಂದು ದೇವರಿಗೆ ಅರ್ಪಿಸುತ್ತಾರೆ. ಮತ್ತು ಆಪ್ತರಿಗೆ ನೀಡುತ್ತಾರೆ. ಈ ಬಂಗಾರವನ್ನು ಕಿರಿಯರು ಹಿರಿಯರಿಗೆ ಕೊಡಬೇಕೆನ್ನುವ ನಿಯಮವಿದೆ.

**ಆಯುಧ ಪೂಜೆ:** ವಿಜಯದಶಮಿಯಂದು ರಾಜರು, ಸಾಮಂತರು ತಮ್ಮ ಶಸ್ತ್ರಾಸ್ತ್ರಗಳನ್ನು ಸ್ವಚ್ಛಗೊಳಿಸಿ, ಸಾಲಾಗಿ ಇಟ್ಟು ಪೂಜೆ ನಡೆಸುತ್ತಾರೆ. ಹಾಗೆಯೇ ರೈತರು ಮತ್ತು ಕುಶಲ ಕರ್ಮಿಗಳು ತಮ್ಮ ಶಸ್ತ್ರಗಳ ಪೂಜೆ ಮಾಡುತ್ತಾರೆ. ಕೆಲವರು ಆಯುಧ ಪೂಜೆಯನ್ನು ನವಮಿಯಂದೂ ಆಚರಿಸಲಾಗುತ್ತದೆ.

**ಅಪರಾಜಿತಾ ಪೂಜೆ:** ವಿಜಯದಶಮಿಯಂದು ಅಪರಾಜಿತಾ ಪೂಜೆ ಮಾಡಲಾಗುತ್ತದೆ. ಶಮೀ ಪೂಜೆಯನ್ನು ಮಾಡಲಾದ ಜಾಗದಲ್ಲಿಯೇ ನೆಲದ ಮೇಲೆ ಅಷ್ಟದಳಗಳನ್ನು ಬರೆದು ಅದರ ಮೇಲೆ ಅಪರಾಜಿತಾ ದೇವಿಯ ಮೂರ್ತಿಯನ್ನಿಟ್ಟು ಪೂಜೆ ಮಾಡಲಾಗುತ್ತದೆ. ಅಷ್ಟದಳಗಳ ಮೇಲೆ ಆರೂಢಳಾದ ಅಪರಾಜಿತಾ, ಪ್ರಥ್ವಿಯ ಭೂಗರ್ಭ ಬಿಂದುವಿನಿಂದ ಉತ್ಪನ್ನಳಾದಾಗ ಅವಳ ಸ್ವಾಗತಕ್ಕಾಗಿ ಅಷ್ಟಪಾಲ ದೇವತೆಗಳ ಆಗಮನವಾಗುತ್ತದೆ. ಅಷ್ಟದಳದ ಅಗ್ರಬಿಂದುಗಳು ಅಷ್ಟಪಾಲ ದೇವತೆಗಳನ್ನು ಪ್ರತಿನಿಧಿಸುತ್ತದೆ. ಅಪರಾಜಿತಾ ದೇವಿಯ ಉತ್ಪತ್ತಿಯಿಂದ ಪ್ರಕ್ಷೇಪಿತವಾಗುವ ಮಾರಕ ಲಹರಿಗಳು, ಅಷ್ಟಪಾಲರ ಮಾಧ್ಯಮದಿಂದ ಅಷ್ಟದಿಕ್ಕುಗಳಿಗೆ ನಸುಗೆಂಪು ಬಣ್ಣದ ಪ್ರಕಾಶಲಹರಿಗಳ ವಾಧ್ಯಮದಿಂದ ಪ್ರಕ್ಷೇಪಿತವಾಗಿ ಆಯಾ ಕೋನಗಳಲ್ಲಿ ಸಂಪುಟಿತವಾಗಿರುವ ರಜ–ತಮಾತ್ಮಕ ಶಕ್ತಿಯನ್ನು ನಾಶ ಮಾಡುತ್ತವೆ. ಮತ್ತು ಪ್ರಥ್ವಿಯ ಮೇಲಿನ ಜೀವಿಗಳಿಗೆ ನಿರ್ವಿಘ್ನವಾಗಿ ಜೀವನ ನಡೆಸಲು ಅನುಕೂಲವಾಗುವಂತೆ ವಾಯುಮಂಡಲವನ್ನು ಶುದ್ಧೀಕರಿಸುತ್ತದೆ. ಬನ್ನೀ ಎಲೆಗಳಲ್ಲಿ ತೇಜವನ್ನು ವೃದ್ಧಿಸುವ ಗುಣವಿರುವುದರಿಂದ ಬನ್ನೀ ಗಿಡದ ಬಳಿ ದುರ್ಗಾದೇವಿಯನ್ನು ಅಪರಾಜಿತಾ ರೂಪದಲ್ಲಿ ಆರಾಧಿಸುತ್ತಾರೆ. ॐ

# ವಾಲ್ಮೀಕಿ ಜಯಂತಿ

✍ ಡಾ. ಗುರುರಾಜ ಪೋಶೆಟ್ಟಿಹಳ್ಳಿ (ಪ್ರಣವ)
ಸಂಸ್ಕೃತಿ ಚಿಂತಕರು



**ವಾಲ್ಮೀಕಿ ಎಂದರೆ ರಾಮಾಯಣ, ರಾಮಾಯಣವೆಂದರೆ ವಾಲ್ಮೀಕಿ ಎಂಬಂತೆ ಅಬಾಲವೃದ್ಧರಾಗಿ ಪಾಮರ ಪಂಡಿತರಾದಿಯಾಗಿ ಎಲ್ಲರ ಮನದಲ್ಲೂ ಚಿರಸ್ಥಾಯಿಗಳಾಗಿ ನೆಲೆಸಿದ್ದಾರೆ. ರಾಮಾಯಣ ಕಥಾಸಾಗರದಲ್ಲಿ ಪ್ರತಿಯೊಂದು ಸನ್ನಿವೇಶದಲ್ಲೂ ಮಾನವನ ಬಾಳಿಗೆ ಬೆಳಕಾಗುವ ಸುಂದರ ಮಾರ್ಗವನ್ನು ಸೂಚಿಸಿದ್ದಾರೆ. ಅಂದಿಗೂ, ಇಂದಿಗೂ, ಎಂದೆಂದಿಗೂ ಜ್ಞಾನಜ್ಯೋತಿಯಲ್ಲಿ ನಡೆಯಲು ಅನುವು ಮಾಡಿಕೊಟ್ಟಿದ್ದಾರೆ.**

### ಭವ್ಯಭಾರತದ ದಿವ್ಯಚೇತನ – ಮಹರ್ಷಿ ವಾಲ್ಮೀಕಿ

ಪ್ರಾಚೇತಸಮುನಿಯ ವಂಶದಲ್ಲಿ ಜನ್ಮಜಾತವಾದ ಶಿಶುವೊಂದು ಹದ್ದಿನ ಬಾಯಿಗೆ ಸಿಕ್ಕಿ ಬೇಡನ ಮನೆಯಲ್ಲಿ ಬೆಳೆಯುತ್ತದೆ. ಮುಂದೆ ಆತನೇ ಬೇಡನಾಗುತ್ತಾನೆ. ಧರ್ಮ–ಕರ್ಮ ಸಂಯೋಗ, ಕೊಲೆ–ಸುಲಿಗೆ–ದರೋಡೆ–ಕಳ್ಳತನವನ್ನೇ ಸಂಸ್ಕಾರ ಪಡೆದ ಈ ಯುವಕ ದುಡಿಮೆಯ ಮಾರ್ಗ ಕಲುಷಿತಗೊಂಡು ಪಾಪಜೀವನ ನಡೆಸುತ್ತಾ ಹೆಂಡತಿ ಮಕ್ಕಳನ್ನು ಸಾಕುತ್ತಾ ಉದರಂಭರಣ ಮಾಡುತ್ತಿದ್ದ. ಅಕಸ್ಮಾತ್ ಅವನ ದಾರಿಯಲ್ಲಿ ಸಪ್ತರ್ಷಿಗಳು ಕಂಡರು. ಅವರನ್ನು ಕೊಳ್ಳೆ ಹೊಡೆಯಲು ಯತ್ನಿಸಿದಾಗ, ಅವರಲ್ಲಿ ಭೌತಿಕ ವಸ್ತುಗಳಿರಲಿಲ್ಲ. 'ಎಲೈ ಬೇಡರವನೇ, ಪಾಪ–ಪುಣ್ಯಗಳಲ್ಲಿ ನಿನ್ನ ಹೆಂಡತಿ, ಮಕ್ಕಳು ಪಾಲುದಾರರಾಗುವ ಸೌಜನ್ಯವಿದೆಯೇ ಕೇಳಿ ಬಾ' ಎಂದರು. ಅವರನ್ನು ಅಲ್ಲಿಯೇ ಇರುವಂತೆ ಹೇಳಿ ಮನೆಯ ಕಡೆ ಹೊರಟ. ಹೆಂಡತಿ ಹೇಳಿದಳು, 'ಪಾಪ–ಪುಣ್ಯ ನಮಗೆ ಗೊತ್ತಿಲ್ಲ. ನಾವು ನಿನ್ನ ಪಾಪಕ್ಕೆ ಭಾಗಿಗಳಲ್ಲ. ನಮ್ಮನ್ನು ಸಾಕುವುದು ನಿನ್ನ ಹೊಣೆ. ನೀನು ತರುವ ವಸ್ತು, ಧನ–ಕನಕಗಳಿಗೆ ಬಾಧ್ಯರೇ ಹೊರತು ಪಾಪಪುಣ್ಯಕ್ಕಲ್ಲ. ಅಂತಹ ವಿಮರ್ಶೆಯ ಗೊಡವೆ ನಮಗೇಕೆ?' ಎಂದು ಬಿಟ್ಟಳು. ಮಕ್ಕಳೂ ಸಹ ತಾಯಿಯ ಮಾತನ್ನೇ ಅನುಮೋದಿಸುತ್ತಾರೆ. ಬೇಡ ಓಡೋಡಿ ಬಂದ. ಸಪ್ತರ್ಷಿಗಳು ಅಲ್ಲಿಯೇ ಇದ್ದರು. 'ಸ್ವಾಮಿ, ನನ್ನ ಹೆಂಡತಿ, ಮಕ್ಕಳು ಈ ರೀತಿ ತಿಳಿಸಿದರು' ಎಂದ. ವ್ಯಕ್ತಿಯ ಜೊತೆ ಬರುವವರು ಯಾರು ಇಲ್ಲ ಪ್ರಾಣಪ್ರಯಾಣ ಸಮಯದಲ್ಲಿ ನಾವು ಮಾಡಿರುವ ಕರ್ಮ ಮಾತ್ರ ಹೊರೆಯಾಗಿ ಬರುತ್ತದೆಂದು ಸಪ್ತರ್ಷಿಗಳು ತಿಳಿಸುತ್ತಾರೆ. ಆ ಬೇಡನ ಉದ್ಧಾರಕ್ಕಾಗಿ 'ಮರಾ ಮರಾ' ಅಂತ ಸಂಸ್ಕಾರವನ್ನರಿತು ವಿಲೋಮಾಕ್ಷರಗಳಲ್ಲಿ 'ರಾಮ' ಮಂತ್ರವನ್ನು ಬೋಧಿಸುತ್ತಾರೆ. ಇಲ್ಲಿಯೇ ತಪಗೈಯ್ಯಿ ಎಂದು ಆಣತಿ ಇಟ್ಟು ಹೊರಟರು. ಬೇಡ ಅಲ್ಲಿಯೇ ಕುಳಿತು ಶ್ರೀರಾಮನಾಮದಲ್ಲಿ ಸಮಾಧಿಸ್ಥನಾದ.

ಲೋಕೋದ್ಧಾರವೇ ಸಪ್ತರ್ಷಿಗಳು ಕರ್ತವ್ಯವಾಗಿತ್ತು. ಸಮಾಧಿಸ್ಥನಾದ ಬೇಡನ ಮೇಲೆ ಹುತ್ತ ಬೆಳೆಯಿತು ರಾಮನಾಮ ಝೇಂಕಾರ ವನವನ್ನೆಲ್ಲಾ ಮೊಳಗಿಸಿತು. ಹುತ್ತದಲ್ಲಿ ಬೇಡ ಪರಿವರ್ತಿತನಾಗಿದ್ದ. ಮತ್ತೊಮ್ಮೆ ಸಪ್ತರ್ಷಿಗಳು ಬಂದಾಗ ಬೇಡನ ತಪಸ್ಸು ಉನ್ನತಿಯ ಶಿಖರ ಕಂಡಿತ್ತು. ಅವನನ್ನು ಕೂಗಿ ಕರೆಯುತ್ತಾರೆ. ವಲ್ಮೀಕ (ಹುತ್ತ)ದಿಂದ ಬಂದವನಾದ್ದರಿಂದ 'ವಾಲ್ಮೀಕಿ' ಎಂದು ಪ್ರಸಿದ್ಧರಾಗುತ್ತಾರೆ. ಜನ್ಮಸಂಸ್ಕಾರ ಹೇಗಾದರೂ ಇರಲಿ ಪೂರ್ವಜನ್ಮಸಂಸ್ಕಾರ ಪುಟಗೊಳ್ಳುವ ಕಾಲಕ್ಕೆ ಮಹಾತ್ಮರ ಸಂಸರ್ಗ ದೊರೆತಲ್ಲಿ ಮಾನವನ ಉದ್ಧಾರ ಎಂದು ವಾಲ್ಮೀಕಿಯ ಈ ಜೀವನ ಸಾಬೀತುಪಡಿಸಿತ್ತು. ವಾಲ್ಮೀಕಿ ತನ್ನ ಪಾಪಕರ್ಮಕ್ಕೆ ತೆರೆ ಎಳೆದು ರಾಮನಾಮ ಪ್ರಭಾವಕ್ಕೆ ಬಿದ್ದು ಪರಮಪಾವನಮೂರ್ತಿಯಾಗಿದ್ದ. ಕುಲಹೀನನಾದರೂ ಕೂಗಿ ಜಪಿಸುವ ಮಹಾಮಂತ್ರ ತಾನೆ ರಾಮನಾಮ. ಸುಮ್ಮನೆ ದೊರಕುವುದೇ ರಾಮನಾಮ, ಜನ್ಮಜನ್ಮಾಂತರಗಳ ಪಾಪ ಹೋದಾಗಲ್ಲದೇ ಎಂಬ ದಾಸರ ನುಡಿ ಸರ್ವಶ್ರೇಷ್ಠ.

ಅಯೋಧ್ಯೆಯ ಸರಯೂ ನದಿಗೆ ಉಪನದಿಯಾದ ತಮಸಾ ನದಿಯ ದಂಡೆಯಲ್ಲಿ ಆಶ್ರಮ ನಿರ್ಮಿಸಿಕೊಂಡು ವಾಲ್ಮೀಕಿಗಳು ವಾಸಿಸಿದರು. ಅಯೋಧ್ಯೆಯ ಸರಹದ್ದಿನ ಆಶ್ರಮ. ಸೂರ್ಯಕುಲದ ಅರಸುಗಳ ಪ್ರಭಾವ ತಿಳಿದಿತ್ತು. ಒಂದು ದಿನ ಸ್ನಾನಕ್ಕೆಂದು ಶಿಷ್ಯನಾದ ಭಾರದ್ವಾಜರೊಡನೆ ತಮಸಾ ನದಿಯ ಪರಿಸರ ಪ್ರಕೃತಿಯಲ್ಲಿ ವಾಲ್ಮೀಕಿ ಮಗ್ನರಾದರು. ಸ್ನಾನ ತಡಮಾಡಿ ಪ್ರಕೃತಿಯಲ್ಲಿ ಜ್ಞಾನಸ್ನಾನ ಮಾಡುತ್ತಾರೆ. ಅನತಿ ದೂರದಲ್ಲಿ ಬೇಡನೊಬ್ಬ ಮರದ ಮೇಲಿರುವ ಎರಡು ಕ್ರೌಂಚ ಪಕ್ಷಿಗಳಿಗೆ ಗುರಿ ಇಟ್ಟಿದ್ದ. ಬಾಣ ಹೊಡೆದೇ ಬಿಟ್ಟ. ಗಂಡುಪಕ್ಷಿ ಏಟು ತಿಂದು ನೆಲಕ್ಕುರುಳಿತು. ತನ್ನ ಪ್ರಿಯಕರನ ಸಾವಿಗೆ ಹೆಣ್ಣುಪಕ್ಷಿ ಆಕ್ರಂದನ ಮಾಡಿತು. ವಾಲ್ಮೀಕಿಗೆ ಕರುಣೆ ಉಕ್ಕಿಬರಲು, ತಕ್ಷಣ ಬಾಯಿಂದ ಶಾಪ ಹೊರಟಿತು.

**ಮಾ ನಿಷಾದ ಪ್ರತಿಷ್ಠಾ ತ್ವಂ ಆಗಮಃ ಶಾಶ್ವತೀಃ ಸಮಾಃ।**
**ಯತ್ಕ್ರೌಂಚ ಮಿಥುನಾದೇಕಮವಧೀಃ ಕಾಮಮೋಹಿತಮ್ ॥**

'ಎಲೈ ಬೇಡರವನೇ, ಕಾಮಮೋಹಿತವಾದ ಗಂಡುಪಕ್ಷಿಯನ್ನು ಕೊಂದೆಯಾದ ಕಾರಣ ನಿನಗೆ ಕೀರ್ತಿ ಬಾರದಿರಲಿ' ಅಂತಲೇ ಶಪಿಸಿಬಿಟ್ಟರು. ಅದೇ ಮಾ ನಿಷಾದ– ಲಕ್ಷ್ಮೀಲೋಲನೆ, ನೀನು ಕಾಮಮೋಹಿತನಾದ ರಾವಣನನ್ನು ಕೊಂದೆಯಾದ ಕಾರಣ ನಿನ್ನ ಕೀರ್ತಿ–ಪ್ರತಿಷ್ಠೆಗಳು ಶಾಶ್ವತವಾಗಲಿ ಎಂದಾಯಿತು. ಇದು ಅನುಷ್ಟುಪ್ ಛಂದಸ್ಸಿನ ಶ್ಲೋಕ, ನಂತರ ಸ್ನಾನಮಾಡಿ ಆಶ್ರಮಕ್ಕೆ ಬರುತ್ತಾರೆ. ಅಲ್ಲಿ ನಡೆದ ಘಟನೆ, ತಾನಿತ್ತ ಶಾಪ, ಈ ಬಗ್ಗೆ ವಾಲ್ಮೀಕಿಗಳಿಗೆ ಮನ ಕರಗುತ್ತದೆ. ಬೇಡರವನ ಕೆಲಸಕ್ಕೆ ನಾನೇಕೆ ಶಪಿಸಿದೆ, ನನ್ನ ತಪಸ್ಸೆಲ್ಲಾ ಹಾಳಾಯಿತಲ್ಲಾ ಎಂದು ಮಮ್ಮಲಮರಗುತ್ತಾರೆ. ಆಕಸ್ಮಾತ್ ಬ್ರಹ್ಮದೇವರು ಇವರ ಆಶ್ರಮಕ್ಕೆ ಬರುತ್ತಾರೆ. ಅವರನ್ನು ವಾಲ್ಮೀಕಿಗಳು ಸತ್ಕರಿಸಲಾಗಲಿಲ್ಲ. ಆಗ ಬ್ರಹ್ಮದೇವರೇ ನುಡಿಯುತ್ತಾರೆ. 'ನನ್ನ ಇಷ್ಟದಂತೆಯೇ ಈ ವಾಣಿ ನಿನ್ನ ಬಾಯಲ್ಲಿ ಬಂದಿದೆ. ರಾಮಾಯಣ ಬರೆ, ಇದೇ ಪ್ರಾರಂಭಶ್ಲೋಕವಾಗಲಿ, ಖಳನಾಯಕನಾದ ರಾವಣನ ಹಿಂಸೆಯೂ ಇರಲಿ, ಪವಿತ್ರ ಸೀತಾಮಾತೆಯ ಚರಿತವೂ ಇರಲಿ. ರಾಮಾಯಣ ಪೂರ್ಣಗೊಳಿಸು. ನೀನು ಆ ರಾಮನಿಂದ ಅಮರನಾಗುವೆ. ನಿನ್ನ ಕಾವ್ಯ ಅಮರವಾಗಿ ಹದಿನಾಲ್ಕು ಲೋಕಗಳಲ್ಲಿ ಆಚಂದ್ರಾರ್ಕವಾಗಿ ಬೆಳಗಲಿ' ಎಂದರು. ಬೇಡ ತನ್ನ ತಪಸ್ಸಿನಿಂದ ರಾಮಾಯಣ ರಚನಾಕಾರನಾದ, ಆದ್ದರಿಂದಲೇ ರಾಮಾಯಣ ಕರುಣಾಮಯ ಕಾವ್ಯ. ತಪ್ಪಿಲ್ಲದ ಕರುಣಾಳು ರಾಘವನ ಜೀವನಚರಿತ್ರೆ. ಮರ್ಯಾದಾಪುರುಷೋತ್ತಮನ ಗುಣಗಾನ. ರಾಮಾಯಣ ವಾಲ್ಮೀಕಿಗೆ ಉತ್ಕರ್ಷ ತಂದ ಪವಿತ್ರಮಾರ್ಗ.

ವಾಲ್ಮೀಕಿ ರಾಮಾಯಣವು ಭರತವರ್ಷದ ಮೊದಲನೆಯ ಮಹಾಕಾವ್ಯ. ಇದು ಭಾರತೀಯರು ನಿಜವಾಗಿಯೂ ಹೆಮ್ಮೆಪಡಬಹುದಾದಂತಹ ಅತ್ಯಮೂಲ್ಯವಾದ ನಿಧಿಯಾಗಿದೆ. ಇದು ಮಹಾಕಾವ್ಯವು ಮಾತ್ರವಲ್ಲದೆ ಧರ್ಮ, ತತ್ತ್ವಶಾಸ್ತ್ರ, ರಾಷ್ಟ್ರಾಡಳಿತ ವ್ಯವಸ್ಥೆ ಮತ್ತು ಸಾರ್ವಜನಿಕ ವ್ಯವಹಾರಗಳ ವಿಶ್ಲೇಷಣೆಗಳನ್ನೊಳಗೊಂಡಿರುವ ವಿಶ್ವಕೋಶವಾಗಿದೆ. ಭಾರತವು ಧರ್ಮ ಮತ್ತು ಆಧ್ಯಾತ್ಮರಂಗದಲ್ಲಿ ವಿಶ್ವಕ್ಕೇ ಮಾರ್ಗದರ್ಶನ ಮಾಡುತ್ತಿರುವ ಏಕಮಾತ್ರ ದೇಶವಾಗಿದೆ. ಭಾರತದಲ್ಲಿ ಧರ್ಮವು ಎಷ್ಟರಮಟ್ಟಿಗೆ ವ್ಯಾಪಿಸಿದೆಯೆಂದರೆ ಮಾನವ ಜೀವನದ ಚಟುವಟಿಕೆಗಳಾದ ನಡವಳಿಕೆ, ಚಿಂತನೆ, ಯೋಚನಾಲಹರಿ ಮತ್ತು ಮನೋಭಾವನೆಗಳೆಲ್ಲವೂ ಅದರ ವ್ಯಾಪ್ತಿಯಲ್ಲೇ ಬರುತ್ತವೆ. ವಾಲ್ಮೀಕಿ ಮಹರ್ಷಿಗಳು ವಿದ್ಯಾಕೇಂದ್ರಗಳಾಗಿ ಭಾರತದಾದ್ಯಂತ ಹಲವಾರು ಆಶ್ರಮಗಳನ್ನು ಸ್ಥಾಪಿಸಿದರು ಮತ್ತು ಈ ಕೇಂದ್ರಗಳ ಮೂಲಕ ಅವರು ಜನರಿಗೆ ರಾಮಾಯಣವನ್ನು ಬೋಧಿಸಿದರು. ಅವರ ಅದ್ವಿತೀಯ ವಿದ್ಯಾಪದ್ಧತಿಯು ಮಾನವಚೇತನಗಳ ದೇಹ, ಮನಸ್ಸು ಮತ್ತು ಆಲೋಚನಾತರಂಗಗಳನ್ನು ಶುದ್ಧಿಗೊಳಿಸಿ ಆರೋಗ್ಯ ಮತ್ತು ಶಕ್ತಿಸಾಮರ್ಥ್ಯಗಳನ್ನು ವೃದ್ಧಿಪಡಿಸುತ್ತಿದೆ. ವಾಲ್ಮೀಕಿ ಮಹರ್ಷಿಗಳ ಆಶ್ರಮವು ತಮಸಾ ನದಿಯ ಹತ್ತಿರದ ದಟ್ಟಾರಣ್ಯದಲ್ಲಿದ್ದು ಈ ಬಗ್ಗೆ ತುಲಸೀದಾಸರು ಪ್ರಶಂಸಿಸುತ್ತ 'ಖಗಮೃಗ ವಿಪುಲಕೋಲಾಹಲ ಕರಹಿಂ, ಬಿರಹತ ಬೇರ ಮಂಡಿತ ಮನ ಚರಹಿಂ ।' ಬದ್ಧವೈರಿಗಳಾದ ಹುಲಿ ಮತ್ತು ಜಿಂಕೆಗಳು, ಹದ್ದು ಮತ್ತು ಗುಬ್ಬಚ್ಚಿಗಳು, ಮುಂಗುಸಿ ಮತ್ತು ಹಾವುಗಳು ಪರಸ್ಪರ ವೈರತ್ವವನ್ನು ಮರೆತು ಸಹಬಾಳ್ವೆ ಮಾಡುತ್ತಿದ್ದುವೆಂದು ಹಾಡಿಹೊಗಳಿದ್ದಾರೆ.

ಪ್ರಾಚೀನ ಯುಗದ ಜೀವಂತ ಪರಂಪರೆಗಳ ಆದರ್ಶಗಳು, ದುಃಖ–ದುಮ್ಮಾನಗಳು, ಹಾರೈಕೆಗಳು ಮತ್ತು ರಸಭಾವಾತಿರೇಕಗಳನ್ನು ವಿವರಿಸುವ ವಾಲ್ಮೀಕಿ ರಾಮಾಯಣವು ಭಾರತದ ನಾಗರೀಕತೆಗೆ ಮತ್ತು ಸಂಸ್ಕೃತಿಗಳ ಅಮೂಲ್ಯನಿಧಿಯಾಗಿದೆ. ರಾಮಾಯಣವೆಂಬ ಪರ್ವತ ಶಿಖರದಿಂದ ಭರತಖಂಡದ ಸಾಮಾಜಿಕ, ಆರ್ಥಿಕ, ರಾಜನೀತಿಯ, ಧಾರ್ಮಿಕ ಮತ್ತು ಕಲಾಚಟುವಟಿಕೆಗಳೆಡೆಗೆ ಏಕಕಾಲದಲ್ಲಿ ದೃಷ್ಟಿಯನ್ನು ಬೀರುತ್ತಿದೆ. ಆದಿಕವಿಯ ಆದಿಕಾವ್ಯವು ವರ್ತಮಾನಕಾಲದ ಸಂದಿಗ್ಧತೆಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ. ರಾಷ್ಟ್ರೀಯ ಆದರ್ಶಗಳ ಅದ್ಭುತ ಸೃಷ್ಟಿಯನ್ನು ಭಗವಾನ್ ವಾಲ್ಮೀಕಿಗಳು ಮಾಡಿದ್ದಾರೆ. ಅವರು ಬಿತ್ತಿದ ಅಸಾಮಾನ್ಯ ಮತ್ತು ಚಿರಂತನವಾದ ಸಂಸ್ಕೃತಿ, ನಾಗರಿಕತೆ ಮತ್ತು ಸತ್ಯ–ಧರ್ಮದ ಬೀಜಗಳು ಇಂದು ಹೆಮ್ಮರವಾಗಿ ಬೆಳೆದು ಪ್ರವರ್ಧಮಾನಕ್ಕೆ ಬಂದಿವೆ. ರಾಮಾಯಣ ಮಹಾಕಾವ್ಯವು ವಿಶ್ವಮಾನವಕುಲಕ್ಕೆ ಅಭ್ಯುದಯದ ಪಾಠವನ್ನು ಉಪದೇಶಿಸುತ್ತದೆ.

ಈ ಮಹಾಕಾವ್ಯವು ಭೂಪದರವನ್ನು ಸೀಳಿ ಮೇಲೆ ಬಂದು ಬೆಳೆದ ಮಹಾವಟವೃಕ್ಷದಂತೆ ಮಾನವತೆಗೆ ಆಶ್ರಯ ನೀಡುತ್ತದೆ. ಕವಿಗಳು ಮತ್ತು ಓದುಗರು ಇಂದೂ ಸಹ ಆದಿಕವಿಯ ಕಾವ್ಯದ ಮಾಧುರ್ಯವನ್ನೂ ಆಸ್ವಾದಿಸುತ್ತಿದ್ದಾರೆ. ಈ ಮಹಾಕಾವ್ಯವು ಇಡೀ ಮಾನವತೆಗೆ ಒಂದು ಆದರ್ಶವಾಗಿದೆ ಎಂದು ಕಾವ್ಯಪ್ರಪಂಚವು ಘೋಷಿಸುತ್ತಿದೆ. ಈ ಮಾರ್ಗದಲ್ಲಿ ಕ್ರಮಿಸಿ, ಶಾಂತಿಯೆಡೆಗೆ ಕೈಹಿಡಿದು ಕರೆದುಕೊಂಡು ಹೋಗಲಿ. ವಾಲ್ಮೀಕಿ ಮಹರ್ಷಿಗಳು ತಮ್ಮ ಕೃತಿಗಳಿಂದ ಮಾನವಕುಲದ ಅಭ್ಯುದಯಕ್ಕೆ ಉದಾತ್ತ ಮಾರ್ಗವನ್ನು ತೋರಿಸಿದ್ದಾರೆ.

ಶ್ರೀ ವಾಲ್ಮೀಕಿ ಮಹರ್ಷಿಗಳು ಆದಿಕವಿ ಎಂಬುದು ಸುಪ್ರಸಿದ್ಧವಾಗಿದೆ. ಶ್ರೀರಾಮಾಯಣಕಾವ್ಯವೇ ಮಹರ್ಷಿಗಳಿಗೆ ಪ್ರಪ್ರಥಮ ಕವಿ ಎಂಬ ಬಿರುದನ್ನು ಗಳಿಸಿಕೊಟ್ಟಿದೆ.

**ವಾಲ್ಮೀಕೇರ್ಮುನಿಸಿಂಹಸ್ಯ ಕವಿತಾವನಚಾರಿಣಃ।**
**ಶೃಣ್ವನ್ ರಾಮಕಥಾನಾದಂ ಕೋ ನ ಯಾತಿ ಪರಾಂ ಗತಿಮ್ ॥**

ಅವರಿಂದ ವಿರಚಿತವಾದ ರಾಮಾಯಣವನ್ನು ವರ್ಣಿಸಲು ಪಾಮರರಾದ ನಮ್ಮಿಂದ ಅಸಾಧ್ಯ. ಶ್ರೀರಾಮಾಯಣ ಕಾವ್ಯವು ಒಂದು ಪರಿಪೂರ್ಣ ನಿಧಿ ಎಂದು ರಮಣೀಯವಾದ, ಮಂಗಳಕರವಾದ ಮಹೋದಧಿ ಎಂದೂ ಮನವರಿಕೆಯಾಗುತ್ತದೆ. ಕೋಟಿ ಕೋಟಿ ಸೌಭಾಗ್ಯಗಳು ಒಮ್ಮೆಲೇ ಒದಗಿ ಬಂದಂತಾಗಿ ಮಾನವಕುಲ ಸಫಲತೆಯನ್ನು ಪಡೆದಿದೆ. ಅಂತಹ ದಿವ್ಯವಾದ ಸಿರಿಯನ್ನು ನೀಡಿದ ಶ್ರೀ ವಾಲ್ಮೀಕಿಗಳಿಗೆ ಅಲ್ಪಮಾನವರಾದ ನಾವು ಏನನ್ನು ಕೊಡಬಲ್ಲೇವು?

ಮಾನವಲೋಕಕ್ಕೆ “ಕಲ್ಪವೃಕ್ಷ” “ಕಾಮಧೇನು” ಮುಂತಾದ ದಿವ್ಯನಿಧಿಗಳು ಇಲ್ಲದಿರಬಹುದು. ಅದಕ್ಕಿಂತ ಮಿಗಿಲಾದ ನವರಸಭರಿತವಾದ ಅನರ್ಘ್ಯ ರತ್ನದಂತೆ ಅಮೂಲ್ಯವಾದ ಕೊಡುಗೆಯನ್ನು ವಾಲ್ಮೀಕಿಗಳು ನಮಗೆ ನೀಡಿದ್ದಾರೆ.

ಗುರುಶಿಷ್ಯರ ಸಂಬಂಧ, ಪಿತೃವಾಕ್ಯ ಪರಿಪಾಲನೆ, ಸೋದರಪ್ರೇಮ, ದೇಶಪ್ರೇಮ, ಆದರ್ಶ ನೀತಿ, ತ್ಯಾಗಶೀಲತೆ, ಸೇವಾಕೈಂಕರ್ಯ, ಕಷ್ಟಸಹಿಷ್ಣುತೆ, ಸಹನೆ, ಕ್ಷಮಾಗುಣ ಎಂತಹ ಸಂಕಟ ಒದಗಿ ಬಂದರೂ ಧರ್ಮವನ್ನು ಬಿಡದಿರುವ ಅಚಲ ನಿರ್ಧಾರಗಳು ಇಂತಹ ಅನೇಕ ಮಾನವೀಯ ಮೌಲ್ಯಗಳನ್ನು ಹಿಡಿದೆತ್ತಿ ತೋರಿಸಿದ್ದಾರೆ.

ಮಮತಾಮಯಿಯಾದ ಕೌಸಲ್ಯೆಯು ಮಗನ ಪಟ್ಟಾಭಿಷೇಕವೆಂದು ತಿಳಿದು ರಾಜ್ಯಸಿಂಹಾಸನದ ಮೇಲೆ ಕುಳಿತಿರುವ ಮಗನನ್ನು ವೀಕ್ಷಿಸಲು ನಿರೀಕ್ಷಿಸುತ್ತಾ ಮಗನ ಅಭ್ಯುದಯಕ್ಕೆ ದಾನಧರ್ಮಾದಿಗಳನ್ನು ಪೂಜಾಕೈಂಕರ್ಯಗಳನ್ನು ಸಂಭ್ರಮದಿಂದ ಆಚರಿಸುತ್ತಿರುವಾಗ ಒಂದು ಕ್ಷಣದಲ್ಲಿ ಎಂತಹ ವಿಪರ್ಯಾಸವು? ರಾಮನೇ ಬಂದು ತಂದೆಯ ಆಜ್ಞೆಯಂತೆ ಕಾಡಿಗೆ ಹೊರಟ್ಟಿದ್ದೇನೆ, ಅನುಮತಿಸು ಎಂದು ಬೇಡಿದಾಗ ತಾಯಿಯ ಮನೋಚಿತ್ರಣ ನಮ್ಮ ಮನ ಮಿಡಿಯುತ್ತದೆ. ಒಂದು ದಿನ ಎರಡು ದಿನವೇ? ಹದಿನಾಲ್ಕು ವರ್ಷಗಳ ಸುದೀರ್ಘಕಾಲ ತಾಯಿ ಮಕ್ಕಳ ಅಗಲಿಕೆ.

ಒಪ್ಪಿಗೆ ನೀಡದೆ ಹಠಮಾಡಿದ ತಾಯಿಯನ್ನು ಚಾಕಚಕ್ಯತೆಯಿಂದ ಸುಮ್ಮನಾಗಿಸಿದ ಶ್ರೀರಾಮನು ಮಡದಿಯಾದ ಸೀತೆಯನ್ನು ಒಪ್ಪಿಸಲಾರದೆ ಸೋಲುತ್ತಾನೆ. ಮಡದಿಯಾದ ಸೀತೆ ತನ್ನ ಜೊತೆ ಬಂದು ವನವಾಸದ ಕಷ್ಟಗಳನ್ನು ಅನುಭವಿಸುವುದು ಬೇಡ ಎಂದು ಶ್ರೀರಾಮನು ಹೇಳುತ್ತಾನೆ. ಆಗ ಸೀತೆಯು ಹೇಳಿದ ಯುಕ್ತಿಯುಕ್ತವಾದ ಮಾತುಗಳಿಂದ ರಾಮನು ನಿರುತ್ತರನಾಗಿ ಸಮ್ಮತಿಸುತ್ತಾನೆ. ಓದುಗರಿಗೂ ಸಮಾಧಾನವಾಗುತ್ತದೆ. ಕಷ್ಟದಲ್ಲಾಗಲಿ, ಸುಖದಲ್ಲಾಗಲಿ ದಂಪತಿಗಳು ಜೊತೆಯಲ್ಲಿರುವುದನ್ನೇ ಭಾರತೀಯರಾದ ನಾವು ಬಯಸುತ್ತೇವೆ.

ಇನ್ನು ಬೇಡನಾದ ಗುಹನಿಗೆ ರಾಮನ ದರುಶನ, ಗುಹನ ಆತಿಥ್ಯ ಆದರ ಸಹಕಾರಗಳ ಮೂಲಕ ಅವನ ಸಂಸ್ಕೃತಿ ಸಂಸ್ಕಾರಗಳನ್ನು ಪರಿಚಯಿಸಿದ್ದಾರೆ. ಭವಸಾಗರವನ್ನೇ ದಾಟಿಸುವ ಪರಮಪುರುಷನಾದ ಶ್ರೀರಾಮನನ್ನು ಅವನ ಪರಿವಾರವನ್ನು ಗಂಗೆಯನ್ನು ದಾಟಿಸಿ ಕೃತಕೃತ್ಯನಾದ ಗುಹನು ನಮಗೆ ಹೆಮ್ಮೆಯನ್ನು ತಂದಿದ್ದಾನೆ.

ಭ್ರಾತೃಪ್ರೇಮಸಂಪನ್ನನೂ ತ್ಯಾಗಶೀಲನೂ, ರಾಗ ದ್ವೇಷರಹಿತನೂ ಆದ ಭರತನ ಸದ್ಗುಣಗಳಿಗೆ ಮನಸೋತ ಭರದ್ವಾಜ ಮಹರ್ಷಿಗಳ ಆತಿಥ್ಯವು ನಾವು ಕಂಡೂ ಕೇಳರಿಯದ ಸನ್ನಿವೇಶವಾಗಿದೆ. ಲಕ್ಷ್ಮೀಸಂಪನ್ನನೂ, ಮಹಾವೀರನೂ, ಜ್ಞಾನಯೋಗಿಯೂ ಆದ ಲಕ್ಷ್ಮಣನು ಅಣ್ಣನಲ್ಲಿರುವ ಭಕ್ತಿ, ಪ್ರೇಮ, ಸೇವಾತತ್ಪರತೆ, ಎಡಬಿಡದೆ ಅಣ್ಣನನ್ನೇ ಅನುಸರಿಸಿ ತಂದೆಯಂತೆ ಕಾಪಾಡಿದ ಧೀಶಕ್ತಿಯ ಮುಂದೆ ನಾವು ತಲೆಬಾಗುತ್ತೇವೆ.

ಶಬರಿ ತಾನು ಕಾಣದ ರಾಮನು ಬಂದೇ ಬರುತ್ತಾನೆಂದು ಅಚಲ ನಂಬಿಕೆಯಿಂದ ನಿರೀಕ್ಷಿಸಿ, ಕೊನೆಗೂ ಸಫಲತೆಯನ್ನು ಪಡೆಯುತ್ತಾಳೆ. “ಶಬರಿಯ ನಿರೀಕ್ಷಣೆ ಸುಳ್ಳಾಗದು” ಎಂಬ ಗಾದೆಯೇ ಏರ್ಪಟ್ಟಿದೆ. ರಾಮಾಯಣದಲ್ಲಿ ಜೀವಮಣಿಯಾಗಿ ಪ್ರಮುಖ ಪಾತ್ರ ವಹಿಸುವ ಹನುಮಂತ ಮತ್ತು ಶ್ರೀರಾಮಲಕ್ಷ್ಮಣರ ಸಮಾಗಮ ದೊಡ್ಡ ತಿರುವು ಕೊಡುತ್ತದೆ. ಆಗಲಿದ ಬಂಧುಗಳ ಪುನರ್ಮಿಲನವೆಂಬ ಶುಭಸೂಚನೆ ಹಾಗೂ ಮನೋಧೈರ್ಯಗಳಿಂದ ನೆಮ್ಮದಿ ಸಿಗುತ್ತದೆ. ಸುಗ್ರೀವನಂಥ ವಾನರರ ಸಭ್ಯತೆ ಸಂಸ್ಕಾರಗಳು, ಮಾನವರಿಗೆ ಸಾಟಿಯಾಗಿದ್ದೇವೆಂದೂ ಅವರ ವಚನ ಪಾಲನೆ, ಕಷ್ಟದಲ್ಲಿ ಸ್ನೇಹಿತರಿಗೆ ಒಲಿದ ರೀತಿಯನ್ನು ವಾಲ್ಮೀಕಿ ಎತ್ತಿ ತೋರಿಸಿದ್ದಾರೆ. ಅದಲ್ಲದೆ ಜಟಾಯು, ಸಂಪಾತಿಯಂತಹ ಪಕ್ಷಿಗಳಿಗೂ ಒಳ್ಳೆಯ ಸ್ಥಾನವನ್ನು ನಾವು ಗಮನಿಸುತ್ತೇವೆ. ಅಲ್ಲಲ್ಲಿ ಪ್ರಕೃತಿಯ ವರ್ಣನೆ, ನದೀಝರಿಗಳ ಮಧುರನಿನಾದ ನಮ್ಮ ಕಣ್ಣುಗಳ ಮುಂದೆ ನಲಿಯುವಂತಾಗುತ್ತದೆ.

ಋಷಿಮುನಿಗಳ ಜೀವನಶೈಲಿ ಅವರ ಆಶ್ರಮದ ವರ್ಣನೆಯನ್ನು ಪರಿಚಯಿಸುತ್ತಾ ನಮ್ಮನ್ನು ಶಾಂತಿಧಾಮಕ್ಕೆ ಕೊಂಡೊಯ್ದು ಧನ್ಯರನ್ನಾಗಿಸಿದ್ದಾರೆ. ಗರ್ವಿಷ್ಠರಾದ ಹಿಂಸಾಪ್ರವೃತ್ತಿಯವರಾದ ರಾಕ್ಷಸರ ಮಧ್ಯದಲ್ಲಿಯೂ ವಿಭೀಷಣನಂಥ ಸದ್ಗುಣಿ, ಅವನು ನಡೆದ ರೀತಿಯನ್ನೂ, ಪರಿಚಯಿಸುತ್ತಾ ದುರ್ಜನರಲ್ಲೂ ಸಜ್ಜನರು ಇರುತ್ತಾರೆಂದು ತೋರಿಸಿದ್ದಾರೆ. ಮಹಾಮಹಿಮನಾದ ಶ್ರೀರಾಮನ ಚರಿತೆಯಲ್ಲಿ ಅನೇಕ ಮಣಿಮುತ್ತುರತ್ನಗಳನ್ನು ಕೊಟ್ಟಿದ್ದಾರೆ. ಯಾರು ಹೆಚ್ಚು ಯಾರು ಕಡಿಮೆ ಎಂದು ಹೇಳಲು ಸಾಧ್ಯವಿಲ್ಲದಂತಾಗಿದೆ. ಶ್ರೀವಾಲ್ಮೀಕಿ ಸವಿಯೂಟವನ್ನೇ ಉಣ್ಣಲು ಬಡಿಸಿ, ಅತ್ಯಂತ ಕಹಿಯಾದ ಪದಾರ್ಥವನ್ನೂ ಉಣ್ಣಲು ಕೊಟ್ಟಿದ್ದಾರೆ.

ಸೀತಾಪರಿತ್ಯಾಗದ ಸನ್ನಿವೇಶವು ಅತ್ಯಂತ ದುಃಖಕರವಾಗಿದೆ. ನಿರಾಶೆ ಅಸಹನೆ ಎಲ್ಲವೂ ಸೇರಿ ವಾಲ್ಮೀಕಿ ಹೀಗೇಕೆ ಬರೆದರು? ರಾಮನು ಮಾಡಿದ್ದು ಸರಿಯೇ? ಎಂದು ಬೃಹದಾಕಾರವಾದ ಪ್ರಶ್ನೆ ನಮ್ಮ ಕಣ್ಮುಂದೆ ಬಂದು ನಮ್ಮನ್ನೇ ಪ್ರಶ್ನಿಸುತ್ತದೆ. ಅಸಮರ್ಥರಾದ ನಮ್ಮಲ್ಲಿ ಅದಕ್ಕೆ ಉತ್ತರವಿಲ್ಲದಂತೆ ಮಾಡಿದ್ದಾರೆ. ಎಷ್ಟು ಕೇಳಿದರೂ, ಎಷ್ಟು ಓದಿದರೂ ಸಮಾಧಾನವಿಲ್ಲದೆ ಮಹಿಳಾಲೋಕ ಪ್ರಪಾತದಲ್ಲಿ ಬೀಳುವಂತೆ ತಳಮಳಗೊಳ್ಳುತ್ತಿದೆ. ರಾಮಾಯಣದ ಮಹಾಸಾಗರದಲ್ಲಿ ಈ ಸನ್ನಿವೇಶವು ದೊಡ್ಡತಿಮಿಂಗಲವೇ ಸರಿ. ವಿಧಿನಿಯಮ, ದೈವನಿರ್ಣಯ, ಅವತಾರ ಪುರುಷರು ಎಂದು ಎಷ್ಟು ಸಮನ್ವಯ ಮಾಡಿದರೂ ಮಾನವೀಯತೆಯ ದೃಷ್ಟಿಯಿಂದ ನಮ್ಮ ಮನಸ್ಸಿಗೆ ಅಂಗೀಕಾರವಿಲ್ಲವೆಂದೇ ಹೇಳಬಹುದು. ರಾಕ್ಷಸಿಯರ ಮಧ್ಯದಲ್ಲಿ ರತ್ನಶಿರೋಮಣಿಯಂತೆ ಸೀತೆ, ದುಃಖದೈನ್ಯತೆಗಳಿಂದ ಅಬಲೆಯಾಗಿದ್ದ ಅವಳ ಮನೋನಿಬ್ಬರ, ಪತಿಯ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳದೆ ಯಾವ ಪ್ರಲೋಭಗಳಿಗೂ ಜಗ್ಗದೆ ನಿಶ್ಚಲವಾಗಿ ಧೈರ್ಯದಿಂದ ಎದುರಿಸುವಂತಹ ಸೀತೆಯ ಮನೋಧರ್ಮವು ಸ್ತ್ರೀಯರ ಪಾಲಿಗೆ ದಿವ್ಯಚೇತನವಾಗಿದೆ. ಕಷ್ಟದಲ್ಲೂ ಒಳ್ಳೆಯದನ್ನೇ ಯೋಚಿಸುವ ಸದ್ಭಾವನೆಗಳ ಕ್ಷಮಾಮೂರ್ತಿಯಾದ ಸೀತೆಯು ಸಹನಶೀಲರಕ್ಷಣೆಯೇ ಮುಂದೆ ವಿಜಯದ ಸೋಪಾನವಾಗುತ್ತದೆ. ಉನ್ನತ ಶಿಖರವನ್ನೇರಿದ ಮಹಿಳಾಮಣಿ ಸೀತೆ ಮನನೀಯಳು ಪೂಜನೀಯಳು ಆಗಿದ್ದಾಳೆ. ಇಂದಿನ ಮಹಿಳೆಯರಿಗೆ ಅನ್ಯಾಯವನ್ನು ಮೆಟ್ಟಿ ನಿಂತು ದಿಟ್ಟತನದಿಂದ ಮುನ್ನಡೆಯಲು ಕಾಂತಿಪುಂಜದಂತೆ ದಾರಿದೀಪವಾಗಿದ್ದಾಳೆ.

ವಾಲ್ಮೀಕಿಯವರ ರಾಮಾಯಣದಿಂದ ಪ್ರಭಾವಿತರಾಗಿ ಅನೇಕ ಮಹನೀಯರು ರಾಮಾಯಣಗಳನ್ನು ರಚಿಸಿದ್ದಾರೆ. ಇನ್ನು ಸಂಗೀತ ಕ್ಷೇತ್ರದಲ್ಲೂ ವಾಲ್ಮೀಕಿ ರಾಮಾಯಣದಿಂದಲೇ ಕಥಾರಸವನ್ನು ತುಂಬಿ ಶ್ರೀತ್ಯಾಗರಾಜರು ಮೊದಲಾದವರು ಅನೇಕ ಕೃತಿಗಳನ್ನು ರಚಿಸಿ ನಮ್ಮ ಕಿವಿಗಳಿಗೆ ರಸದೌತಣವನ್ನು ನೀಡಿದ್ದಾರೆ. ವಿವಿಧ ರಂಗಗಳಲ್ಲಿ ರಾಮಾಯಣವನ್ನೇ ಬಳಸುತ್ತಾರೆ. ಮರ್ಯಾದಾಪುರುಷೋತ್ತಮನಾದ ಮಹಾಮಹಿಮಾನ್ವಿತನಾದ ಶ್ರೀರಾಮನನ್ನೂ ಶುಭಸಂಪನ್ನಳಾದ ಸೀತೆಯನ್ನೂ ಜಗತ್ತಿಗೆ ತೋರಿಸಿದ ವಾಲ್ಮೀಕಿಗಳು ಮಹಾತ್ಮರು. ಈ ಗ್ರಂಥವು ಇಲ್ಲದಿದ್ದರೆ ನಮ್ಮ ಬಾಳು ಕುರುಡರಂತೆಯೂ ದೇವರಿಲ್ಲದ ಗುಡಿಯ ರೀತಿಯಲ್ಲಿಯೂ ಇರಬೇಕಾಗಿತ್ತು.

**ವಾಲ್ಮೀಕಿಗಿರಿಸಂಭೂತಾ ರಾಮಸಾಗರಗಾಮಿನೀ ।**
**ಪುನಾತು ಭುವನಂ ಪುಣ್ಯಾ ರಾಮಾಯಣಮಹಾನದೀ ॥**

ಶ್ರೀರಾಮನು ದೇವರು ಮಾತ್ರವೆಂದು ತಿಳಿದು ಪೂಜಾ ಕೈಂಕರ್ಯಗಳು ಹೋಮಹವನಗಳನ್ನು ಮಾಡಿ ಸೀಮಿತಗೊಳಿಸಬಾರದು. ಫಲ–ಪುಷ್ಪ–ಮಂತ್ರಗಳಿಂದ ಸ್ವಲ್ಪಮಟ್ಟಿಗೆ ಸಾತ್ತ್ವಿಕ ವಾತಾವರಣವೇಪಟ್ಟು ಶಾಂತಿ–ಸಮಾಧಾನ ಸಿಗಬಹುದಷ್ಟೆ. ಶ್ರೀರಾಮಾಯಣದ ಪಾತ್ರಗಳ ಮೂಲಕ ನಾವು ಮಾನವೀಯ ಸಂದೇಶಗಳನ್ನು ನಮ್ಮದಾಗಿಸಿಕೊಂಡು ನಡೆದರೇನೇ ಶ್ರೀವಾಲ್ಮೀಕಿಗಳಿಗೆ ನಾವು ಸಲ್ಲಿಸುವ ಕಾಣಿಕೆಯಾಗುತ್ತದೆ ಎಂದು ಹೇಳಿದರೆ ತಪ್ಪಾಗಲಾರದು.

**ಬಾಕ್ಸ್ ವನ್ದೇ ವಾಲ್ಮೀಕಿ ಕೋಕಿಲಮ್**
**ಕೂಜನ್ತಂ ರಾಮರಾಮೇತಿ ಮಧುರಂ ಮಧುರಾಕ್ಷರಮ್ ।**
**ಆರುಹ್ಯ ಕವಿತಾಶಾಖಾಂ ವನ್ದೇ ವಾಲ್ಮೀಕಿಕೋಕಿಲಮ್॥**

ಕವಿತಾವೃಕ್ಷದ ಶಾಖೆಯನ್ನೇರಿ 'ರಾಮ–ರಾಮ' ಎಂಬ ಮಧುರವಾದ ಅಕ್ಷರಗಳನ್ನು ಉಲಿಯುತ್ತಿರುವ ವಾಲ್ಮೀಕಿಯೆಂಬ ಕೋಗಿಲೆಗೆ ನಮಸ್ಕರಿಸುತ್ತೇನೆ.

**ನಮಸ್ತಸ್ಮೈ ಮುನೀಶಾಯ ಶ್ರೀಯುತಾಯ ತಪಸ್ವಿನೇ।**
**ಸ್ತಬ್ಧಜ್ಞಾನಾಧಿವಾಸಾಯ ತಸ್ಮೈ ವಾಲ್ಮೀಕಿಯೇ ನಮಃ॥**
**ಮುನೀಶ್ವರರೂ ಲಕ್ಷ್ಮೀಸಂಪನ್ನರೂ ತಪಸ್ವಿಗಳೂ ಸಮಸ್ತಜ್ಞಾನಗಳ ನೆಲೆಯೂ ಆಗಿರುವ ವಾಲ್ಮೀಕಿಗಳಿಗೆ ನಮಸ್ಕಾರಗಳು.**
**ಯಃ ಪಿಬನ್ಸತತಂ ರಾಮಚರಿತಾಮೃತಸಾಗರಮ್ ।**
**ಅತೃಪ್ತಸಂ ಮುನಿಂ ವನ್ದೇ ಪ್ರಾಚೇತಸಮಕಲ್ಮಷಮ್ ॥**

ನಿರಂತರವಾಗಿ ಅಮೃತಮಯವಾದ ರಾಮಚರಿತೆಯೆಂಬ ಸಾಗರದ ಅಮೃತವನ್ನು ಪಾನಮಾಡುತ್ತಿದ್ದರೂ ಅತೃಪ್ತರಾಗಿರುವ, ಕಲ್ಮಷರಹಿತವಾದ, ಪ್ರಚೇತಸರಾದ ವಾಲ್ಮೀಕಿಗಳಿಗೆ ನಮಸ್ಕಾರಗಳು.

ಮೇಲಿನ ಎಲ್ಲಾ ಶ್ಲೋಕಗಳು ವಾಲ್ಮೀಕಿಯನ್ನು ಹಾಡಿ ಹೊಗಳುತ್ತವೆ. ॐ

# ವಿಜಯದಶಮಿ



ಇಡೀ ರಾಜ್ಯದ ಜನತೆ ಕಾತುರದಿಂದ ಕಾಯುತ್ತಿದ್ದ ನಾಡಹಬ್ಬ ಮೈಸೂರು ದಸರಾ ಸಮೀಪಿಸುತ್ತಿದೆ. ದಸರಾ ಮಹೋತ್ಸವವನ್ನು ಪ್ರತಿಭಾರಿಯಂತೆ ಈ ಭಾ ರಿಯೂ ಕೂಡ ಅದ್ದೂರಿಯಾಗಿ ಆಚರಿಸ ಲಾಗುತ್ತದೆ.

2023ರ ಅಕ್ಟೋಬರ್ 24 ರ ಮಂಗಳವಾರ ಈ ಬಾರಿ ದಸರಾ ವನ್ನು (ವಿಜಯ ದಶಮಿ) ಅದ್ದೂರಿ ಯಾಗಿ ಆಚರಿಸಲಾಗುತ್ತದೆ. ಭಾರತದಲ್ಲಿ ದಸರಾ ಹಿಂದೂ ಧರ್ಮ ದಲ್ಲಿನ ಪ್ರಮುಖ ಹಬ್ಬಗಳಲ್ಲಿ ಇದೂ ಕೂಡ ಒಂದಾಗಿದ್ದು, ಇದನ್ನು ದಸರಾ ಅಥವಾ ವಿಜಯದಶಮಿ ಎಂದು ಕರೆಯ ಲಾಗುತ್ತದೆ. ಈ ಹಬ್ಬವನ್ನು ಕರ್ನಾಟಕ ದಲ್ಲಿ ನಾಡಹಬ್ಬ ವಾಗಿ ಆಚರಿಸಲಾ ಗುತ್ತದೆ. ಈ ಹಬ್ಬಕ್ಕೆ ವಿಶೇಷ ಮಹತ್ವವಿದೆ.

ಸಾಮಾನ್ಯವಾಗಿ ಪ್ರತಿ ವರ್ಷ ಅಕ್ಟೋಬರ್‌ನಲ್ಲಿ ದಸರಾವನ್ನು ಆಚರಿಸಲಾಗುತ್ತದೆ. ಈ ಬಾರಿ 2023ರ ಅಕ್ಟೋಬರ್ 24ರ ಮಂಗಳವಾರ ದಸರಾವನ್ನು ಅದ್ದೂರಿಯಾಗಿ ಆಚರಿಸಲಾ ಗುತ್ತದೆ. ಉತ್ತರ ಭಾರತದಲ್ಲಿ ದುರ್ಗಾ ದೇವಿಯನ್ನು ವಿವಿಧ ರೂಪಗಳಲ್ಲಿ ಪೂಜಿಸಿದರೆ, ದಕ್ಷಿಣ ಭಾರತದಲ್ಲಿ ಅದರಲ್ಲೂ ಪ್ರಮುಖ ವಾಗಿ ಕರ್ನಾಟಕದಲ್ಲಿ ಚಾಮುಂಡೇಶ್ವರಿಯನ್ನು ಪೂಜಿಸಲಾಗುತ್ತದೆ. ಚಾಮುಂಡೇಶ್ವರಿ ಮಹಿಷಾಸುರ ಎಂಬ ರಾಕ್ಷಸನನ್ನು ವಧೆ ಮಾಡಿದ ದಿನವನ್ನಾಗಿ ಆಚರಿಸಲಾಗುತ್ತದೆ ಎಂಬ ಪ್ರತೀತಿ ಇದೆ.





## 9 ದಿನಗಳ ನವರಾತ್ರಿಯ ವೈಶಿಷ್ಟವೇನು?

ದಸರಾ ಹಬ್ಬವನ್ನು ಕೆಡುವಿನ ಮೇಲೆ ಒಳಿತಿನ ವಿಜಯವನ್ನು ಸೂಚಿಸುತ್ತದೆ. ಅಲ್ಲದೆ, ಈ ಹಬ್ಬ ಒಂಬತ್ತು ದಿನಗಳ ಹಬ್ಬವಾಗಿದ್ದು, 2023ರ ಅಕ್ಟೋಬರ್ 15 ರಿಂದ ನವರಾತ್ರಿ ಆರಂಭವಾಗಲಿದೆ. ನವರಾತ್ರಿಯಲ್ಲಿ ಒಂಭತ್ತು ದಿನ ಚಾಮುಂಡೇಶ್ವರಿಯನ್ನು ಪೂಜಿಸಲಾಗುತ್ತದೆ.

ಪೌರಾಣಿಕ ಕಥೆಗಳ ಪ್ರಕಾರ, ಮೈಸೂರನ್ನು ರಾಕ್ಷಸ ಮಹಿಷಾಸುರನು ಆಳುತ್ತಿದ್ದನು. ದೇವತೆಗಳ ಪ್ರಾರ್ಥನೆಯನ್ನು ಕೇಳಿ ಪಾರ್ವತಿ ದೇವಿ ಚಾಮುಂಡೇಶ್ವರಿಯ ಅವತಾರದಲ್ಲಿ ಹುಟ್ಟಿ ಮೈಸೂರಿನ ಚಾಮುಂಡಿ ಬೆಟ್ಟದ ಮೇಲೆ ಮಹಿಷಾಸುರನನ್ನು ಕೊಂದಿದ್ದಾಳೆ, ಆದ್ದರಿಂದ ಬೆಟ್ಟಕ್ಕೆ ಚಾಮುಂಡಿ ಬೆಟ್ಟ ಹಾಗೂ ನಗರಕ್ಕೆ ಮೈಸೂರು ನಗರ ಎಂಬ ಹೆಸರುಗಳು ಬಂದವು ಎಂದು ಹೇಳಲಾಗಿದೆ. ಮಹಿಷಾಸುರನನ್ನು ಕೊಂದ ನಂತರ ಚಾಮುಂಡೇಶ್ವರಿ ಬೆಟ್ಟದ ಮೇಲೆಯೇ ಉಳಿದುಕೊಂಡಳು ಎಂಬ ಕಥೆಗಳು ಇವೆ.

## ಸೀತೆಯನ್ನು ರಕ್ಷಿಸಿಕೊಳ್ಳಲು ರಾವಣನ ವಿರುದ್ಧ ಶ್ರೀರಾಮನ ಯುದ್ಧ

ದಸರಾ ಆಚರಣೆ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿದೆ. ರಾಮಾಯಣದ ಪ್ರಕಾರ, ಸೀತೆಯನ್ನು ರಾವಣ ಅಪಹರಿಸಿರುತ್ತಾನೆ. ಆಗ ಶ್ರೀರಾಮನು ತನ್ನ ಪತ್ನಿ ಸೀತೆ ಮತ್ತು ಸಹೋದರರಾದ ಲಕ್ಷ್ಮಣನನ್ನು ರಾಕ್ಷಸ ರಾಜ ರಾವಣನಿಂದ ರಕ್ಷಿಸಿಕೊಳ್ಳಲು ರಾವಣನ ವಿರುದ್ಧ ಹೋರಾಡುತ್ತಾನೆ. 9 ದಿನಗಳ ಕಾಲ ಯುದ್ಧ ನಡೆಯುತ್ತದೆ. ಅಂತಿಮವಾಗಿ 10ನೇ ದಿನ ಶ್ರೀರಾಮ ರಾವಣನನ್ನು ಸೋಲಿಸುತ್ತಾನೆ. ಇದನ್ನೇ ದಸರಾ ಎಂದು ಆಚರಿಸಲಾಗುತ್ತದೆ ಎಂದು ಕಥೆಗಳಲ್ಲಿ ಹೇಳಲಾಗಿದೆ.

ಶ್ರೀರಾಮನ ವಿಜಯವು ದುಷ್ಟ ಶಕ್ತಿಗಳ ಮೇಲಿನ ವಿಜಯದ ಸಂಕೇತವಾಗಿದೆ. ರಾಮನು ಅಯೋಧ್ಯೆಗೆ ಹಿಂದಿರುಗಿದ ಕಥೆಯನ್ನು ಭಾರತದ ದಸರಾ ಆಚರಣೆಗಳಲ್ಲಿ ವಿವಿಧ ಸಾಂಸ್ಕೃತಿಕ ದೃಷ್ಟಿಕೋನಗಳಲ್ಲಿ ಚಿತ್ರಿಸಲಾಗಿದೆ.

ಇನ್ನೊಂದು ಪೌರಾಣಿಕ ಕಥೆಯಲ್ಲಿ ಎಮ್ಮೆ ತಲೆಯ ದೈತ್ಯನಾದ ರಾಕ್ಷಸ ಮಹಿಷಾಸುರನ ವಿರುದ್ಧ ದುರ್ಗಾ ದೇವಿಯ ಯುದ್ಧದ ಕಥೆಯಾಗಿದೆ. ದುರ್ಗಾ ದೇವಿ ಒಂಬತ್ತು ರಾತ್ರಿ ಮಹಿಷಾಸುರನೊಂದಿಗೆ ಹೋರಾಡಿ ಅಂತಿಮವಾಗಿ 10ನೇ ದಿನ ಗೆಲುವು ಸಾಧಿಸುತ್ತಾಳೆ. ಆ ಹತ್ತನೇ ದಿನವನ್ನು ವಿಜಯದಶಮಿ ಅಂತ ಇಂದಿಗೂ ಆಚರಿಸಲಾಗುತ್ತಿದೆ. ಈ ಹಬ್ಬವನ್ನ ಕೆಡುಕಿನ ಮೇಲೆ ಒಳಿತಿನ ವಿಜಯ, ಕತ್ತಲೆಯ ಮೇಲಿನ ಬೆಳಕಿನ ವಿಜಯ ಅಂತಲೂ ವರ್ಣಿಸಲಾಗಿದೆ.

ದಸರಾ ಹಬ್ಬವು ಕಲೆ, ಸಂಗೀತ, ನೃತ್ಯ ಹಾಗೂ ನಾಟಕದ ವಿವಿಧ ಪ್ರಕಾರಗಳ ಮೂಲಕ ಭಾರತದ ಶ್ರೀಮಂತ ಪರಂಪರೆ ಹಾಗೂ ಸಂಪ್ರದಾಯಗಳನ್ನು ಬಿಂಬಿಸುತ್ತದೆ. ಈ ಹಬ್ಬವು ಎಲ್ಲಾ ಸಮುದಾಯಗಳನ್ನು ಒಟ್ಟುಗೂಡಿಸುತ್ತದೆ. ಜನರಲ್ಲಿ ಏಕತೆ, ಸೌಹಾರ್ದತೆಯ ಭಾವನೆಯನ್ನು ಬೆಳೆಸುತ್ತದೆ, ದೇಶಾದ್ಯಂತ ಹಬ್ಬವನ್ನು ಒಂದೇ ದಿನ ಆಚರಿಸಿದರೂ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ॐ

**ಸಮೃದ್ಧಿ ಸುಜ್ಞಾನ**

ಮನದ ಮಾತನ್ನು ಅರಿಯುವ ತಾಯಿ
ಭವಿಷ್ಯವನ್ನು ಬಲ್ಲ ತಂದೆಯಂತಹ ಶ್ರೇಷ್ಠ ಜ್ಯೋತಿಷ್ಯರು
ಈ ಜಗತ್ತಿನಲ್ಲಿ ಬೇರೆ ಯಾರೂ ಇಲ್ಲ.



# ಆಯುಧ ಪೂಜೆ

ಆಯುಧ ಪೂಜೆ ಇದು ಹಿಂದೂ ಆಚರಣೆಯಾಗಿದ್ದು, ಇದು 15 ದಿನಗಳ (ಹಿಂದೂ ಕ್ಯಾಲೆಂಡರ್‌ನ ಪ್ರಕಾರ) ಚಂದ್ರನ ಚಕ್ರದ ಪ್ರಕಾಶಮಾನವಾದ ಅರ್ಧದ ಒಂಬತ್ತನೇ ದಿನದಂದು ಬರುತ್ತದೆ. ಸೆಪ್ಟೆಂಬರ್/ಅಕ್ಟೋಬರ್ ತಿಂಗಳು, ಜನಪ್ರಿಯವಾಗಿ ನವರಾತ್ರಿ ಹಬ್ಬದ ಭಾಗವಾಗಿದೆ. ನವರಾತ್ರಿ ಹಬ್ಬವನ್ನು ದೇಶದಾದ್ಯಂತ ಆಚರಿಸಲಾಗುತ್ತದೆ, ಆಯುಧ ಪೂಜೆ ಎಂದು ವ್ಯಾಪಕವಾಗಿ ಗುರುತಿಸಲಾದ ಹಬ್ಬವು ಭಾರತದಾದ್ಯಂತ ಪೂಜೆ ಮತ್ತು ಆಚರಣೆಗಳಲ್ಲಿ ಸ್ವಲ್ಪ ವ್ಯತ್ಯಾಸಗಳನ್ನು ಹೊಂದಿದೆ. ಆಯುಧಪೂಜೆಯಂದು ದುರ್ಗಾ ಮಾತೆಯ ಮೂರ್ತಿಯನ್ನು ಪೂಜಿಸಲಾಗುತ್ತದೆ ಎಂದೂ, ಸರಸ್ವತಿ ಪೂಜೆ ಎಂದೂ ಆಚರಿಸಲಾಗುತ್ತದೆ

ಸರಸ್ವತಿ ಪೂಜೆಯನ್ನು (ಬುದ್ಧಿವಂತಿಕೆ ಮತ್ತು ಕಲಿಕೆಯ ದೇವತೆ) ಸಹ ಆಯುಧ ಪೂಜೆಯ ಜೊತೆಯಲ್ಲಿ ನಡೆಸಲಾಗುತ್ತದೆ. ಅವಳ ಆಶೀರ್ವಾದಕ್ಕಾಗಿ ಪುಸ್ತಕಗಳು ಮತ್ತು ಡ್ರಮ್ಮಗಳನ್ನು ಇರಿಸಲಾಗುತ್ತದೆ.

ಆಯುಧ ಪೂಜೆಯ ಸಮಯದಲ್ಲಿ ಪೂಜಿಸುವ ಪ್ರಮುಖ ದೇವತೆಗಳೆಂದರೆ ಸರಸ್ವತಿ, ಕಲಿಕೆಯ ದೇವತೆ, ಲಕ್ಷ್ಮಿ, ಸಮೃದ್ಧಿಯ ದೇವತೆ ಮತ್ತು ಪಾರ್ವತಿ, ಶಕ್ತಿ ದೇವತೆ. ಈ ಸಂದರ್ಭದಲ್ಲಿ, ಸೈನಿಕನ ಆಯುಧಗಳು, ಕುಶಲಕರ್ಮಿಗಳ ಉಪಕರಣಗಳು ಮತ್ತು ವಿದ್ಯಾರ್ಥಿಯ ಪುಸ್ತಕಗಳಂತಹ ವಿವಿಧ ವೃತ್ತಿಗಳು ಮತ್ತು ಜೀವನದ ಹಂತಗಳ ಜನರು ಬಳಸುವ ಉಪಕರಣಗಳನ್ನು ಸಾಂಪ್ರದಾಯಿಕವಾಗಿ ಪೂಜಿಸಲಾಗುತ್ತದೆ. ಮಹಿಷಾಸುರನ ಮೇಲೆ ದುರ್ಗಾ ಮಾತೆಯ ವಿಜಯವನ್ನು ಅಥವಾ ರಾಮನು ಲಂಕಾವನ್ನು ವಶಪಡಿಸಿಕೊಂಡದ್ದನ್ನು ಸ್ಮರಿಸುವುದು ಈ ಸಂದರ್ಭದ ಧಾರ್ಮಿಕ ಮಹತ್ವವಾಗಿದೆ. ದಕ್ಷಿಣ ಭಾರತದಲ್ಲಿ, ಈ ಸಂದರ್ಭವನ್ನು ಪ್ರಾಥಮಿಕವಾಗಿ ಸರಸ್ವತಿಗೆ ಸಮರ್ಪಿಸಲಾಗಿದೆ, ಅಜ್ಞಾನದ ಮೇಲೆ ಜ್ಞಾನದ ವಿಜಯವನ್ನು ಸೂಚಿಸಲು ಪುಸ್ತಕಗಳು, ಪೆನ್ನುಗಳು, ಪೆನ್ಸಿಲ್‌ಗಳು, ಸಂಗೀತ ಉಪಕರಣಗಳು ಮತ್ತು ಇತರ ಸಲಕರಣೆಗಳಂತಹ ಶೈಕ್ಷಣಿಕ ಸಾಮಾಗ್ರಿಗಳನ್ನು ಪೂಜಿಸಲಾಗುತ್ತದೆ.

ಸಮಕಾಲೀನ ಯುಗದಲ್ಲಿ, ಈ ಸಂದರ್ಭದ ಸಂಪ್ರದಾಯವನ್ನು ಕಂಪ್ಯೂಟರ್‌ಗಳು ಮತ್ತು ಟೈಪ್‌ರೈಟರ್‌ಗಳ ಪವಿತ್ರೀಕರಣದಿಂದ ಉಳಿಸಿಕೊಳ್ಳಲಾಗಿದೆ, ಹಿಂದೆ ಯುದ್ಧದ ಆಯುಧಗಳಿಗಾಗಿ ಅಭ್ಯಾಸ ಮಾಡಿದ ರೀತಿಯಲ್ಲಿಯೇ ನೇಗಿಲು, ಕತ್ತಿ ಮತ್ತು ಕಠಾರಿಗಳು, ಕೃಷಿಗಾಗಿ ಸಾಂಪ್ರದಾಯಿಕವಾಗಿ ಬಳಸುವ ಉಪಕರಣಗಳು ಮತ್ತು "ಕರಣಿ" ಅಥವಾ "ಲೇಖನಿ" ಯಂತಹ ಶಾಸನ ಬರವಣಿಗೆಗಳನ್ನು ಪೂಜಿಸಲಾಗುತ್ತದೆ.

ಇಲ್ಲಿ ಎರಡು ಹಿಂದೂ ದಂತಕಥೆಗಳು ಈ ಹಬ್ಬಕ್ಕೆ ಸಂಬಂಧಿಸಿವೆ. ಮೈಸೂರು ಮಹಾರಾಜರು ಸಾಂಕೇತಿಕವಾಗಿ ಅಭ್ಯಾಸ ಮಾಡಿದ ಜನಪ್ರಿಯ ಒಂದು ದಂತಕಥೆಯನ್ನು ಸೂಚಿಸುತ್ತದೆ. ವಿಜಯದಶಮಿ ದಿನದಂದು ಐದು ಪಾಂಡವ ಸಹೋದರರಲ್ಲಿ ಮೂರನೆಯವನಾದ ಅರ್ಜುನನು ಬಲವಂತದ ವನವಾಸವನ್ನು ಮುಂದುವರಿಸುವ ಮೊದಲು ತನ್ನ ಯುದ್ಧದ ಆಯುಧಗಳನ್ನು ಶಮೀ ವೃಕ್ಷದ ರಂಧ್ರದಿಂದ ಹಿಂಪಡೆದನು ಎಂದು ಹೇಳಲಾಗುತ್ತದೆ. ಕೌರವರ ವಿರುದ್ಧ ಯುದ್ಧದ ಹಾದಿಯನ್ನು ಪ್ರಾರಂಭಿಸುವ ಮೊದಲು ಒಂದು ವರ್ಷದ ಅಜ್ಞಾತವಾಸ್ (ಅಜ್ಞಾತವಾಸ) ಸೇರಿದಂತೆ 13 ವರ್ಷಗಳ ತನ್ನ ವನವಾಸವನ್ನು (ವನವಾಸ ಅವಧಿ) ಪೂರ್ಣಗೊಳಿಸಿದ ನಂತರ ಅವನು ತನ್ನ ಆಯುಧಗಳನ್ನು ಹಿಂಪಡೆದನು. ಕುರುಕ್ಷೇತ್ರ ಯುದ್ಧದಲ್ಲಿ ಅದು ಸಂಭವಿಸಿತು, ಅರ್ಜುನನು ವಿಜಯಶಾಲಿಯಾದನು. ಪಾಂಡವರು ವಿಜಯದಶಮಿ ದಿನದಂದು ಹಿಂದಿರುಗಿದರು ಮತ್ತು ಅಂದಿನಿಂದ ಈ ದಿನವು ಯಾವುದೇ ಹೊಸ ಉದ್ಯಮವನ್ನು ಪ್ರಾರಂಭಿಸಲು ಮಂಗಳಕರವೆಂದು ನಂಬಲಾಗಿದೆ. ಕರ್ನಾಟಕದಲ್ಲಿ, ಆಯುಧಪೂಜೆಯನ್ನು ಮೂಲ ಹಬ್ಬದ ದಿನವಾದ ವಿಜಯದಶಮಿ (ಆಯುಧಪೂಜಾ ದಿನ) ಒಂದು ದಿನದ ಮೊದಲು ಸಾರ್ವಜನಿಕರಿಂದ ಆಚರಿಸಲಾಗುತ್ತದೆ.

ಮತ್ತೊಂದು ದಂತಕಥೆಯು ಯಜ್ಞ ಅಥವಾ ಧಾರ್ಮಿಕ ತ್ಯಾಗ ಅಥವಾ ಆಯುಧ ಪೂಜೆಯ ಭಾಗವಾಗಿ (ಮಳೆಗಾಲದ ನಂತರ ಪ್ರಾರಂಭವಾಗುವ ನವರಾತ್ರಿ ಉತ್ಸವದ ಉಪ-ವಿಧಾನವೆಂದು ಪರಿಗಣಿಸಲಾಗಿದೆ ಮತ್ತು ಮಿಲಿಟರಿ ಕಾರ್ಯಾಚರಣೆಯನ್ನು ಪ್ರಾರಂಭಿಸುವ ಮೊದಲು ಪ್ರಾಯಶ್ಚಿತ್ತ ಮಾಡಲಾಗುತ್ತದೆ) ಈ ಪದ್ಧತಿ ಇನ್ನು ಪ್ರಚಲಿತದಲ್ಲಿಲ್ಲ. ಹಿಂದಿನ ಅಭ್ಯಾಸವನ್ನು ಮಹಾಭಾರತ ಮಹಾಕಾವ್ಯದ ತಮಿಳು ಆವೃತ್ತಿಯಲ್ಲಿ ವಿವರಿಸಲಾಗಿದೆ. ತಮಿಳುನಾಡಿಗಿಂತಲೂ ಪ್ರಚಲಿತವಿರುವ ಈ ಆಚರಣೆಯಲ್ಲಿ 'ಕಾಳಪಲ್ಲಿ'ಯು "ಯುದ್ಧಭೂಮಿಗೆ ಬಲಿದಾನವಾಗಿತ್ತು. ಕೌರವ ಮುಖ್ಯಸ್ಥ ದುರ್ಯೋಧನನಿಗೆ ಜ್ಯೋತಿಷಿ (ಸಹದೇವ) ಸಲಹೆ ನೀಡಿದ್ದು, ಕುರುಕ್ಷೇತ್ರ ಯುದ್ಧ ಪ್ರಾರಂಭವಾಗುವ ಒಂದು ದಿನ ಮುಂಚಿತವಾಗಿ ಅಮವಾಸ್ಯೆಯ ದಿನ  ಕಲಾಪಲ್ಲಿ ಪ್ರದರ್ಶನಕ್ಕೆ ಸೂಕ್ತ ಸಮಯ. ಐರಾವಣ (ಅರ್ಜುನನ ಮಗ) ಸಹ ಅರಾವಣನೆಂದು ಉಚ್ಚರಿಸಲಾಗುತ್ತದೆ, ತ್ಯಾಗಕ್ಕೆ ಬಲಿಯಾಗಲು ಒಪ್ಪಿಕೊಂಡನು. ಆದರೆ ಪಾಂಡವರ ಹಿತಚಿಂತಕನಾದ ಕೃಷ್ಣನು ತೊಂದರೆಯನ್ನು ಅನುಭವಿಸಿದನು ಮತ್ತು ಅವನು ಐರಾವಣನನ್ನು ಪಾಂಡವರ ಮತ್ತು ಕೌರವರ ಪ್ರತಿನಿಧಿಯಾಗಲು ಮನವೊಲಿಸುವ ಯೋಜನೆಯನ್ನು ರೂಪಿಸಿದನು. ಆಯುಧಪೂಜೆಯ ಭಾಗವಾಗಿ ಕಾಳಿ ದೇವಿಗೆ ಅರಾವಣನನ್ನು ಬಲಿಕೊಡುವಂತೆ ಪಾಂಡವರಲ್ಲಿ ಹಿರಿಯನಾದ ಯುಧಿಷ್ಠಿರನಿಗೆ ಕೃಷ್ಣ ಸೂಚಿಸಿದ್ದ. ಈ ತ್ಯಾಗದ ನಂತರ ಕಾಳಿಯು ಪಾಂಡವರಿಗೆ ಕುರುಕ್ಷೇತ್ರ ಯುದ್ಧದಲ್ಲಿ ವಿಜಯವನ್ನು ನೀಡುವಂತೆ ಆಶೀರ್ವದಿಸಿದ್ದಳು.

ಈ ಆಯುಧ ಪೂಜೆಯಂದು ವೃತ್ತಿಯ ಎಲ್ಲಾ ಉಪಕರಣಗಳನ್ನು ಮೊದಲು ಸ್ವಚ್ಛಗೊಳಿಸಲಾಗುತ್ತದೆ. ಎಲ್ಲಾ ಉಪಕರಣಗಳು, ಯಂತ್ರಗಳು, ವಾಹನಗಳು ಮತ್ತು ಇತರ ಸಾಧನಗಳನ್ನು ಸ್ವಚ್ಛ ಮಾಡಿ ನಂತರ ಬಣ್ಣ ಬಳಿಯಲಾಗುತ್ತದೆ ಅಥವಾ ಚೆನ್ನಾಗಿ ಪಾಲಿಶ್ ಮಾಡಲಾಗುತ್ತದೆ ನಂತರ ಅವುಗಳಿಗೆ ಅರಿಶಿನ ಪೇಸ್ಟ್, ಶ್ರೀಗಂಧದ ಪೇಸ್ಟ್ (ತಿಲಕ (ಚಿಹ್ನೆ ಅಥವಾ ಗುರುತು) ಮತ್ತು ಕುಂಕುಮ (ವರ್ಮಿಲಿಯನ್) ದಿಂದ ಹೊದಿಸಲಾಗುತ್ತದೆ. ಪೂಜೆಯ ದಿನದ ಹಿಂದೆ, ಅವುಗಳನ್ನು ಗೊತ್ತುಪಡಿಸಿದ ವೇದಿಕೆಯಲ್ಲಿ ಇರಿಸಲಾಗುತ್ತದೆ



ಮತ್ತು ಹೂವಿನಿಂದ ಅಲಂಕರಿಸಲಾಗುತ್ತದೆ, ಯುದ್ಧದ ಆಯುಧಗಳ ಸಂದರ್ಭದಲ್ಲಿ, ಅವುಗಳನ್ನು ಸ್ವಚ್ಛಗೊಳಿಸಲಾಗುತ್ತದೆ, ಹೂವು ಮತ್ತು ತಿಲಕದಿಂದ ಅಲಂಕರಿಸಲಾಗುತ್ತದೆ ಹಾಗೂ ಗೋಡೆಯ ಪಕ್ಕದಲ್ಲಿ ಒಂದು ಸಾಲಿನಲ್ಲಿ ಇರಿಸಲಾಗುತ್ತದೆ. ನವಮಿ ದಿನದಂದು ಪೂಜೆಯ ಬೆಳಿಗ್ಗೆ, ಅವುಗಳಿಗೆ ಸರಸ್ವತಿ, ಲಕ್ಷ್ಮಿ ಮತ್ತು ಪಾರ್ವತಿಯ ಚಿತ್ರಗಳೊಂದಿಗೆ ಪೂಜಿಸಲಾಗುತ್ತದೆ. ಪೂಜೆಗಾಗಿ ಪುಸ್ತಕಗಳು ಮತ್ತು ಸಂಗೀತ ವಾದ್ಯಗಳನ್ನು ಸಹ ಪೀಠದ ಮೇಲೆ ಇರಿಸಲಾಗುತ್ತದೆ.

ಕರ್ನಾಟಕದಲ್ಲಿ, ಮೈಸೂರು ಮಹಾರಾಜರ ಹಿಂದಿನ ಮೈಸೂರು ರಾಜ್ಯ, ಪ್ರಾಚೀನ ನವರಾತ್ರಿ ಉತ್ಸವವು ಅರಮನೆಯ ಆವರಣದಲ್ಲಿ ಕುಟುಂಬದ ಸಂಪ್ರದಾಯದಂತೆ ಪ್ರಾರಂಭವಾಯಿತು. ನವರಾತ್ರಿಯ ಅಂಗವಾಗಿ ರಾಜಮನೆತನದವರು ಅರಮನೆ ಮೈದಾನದಲ್ಲಿ ಆಯುಧ ಪೂಜೆಯನ್ನು ಮಾಡುತ್ತಾರೆ. ಆಚರಿಸಲಾಗುವ ಆಚರಣೆಗಳು ಮೊದಲು ಮಹಾನವಮಿ ದಿನದಂದು (ಒಂಬತ್ತನೇ ದಿನ) ಆಯುಧಗಳನ್ನು ಪೂಜಿಸುವುದು, ನಂತರ "ಕೂಷ್ಮಾಂಡ" (ಸಂಸ್ಕೃತದಲ್ಲಿ ಕುಂಬಳಕಾಯಿ) – ಅರಮನೆ ಮೈದಾನದಲ್ಲಿ ಕುಂಬಳಕಾಯಿಯನ್ನು ಒಡೆಯುವ ಸಂಪ್ರದಾಯ. ಇದರ ನಂತರ, ಆಯುಧಗಳನ್ನು ಚಿನ್ನದ ಪಲ್ಲಕ್ಕಿಯಲ್ಲಿ ಭುವನೇಶ್ವರಿ ದೇವಸ್ಥಾನಕ್ಕೆ ಪೂಜೆಗಾಗಿ ಕೊಂಡೊಯ್ಯಲಾಗುತ್ತದೆ. ವಿಜಯನಗರ ಸಾಮ್ರಾಜ್ಯದಲ್ಲಿ ಹಬ್ಬದ ಸಂಪ್ರದಾಯವನ್ನು ಗುರುತಿಸಲಾಗಿದೆ (ಕ್ರಿ.ಶ. 1336 ರಿಂದ ಕ್ರಿ.ಶ. 1565) ಇದು ನಾಡ ಹಬ್ಬ (ಅಥವಾ ಜನರ ಹಬ್ಬ) ವಿಜಯನಗರದ ದೊರೆಗೆ ವೈಸ್‌ರಾಯ್ ಆಗಿದ್ದ ರಾಜ ಒಡೆಯರ್ (1578–1617) ಮೈಸೂರಿನಲ್ಲಿ ಅಧಿಕಾರದ ಗದ್ದುಗೆಯೊಂದಿಗೆ, ನವರಾತ್ರಿ ಉತ್ಸವವನ್ನು ಆಚರಿಸುವ ವಿಜಯನಗರ ಪದ್ಧತಿಯನ್ನು ಕ್ರಿ.ಶ. 1610 ರಲ್ಲಿ ಪುನಃ ಪರಿಚಯಿಸಿದರು. ಒಂಬತ್ತು ದಿನಗಳ ದರ್ಬಾರ್‌ನ ನಂತರ ಮಹಾರಾಜರು ಅರಮನೆಯ ಆವರಣದಲ್ಲಿರುವ ದೇವಾಲಯದಲ್ಲಿ ಪೂಜೆಯನ್ನು ಮಾಡುತ್ತಾರೆ, ನಂತರ ಮೈಸೂರು ನಗರದ ಪ್ರಮುಖ ರಸ್ತೆಗಳ ಮೂಲಕ ಬನ್ನಿಮಂಟಪಕ್ಕೆ ಕಾಪರ್ಸನ್ ಆನೆಯ ಮೇಲೆ ಭವ್ಯವಾದ ಮೆರವಣಿಗೆಯನ್ನು ನಡೆಸಲಾಗುತ್ತದೆ. ಬನ್ನಿಮಂಟಪವು ಮಹಾರಾಜರು ಸಾಂಪ್ರದಾಯಿಕ ಶಮಿ ಅಥವಾ ಬನ್ನಿ ಮರವನ್ನು ಪೂಜಿಸುವ ಸ್ಥಳವಾಗಿದೆ. ಈ ಮರದ ದಂತಕಥೆಯನ್ನು ಅರ್ಜುನ ಮಹಾಭಾರತದ ದಂತಕಥೆಯಲ್ಲಿ ಗುರುತಿಸಲಾಗಿದೆ (ಅಲ್ಲಿ ಅವನು ತನ್ನ ಯುದ್ಧದ ಆಯುಧಗಳನ್ನು ಮರೆಮಾಡಿದ್ದನು). ಶಮಿ ವೃಕ್ಷದ ಪೂಜೆಯ ಮಹತ್ವವು ಅಪೇಕ್ಷಿತ ಆವಾಹನೆಗಳಲ್ಲಿ (ಯುದ್ಧ ಅಭಿಯಾನಗಳನ್ನು ಒಳಗೊಂಡಂತೆ) ಯಶಸ್ಸಿಗೆ ಮರದ ಆಶೀರ್ವಾದವನ್ನು ಪಡೆಯುವುದು (ರಾಮನು ಸಹ ಪೂಜಿಸಿದ್ದಾನೆಂದು ಹೇಳಲಾಗುತ್ತದೆ). ಈ ಹಬ್ಬವನ್ನು ರಾಜ್ಯದಾದ್ಯಂತ, ಎಲ್ಲಾ ಹಳ್ಳಿಗಳಲ್ಲಿಯೂ ಸಹ ಬಹಳ ಸಡಗರದಿಂದ ಆಚರಿಸಲಾಗುತ್ತದೆ. ಗ್ರಾಮೀಣ ಭಾಗದಲ್ಲಿ, ಪ್ರತಿ ಗ್ರಾಮ ಮತ್ತು ಸಮುದಾಯದವರು ಈ ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಾರೆ ಆದರೆ ಪೂಜೆಗಳನ್ನು ಮಾಡಲು ಯಾವ ಸಮುದಾಯಕ್ಕೆ ಮೊದಲ ಹಕ್ಕಿದೆ ಎಂದು ಹಲವಾರು ಸಂದರ್ಭಗಳಲ್ಲಿ ಘರ್ಷಣೆಗಳು ನಡೆದಿವೆ. ಸಾಮಾನ್ಯವಾಗಿ, ಹಳ್ಳಿಗಳಲ್ಲಿ ಆಯುಧ ಪೂಜೆಯು ಕುರಿಗಳ ಬಲಿಯೊಂದಿಗೆ ಪ್ರಾರಂಭವಾಗುತ್ತದೆ ಮತ್ತು ಎತ್ತಿನ ಬಂಡಿಗಳಿಗೆ ಕುರಿಗಳ ರಕ್ತವನ್ನು ಹೊದಿಸಲಾಗುತ್ತದೆ. ॐ

**ಸಂಪ್ರೀತಿ ಸುಘೋಷ**



**ಯಾರ ಹೃದಯವು
ಕರುಣೆಯಿಂದ ತುಂಬಿದೆಯೋ
ಅವರು ಮಾತ್ರ ದುಃಖಿತರ ಸೇವೆ
ಮಾಡಬಲ್ಲರು, ನತದೃಷ್ಟರನ್ನು
ಮೇಲೆತ್ತುವ ಕೈಂಕರ್ಯದಲ್ಲಿ
ತೊಡಗಿಕೊಳ್ಳುವರು**

**ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿ**

# ಮಧುಮೇಹ (ಸಕ್ಕರೆ ಕಾಯಿಲೆ) ದ ಬಗ್ಗೆ ಜನಸಾಮಾನ್ಯರು ತಿಳಿಯಬೇಕಾದುದೇನು?

ಡಾ. ಅಮೂಲ್ಯ ಎನ್, ಸಮುದಾಯ ವೈದ್ಯ ಶಾಸ್ತ್ರ ವಿಭಾಗ




ಮಧುಮೇಹ ಅಥವಾ ಸಕ್ಕರೆ ಕಾಯಿಲೆ (ಡಯಾಬಿಟಿಸ್), ಒಂದು ದೀರ್ಘಕಾಲಿಕ ಆರೋಗ್ಯ ಸಮಸ್ಯೆ ಆಧುನಿಕತೆಯಿಂದ ಬದಲಾಗುತ್ತಿರುವ ನಮ್ಮ ಜೀವನ ಶೈಲಿಯಿಂದ ಈ ಕಾಯಿಲೆ ದಿನೇ ದಿನೇ ಹೆಚ್ಚುತ್ತಿದೆ.

ನಮ್ಮ ದೇಶದ ಶೇಕಡ 9.6 ರಷ್ಟು ಜನರಲ್ಲಿ ಮಧುಮೇಹವಿದೆ. ಭಾರತವು 2030 ನೇ ಇಸವಿ ಅಷ್ಟರಲ್ಲಿ ಚೀನಾ ದೇಶವನ್ನು ಹಿಂದಿಕ್ಕಿ ಜಗತ್ತಿನ ಮಧುಮೇಹ ರಾಜಧಾನಿಯಾಗುವತ್ತ ಕಡೆ ಸಾಗಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

**ಮಧುಮೇಹ ಎಂದರೇನು?**


ನಮ್ಮ ರಕ್ತದಲ್ಲಿರುವ ಸಕ್ಕರೆಯನ್ನು ಮೇಧೋಜ್ಜೀರಕ ಗ್ರಂಥಿಯಿಂದ ಉತ್ಪಾದನೆಯಾಗುವ ಇನ್ಸುಲಿನ್ ಎಂಬ ಹಾರ್ಮೋನ್ ನಿಯಂತ್ರಿಸುತ್ತದೆ. ದೇಹದ ಎಲ್ಲಾ ಜೀವಕೋಶಗಳು ಸಕ್ಕರೆಯನ್ನು ಬಳಸಿಕೊಳ್ಳಲು ಇನ್ಸುಲಿನ್ ಸಹಾಯ ಮಾಡುತ್ತದೆ. ದೇಹದಲ್ಲಿರುವ ಇನ್ಸುಲಿನ್ ಉತ್ಪಾದನೆ ಕಡಿಮೆಯಾದಾಗ ಅಥವಾ ಇನ್ಸುಲಿನ್‌ಗೆ ಪ್ರತಿರೋಧ ಉಂಟಾದಾಗ ರಕ್ತದಲ್ಲಿನ ಸಕ್ಕರೆ ಪ್ರಮಾಣ ಹೆಚ್ಚಾಗಿ ಮಧುಮೇಹ ಕಂಡುಬರುತ್ತದೆ.

**ಮಧುಮೇಹದಲ್ಲಿ ಎರಡು ವಿಧ**

1. ಟೈಪ್ 1 (ಇನ್ಸುಲಿನ್ ಅವಲಂಬಿತ): ಇದು ಇನ್ಸುಲಿನ್ ಕೊರತೆಯಿಂದ ಉಂಟಾಗುತ್ತದೆ. ಇದು ಚಿಕ್ಕ ವಯಸ್ಸಿನವರಲ್ಲಿ ಕಾಣಿಸಿಕೊಳ್ಳುತ್ತದೆ.
2. ಟೈಪ್ 2 (ಇನ್ಸುಲಿನ್ ಪ್ರತಿರೋಧ): ಇನ್ಸುಲಿನ್‌ಗೆ ಜೀವಕೋಶಗಳು ಸ್ಪಂದಿಸದಿದ್ದಾಗ ಈ ವಿಧ ಉಂಟಾಗುತ್ತದೆ. 40 ವರ್ಷ ಮೇಲ್ಪಟ್ಟವರಲ್ಲಿ ಕಾಣಿಸಿಕೊಳ್ಳುತ್ತದೆ.
3. ಗರ್ಭಾವಸ್ಥೆಯಲ್ಲಿಯೂ ಕೂಡ ಮಧುಮೇಹ ಕಾಣಿಸಿಕೊಳ್ಳಬಹುದು

**ಮಧುಮೇಹದ ಲಕ್ಷಣಗಳು:**

– ಅತಿಯಾಗಿ ಬಾಯಾರಿಕೆಯಾಗುವುದು
– ಹೆಚ್ಚು ಬಾರಿ ಮೂತ್ರ ವಿಸರ್ಜನೆ ಮಾಡುವುದು
– ಹೆಚ್ಚು ಹಸಿವಾಗುವುದು
– ತೂಕ ಇಳಿಯುವಿಕೆ
– ಸುಸ್ತು, ಆಯಾಸ
– ದೀರ್ಘಕಾಲಿಕ ಮಾಗದ ಗಾಯ/ಹುಣ್ಣು
– ಕೈ ಕಾಲು ಜುಮ್ ಎನಿಸುವುದು.



ಆದರೆ ಕೆಲವರಲ್ಲಿ ಈ ಯಾವುದೇ ಲಕ್ಷಣಗಳು ಕಂಡು ಬರದೆ ಮಧುಮೇಹದ ದೀರ್ಘಕಾಲಿಕ ಪರಿಣಾಮಗಳಾದ ಮೂತ್ರಪಿಂಡ ವೈಫಲ್ಯ, ಲಕ್ವ, ದೃಷ್ಟಿಹೀನತೆ, ಹೃದಯಘಾತ, ಗ್ಯಾಂಗ್ರಿನ್, ರಕ್ತನಾಳಗಳ ಸಮಸ್ಯೆಗಳೇ ಮೊದಲ ರೋಗ ಲಕ್ಷಣವಾಗಿ ಕಂಡುಬರಬಹುದು.

**ಮಧುಮೇಹ ಯಾರಲ್ಲಿ ಹೆಚ್ಚು ಕಂಡು ಬರುತ್ತದೆ?**

ಬೊಜ್ಜು, ಸ್ಥೂಲಕಾಯವಿರುವವರಲ್ಲಿ, ದೈಹಿಕ ಚಟುವಟಿಕೆ ಇಲ್ಲದಿರುವವರಲ್ಲಿ, ಹೆಚ್ಚಾಗಿ ಮದ್ಯಪಾನ ಸೇವಿಸುವವರಲ್ಲಿ, ಕುಟುಂಬದ ಬೇರೆ ಸದಸ್ಯರಿಗೆ ಮಧುಮೇಹವಿದ್ದಾಗ ಈ ಸಕ್ಕರೆ ಕಾಯಿಲೆ ಹೆಚ್ಚಾಗಿ ಕಂಡುಬರುತ್ತದೆ.

**ಮಧುಮೇಹ ನಿರ್ವಹಣೆ**

ರೋಗಿಗಳು ನಿಯಮಿತವಾಗಿ ವೈದ್ಯರ ಭೇಟಿ ಮತ್ತು ಅಗತ್ಯ ಪರೀಕ್ಷೆಗಳನ್ನು ಮಾಡಿಸಿಕೊಳ್ಳಬೇಕು. ವೈದ್ಯರು ಸೂಚಿಸಿದ ಔಷಧಿಗಳನ್ನು (ಮಾತ್ರೆ ಅಥವಾ ಇನ್ಸುಲಿನ್ ಇಂಜೆಕ್ಷನ್) ಮತ್ತು ಅವರು ನೀಡಿದ ಸಲಹೆಗಳನ್ನು ಅನುಸರಿಸಬೇಕು, ಯಾವುದೇ ಕಾರಣಕ್ಕೂ ವೈದ್ಯರನ್ನು ಸಂಪರ್ಕಿಸದೆ ಔಷಧಿಗಳ ಸೇವನೆಯನ್ನು ನಿಲ್ಲಿಸಬಾರದು ಸಕ್ಕರೆ ಪ್ರಮಾಣ, ರಕ್ತದೊತ್ತಡ, ಬೊಜ್ಜಿನ ಪ್ರಮಾಣ, ದೃಷ್ಟಿ ಪರೀಕ್ಷೆ ಇಂತಹವನ್ನು ವೈದ್ಯರ ಸಲಹೆ ಮೇರೆಗೆ ಪರೀಕ್ಷಿಸಿಕೊಳ್ಳಬೇಕು. ನಿತ್ಯ ವ್ಯಾಯಾಮ, ಆರೋಗ್ಯಕರ ಆಹಾರ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು, ದುಶ್ಚಟಗಳಿಂದ ದೂರವಿರಬೇಕು.

**ಮಧುಮೇಹ ತಡೆಗಟ್ಟುವಿಕೆ**


1. **ದೈಹಿಕ ವ್ಯಾಯಾಮ:** ವಾರದಲ್ಲಿ ಐದು ದಿನವಾದರೂ 35–45 ನಿಮಿಷಗಳ ನಡಿಗೆ ಅಗತ್ಯ. ಆಟೋಟಗಳಲ್ಲಿ ತೊಡಗಿಸಿಕೊಳ್ಳುವುದು, ಯೋಗಾಭ್ಯಾಸ ಇವುಗಳನ್ನು ನಿಮ್ಮ ಜೀವನ ಶೈಲಿಯಲ್ಲಿ ಅಳವಡಿಸಿಕೊಳ್ಳಬೇಕು. ಹೀಗೆ ನಿತ್ಯ ವ್ಯಾಯಾಮ ಮಾಡಿದರೆ ದೇಹದ ಬೊಜ್ಜು ಕರಗಿ ತೂಕ ಕಡಿಮೆಯಾಗುವುದರಿಂದ ಮಧುಮೇಹವನ್ನು ತಡೆಗಟ್ಟಬಹುದು.

2. **ಆಹಾರ ಪದ್ಧತಿ:** ಕಾರ್ಬೋಹೈಡ್ರೇಟ್ (ಸಿಂಪಲ್ ಶುಗರ್) ಸೇವನೆಯನ್ನು ಮತ್ತು ಕೊಬ್ಬಿನಂಶ ಸೇವನೆಯನ್ನು ಕಡಿಮೆ ಮಾಡಬೇಕು. ಸಿಹಿ ತಿನಿಸುಗಳು, ಜ್ಯೂಸ್, ಬೇಕರಿ ಪದಾರ್ಥಗಳು, ಕರಿದ ತಿಂಡಿಗಳು ಇಂತಹವನ್ನು ಕಡಿಮೆ ಮಾಡಿ ಹೆಚ್ಚಾಗಿ ಸೊಪ್ಪು, ತರಕಾರಿ, ಕಾಳು ಸೇವಿಸಬೇಕು. ಅಕ್ಕಿ, ಗೋಧಿ, ರಾಗಿ, ನವಣೆ ಇಂತಹ ಧಾನ್ಯಗಳ ಸೇವನೆಯು ಅಗತ್ಯ, ಆದರೆ ಪ್ರಮಾಣ ಕಡಿಮೆ ಮಾಡಬೇಕು. ಮಾಂಸಾಹಾರಿಗಳು ಕೊಬ್ಬಿನಂಶ ಕಡಿಮೆ ಇರುವ ಮಾಂಸವನ್ನು ಸೇವಿಸಬೇಕು.

3. ಮಾನಸಿಕ ಒತ್ತಡದಿಂದಾಗಿಯೂ ಮಧುಮೇಹ ಕಾಣಿಸಿಕೊಳ್ಳಬಹುದು. ಮಾನಸಿಕ ಒತ್ತಡ ನಿರ್ವಹಣೆಗಾಗಿ ಧ್ಯಾನ ಮಾಡುವ ಹವ್ಯಾಸ ಬೆಳೆಸಿಕೊಳ್ಳುವುದರಿಂದ ಒತ್ತಡ ಕಡಿಮೆ ಮಾಡಿಕೊಳ್ಳಬಹುದು. ಜೊತೆಗೆ ಅತಿಯಾದ ಮದ್ಯ ಸೇವನೆ ಮತ್ತು ಧೂಮಪಾನದಿಂದ ದೂರವಿರಬೇಕು.

"ಮನಸ್ಸಿದ್ದರೆ ಮಾರ್ಗ" ಎಂಬಂತೆ ಈ ರೀತಿಯಲ್ಲಿ ನಮ್ಮ ಜೀವನ ಶೈಲಿಯನ್ನು ಬದಲಾಯಿಸಿಕೊಂಡರೆ ಮಧುಮೇಹದಂತಹ ಅಪಾಯಕಾರಿ ಕಾಯಿಲೆಯಿಂದ ನಾವು ದೂರವಿರಬಹುದು.

**ನಮ್ಮ ಆರೋಗ್ಯ ನಮ್ಮ ಕೈಯಲ್ಲೇ ಇದೆ!** ॐ



# ಹತ್ತಿಗೆ ಉತ್ತಮ ಭವಿಷ್ಯ ನೀಡಿಗೆ



ನಮ್ಮ ವಾರ್ಡ್‌ರೋಬ್‌ಗಳಲ್ಲಿ ಹತ್ತಿ ಸಾಮಾನ್ಯ ಬಟ್ಟೆಗಳಲ್ಲಿ ಒಂದಾಗಿದೆ. ಇದು ಆರಾಮದಾಯಕ, ಹೈಪೋಲಾರ್ಜನಿಕ್, ಉಸಿರಾಡುವ ಮತ್ತು ಬಾಳಿಕೆ ಬರುವಂತಹದ್ದಾಗಿದೆ.

ಆದರೆ ಹತ್ತಿ ಕೇವಲ ಒಂದು ಸರಕುಗಿಂತ ಹೆಚ್ಚಿನದನ್ನು ಪ್ರತಿನಿಧಿಸುತ್ತದೆ. ಈ ನೈಸರ್ಗಿಕ ಬಟ್ಟೆಯು ಪ್ರಪಂಚದಾದ್ಯಂತ ಜೀವನವನ್ನು ಬದಲಾಯಿಸುವ ಉತ್ಪನ್ನವಾಗಿದ್ದು, ಇದು 32 ಮಿಲಿಯನ್ ಬೆಳೆಗಾರರನ್ನು (ಅವರಲ್ಲಿ ಅರ್ಧದಷ್ಟು ಮಹಿಳೆಯರು) ಮತ್ತು 5 ಖಂಡಗಳಲ್ಲಿ 80 ದೇಶಗಳಲ್ಲಿ 100 ಮಿಲಿಯನ್ ಕುಟುಂಬಗಳಿಗೆ ಪ್ರಯೋಜನವನ್ನು ನೀಡುತ್ತದೆ.

ಇದರರ್ಥ, ಯಾವುದೇ ಹತ್ತಿ ಬಟ್ಟೆಯ ಹಿಂದೆ, ಅದರ ವ್ಯಾಪಾರ ಸರಪಳಿಯನ್ನು ಅನುಸರಿಸಿರುವ, ವೈಯಕ್ತಿಕ ಕಥೆ ಇದೆ. ಅಭಿವೃದ್ಧಿ ಹೊಂದಿದ ಆರ್ಥಿಕತೆಗಳಿಗೆ ಹತ್ತಿಯು ನಿಜವಾಗಿಯೂ ಮುಖ್ಯವಾದುದು ನಿಜ, ಆದರೆ ಕಡಿಮೆ-ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಇದು ಸುರಕ್ಷತಾ ನಿವ್ವಳವಾಗಿದೆ.

ಹತ್ತಿಯು ಅನೇಕ ಗ್ರಾಮೀಣ ಸಣ್ಣ ಹಿಡುವಳಿದಾರರು ಮತ್ತು ಮಹಿಳೆಯರನ್ನು ಒಳಗೊಂಡಂತೆ ಕಾರ್ಮಿಕರಿಗೆ ಜೀವನೋಪಾಯ ಮತ್ತು ಆದಾಯದ ಪ್ರಮುಖ ಮೂಲವಾಗಿದೆ, ಇದು ವಿಶ್ವದ ಕೆಲವು ಬಡ ಗ್ರಾಮೀಣ ಪ್ರದೇಶಗಳಿಗೆ ಉದ್ಯೋಗ ಮತ್ತು ಆದಾಯವನ್ನು ಒದಗಿಸುತ್ತದೆ.

ಮೂರನೇ ಅಧಿಕೃತ UN ವಿಶ್ವ ಹತ್ತಿ ದಿನದಂದು, "ಹತ್ತಿಯನ್ನು ನ್ಯಾಯಯುತವಾಗಿ ಮತ್ತು ಎಲ್ಲರಿಗೂ ಸಮರ್ಥನೀಯವಾಗಿ ಮಾಡುವುದು: ದೂರದಿಂದ ಫ್ಯಾಷನ್‌ಗೆ" ಎಂಬ ವಿಷಯದ ಅಡಿಯಲ್ಲಿ, ವಿಶ್ವಸಂಸ್ಥೆಯು ಹತ್ತಿ ವಲಯದ ಗೋಚರತೆಯನ್ನು ಹೆಚ್ಚಿಸಲು ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಅದು ವಹಿಸುವ ನಿರ್ಣಾಯಕ ಪಾತ್ರದ ಅರಿವನ್ನು ಹೆಚ್ಚಿಸಲು ಬಯಸುತ್ತದೆ. ಅಂತಾರಾಷ್ಟ್ರೀಯ ವ್ಯಾಪಾರ ಮತ್ತು ಬಡತನ ನಿವಾರಣೆ ಈ ಆಚರಣೆಯು ನಿರಂತರ, ಅಂತರ್ಗತ  ಮತ್ತು  ಸುಸ್ಥಿರ ಆರ್ಥಿಕ ಬೆಳವಣಿಗೆ, ಪೂರ್ಣ ಮತ್ತು ಉತ್ಪಾದಕ ಉದ್ಯೋಗ ಮತ್ತು ಎಲ್ಲರಿಗೂ ಯೋಗ್ಯವಾದ ಕೆಲಸದ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುವ ಗುರಿಯನ್ನು ಹೊಂದಿದೆ .

ನಮ್ಮ ವೈಯಕ್ತಿಕ ಮತ್ತು ಆನ್‌ಲೈನ್ ಈವೆಂಟ್‌ಗಾಗಿ ನೋಂದಾಯಿಸಿ "ಹತ್ತಿಯನ್ನು ಎಲ್ಲರಿಗೂ ನ್ಯಾಯಯುತ ಮತ್ತು ಸುಸ್ಥಿರ ಬೆಳೆಯಾಗಿ ಮಾಡುವುದು, ತೋಟದಿಂದ ಫ್ಯಾಷನ್‌ವರೆಗೆ". ಇದು ಈ ವಲಯದ ಪ್ರಾಮುಖ್ಯತೆಯನ್ನು ಬಹಿರಂಗಪಡಿಸುತ್ತದೆ, ಜೊತೆಗೆ ಸಮರ್ಥನೀಯ ಮತ್ತು ಅಂತರ್ಗತ ರೀತಿಯಲ್ಲಿ ಅದರ ಬೆಳವಣಿಗೆಯ ಪ್ರಸ್ತುತತೆಯನ್ನು ಬಹಿರಂಗಪಡಿಸುತ್ತದೆ, ಎಲ್ಲರಿಗೂ ಯೋಗ್ಯವಾದ ಕೆಲಸವನ್ನು ಖಾತರಿಪಡಿಸುತ್ತದೆ.

**ಹತ್ತಿ ಸಸ್ಯ**

ವಿಶ್ವ ಹತ್ತಿ ದಿನದ ಉಪಕ್ರಮವು 2019 ರಲ್ಲಿ ಹುಟ್ಟಿಕೊಂಡಿತು, ಉಪ-ಸಹಾರನ್ ಆಫ್ರಿಕಾದಲ್ಲಿ ನಾಲ್ಕು ಹತ್ತಿ ಉತ್ಪಾದಕರು – ಕಾಟನ್ ಫೋರ್ ಎಂದು ಕರೆಯಲ್ಪಡುವ ಬೆನಿನ್, ಬುರ್ಕಿನಾ ಫಾಸೊ, ಚಾಡ್ ಮತ್ತು ಮಾಲಿ – ಅಕ್ಟೋಬರ್ 7 ರಂದು ವಿಶ್ವ ವಾಣಿಜ್ಯ ಸಂಸ್ಥೆಗೆ ವಿಶ್ವ ಹತ್ತಿ ದಿನ ಆಚರಣೆಯನ್ನು ಪ್ರಸ್ತಾಪಿಸಿದರು.

ಸತತ 2 ವರ್ಷಗಳಲ್ಲಿ, ಈ ದಿನಾಂಕವು ಜ್ಞಾನವನ್ನು ಹಂಚಿಕೊಳ್ಳಲು ಮತ್ತು ಹತ್ತಿ-ಸಂಬಂಧಿತ ಚಟುವಟಿಕೆಗಳನ್ನು ಪ್ರದರ್ಶಿಸಲು ಅವಕಾಶವನ್ನು ನೀಡಿತು.


ಈಗ ವಿಶ್ವಸಂಸ್ಥೆಯು ಈ ವಿಶ್ವ ಹತ್ತಿ ದಿನವನ್ನು ಅಧಿಕೃತವಾಗಿ ಗುರುತಿಸಿದೆ, ಈ ಉತ್ತಮ ಅವಕಾಶವು ಕನಿಷ್ಠ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಂದ ಹತ್ತಿ ಮತ್ತು ಹತ್ತಿ-ಸಂಬಂಧಿತ ಉತ್ಪನ್ನಗಳಿಗೆ ಮಾರುಕಟ್ಟೆ ಪ್ರವೇಶದ ಅಗತ್ಯತೆಯ ಅರಿವನ್ನು ಉಂಟುಮಾಡುತ್ತದೆ, ಸುಸ್ಥಿರ ವ್ಯಾಪಾರ ನೀತಿಗಳನ್ನು ಪೋಷಿಸುತ್ತದೆ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಪ್ರತಿ ಹೆಜ್ಜೆಯಿಂದಲೂ ಹೆಚ್ಚಿನ ಪ್ರಯೋಜನವನ್ನು ಪಡೆಯಲು ಅನುವು ಮಾಡಿಕೊಡುತ್ತದೆ.

ನಿಯಮ-ಆಧಾರಿತ, ತಾರತಮ್ಯರಹಿತ, ಮುಕ್ತ, ನ್ಯಾಯೋಚಿತ, ಅಂತರ್ಗತ, ಊಹಿಸಬಹುದಾದ ಮತ್ತು ಪಾರದರ್ಶಕ ಅಂತರಾಷ್ಟ್ರೀಯ ಹತ್ತಿ ವ್ಯಾಪಾರ ವ್ಯವಸ್ಥೆಯು ಜಗತ್ತಿನಾದ್ಯಂತ ನೂರಾರು ಮಿಲಿಯನ್ ದುರ್ಬಲ ಜನರಿಗೆ ಜೀವನೋಪಾಯವನ್ನು ಒದಗಿಸಲು ಪ್ರಮುಖವಾಗಿದೆ.

ಇದಲ್ಲದೆ, ಕಚ್ಚಾ ಹತ್ತಿ ಉತ್ಪಾದನೆಯನ್ನು ಮೀರಿ ವಲಯವನ್ನು ವಿಸ್ತರಿಸಲು ಮತ್ತು ಹೊಸ ಆದಾಯದ ಅವಕಾಶಗಳನ್ನು ಸೃಷ್ಟಿಸಲು ಹೆಚ್ಚಿನ ಹೂಡಿಕೆಗಳು ಅಗತ್ಯವಿದೆ, ವಿಶೇಷವಾಗಿ ರೈತರಿಗೆ, ಹತ್ತಿ ನಾರಿಗೆ ಹೆಚ್ಚಿನ ಮೌಲ್ಯವನ್ನು ಸೇರಿಸುವ ಮೂಲಕ ಮತ್ತು ಹತ್ತಿ ಸಸ್ಯದ ಇತರ ಭಾಗಗಳಿಂದ ಉಪ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವ ಮೂಲಕ ಯುಎನ್ ಏಜೆನ್ಸಿಗಳು ಈ ಉದ್ದೇಶಕ್ಕಾಗಿ ವರ್ಷಗಳ ಕಾಲ ಕೆಲಸ ಮಾಡಿದೆ. ಉದಾಹರಣೆಗೆ, ಇಂಟರ್ನ್ಯಾಷನಲ್ ಟ್ರೇಡ್ ಸೆಂಟರ್ (ITC) ಮತ್ತು ವಿಶ್ವ ವ್ಯಾಪಾರ ಸಂಸ್ಥೆ (WTO) ಉತ್ಪಾದನೆಯನ್ನು ಉತ್ತಮಗೊಳಿಸಲು ಮತ್ತು ಸ್ಥಳೀಯ ಸಂಸ್ಕರಣಾ ಸಾಮರ್ಥ್ಯವನ್ನು ಸುಧಾರಿಸಲು ಅ-4 ಗೆ ಸಹಾಯ ಮಾಡಿದೆ.

ಮತ್ತೊಂದು UN ಏಜೆನ್ಸಿ, FAO, ಉತ್ಪಾದಕತೆಯನ್ನು ಹೆಚ್ಚಿಸಲು ಮತ್ತು ಹತ್ತಿ ಮೌಲ್ಯ ಸರಪಳಿಯಲ್ಲಿ ಹೆಚ್ಚಿನ ಅವಕಾಶಗಳನ್ನು ಸೃಷ್ಟಿಸಲು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ತಾಂತ್ರಿಕ ಮತ್ತು ನೀತಿ ಬೆಂಬಲವನ್ನು ದೀರ್ಘಕಾಲದವರೆಗೆ ನೀಡಿದೆ. ಉದಾಹರಣೆಯಾಗಿ, ಕಾಟನ್ ಪ್ರಾಜೆಕ್ಟ್, ಬ್ರೆಜಿಲ್‌ನೊಂದಿಗಿನ ಸಹಕಾರ ಉಪಕ್ರಮ (ಉದ್ಯಮದಲ್ಲಿ ಇನ್ನೊಬ್ಬ ನಾಯಕ) ಇದು ಲ್ಯಾಟಿನ್ ಅಮೇರಿಕನ್ ಉತ್ಪಾದಕರಿಗೆ ನವೀನ ಕೃಷಿ ವಿಧಾನಗಳನ್ನು ಪರಿಚಯಿಸಲು ಸಹಾಯ ಮಾಡುತ್ತದೆ.

ಪ್ರಪಂಚದಾದ್ಯಂತ ಹತ್ತಿ ವಲಯದ ಪ್ರಯೋಜನಗಳನ್ನು ಹೆಚ್ಚಿಸಲು ಉತ್ಪಾದಕತೆ, ಹೂಡಿಕೆ ಮತ್ತು ನಾವೀನ್ಯತೆ ಮತ್ತು ಸುಸ್ಥಿರ ಮಾನದಂಡಗಳನ್ನು ತರಲು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಹತ್ತಿ ವಲಯಕ್ಕೆ ಸಹಾಯವನ್ನು ನೀಡುವುದನ್ನು ಮುಂದುವರಿಸೋಣ. ॐ



# ನಾಯಿಗಿಂತಲೂ ಮನುಷ್ಯ ಕಡೆಯೇ?

ಒಂದು ದಿನ ಕಳ್ಳನೊಬ್ಬ ಒಂದು ಮನೆಗೆ ಕಳ್ಳತನಕ್ಕಾಗಿ ಹೋಗುತ್ತಾನೆ, ಆ ಮನೆಯ ಮುಂದೆ ಒಂದು ಕಾವಲು ನಾಯಿ ಇರುತ್ತದೆ. ಆ ನಾಯಿ ನಿಶ್ಯಬ್ಧವಾಗಿ ಕೂತು ಈ ಕಳ್ಳನನ್ನು ಗಮನಿಸುತ್ತಿರುತ್ತದೆ, ಆಗ ಆ ಕಳ್ಳ ಈ ಬೊಗಳದ, ಸ್ವಲ್ಪವೂ ಪ್ರತಿಭಟಿಸದೆ ಸುಮ್ಮನೆ ಕುಳಿತ ನಾಯಿಯನ್ನು ನೋಡಿ ಕಳ್ಳತನಕ್ಕಾಗಿ ಮನೆಯೊಳಗೆ ನುಗ್ಗಲೋ ಬೇಡವೋ ಎಂಬ ದ್ವಂದ್ವಕ್ಕೆ ಬೀಳುತ್ತಾನೆ. ಒಂದು ವೇಳೆ ಮನೆಯೊಳಗೆ ಹೋದಾಗ ಈಗ ಸುಮ್ಮನಿರುವ ಈ ನಾಯಿ ಬೊಗಳಿದರೆ ತನ್ನ ಕೆಲಸಕ್ಕೆ (ಕಳ್ಳತನಕ್ಕೆ) ಕಷ್ಟವಾಗುವುದು ಈಗಲೇ ಬೊಗಳಿದರೆ ಬೇರೆ ಮನೆಗಾದರೂ ಹೋಗಿ ತನ್ನ ಕಸುಬು ಪೂರೈಸಿಕೊಳ್ಳಬಹುದು ಹೀಗೆ ಯೋಚಿಸಿದ ಅವನು ತಾನು ತಂದ ರೊಟ್ಟಿ ತುಂಡನ್ನು ಅದರ ಮುಂದೆ ಎಸೆದ ಅಷ್ಟೆ ಆ ನಾಯಿ ಬೌ ಬೌ ಎಂದು ಅರಸುತ್ತಾ ಅವನ ಹಿಂದೆ ಬಿತ್ತು, ಇದರಿಂದ ಕ್ಷಣಕಾಲ ಚಕಿತನಾದ ಕಳ್ಳ ಮೊದಲಿಗೆ ಸುಮ್ಮನಿದ್ದ ನೀನು ರೊಟ್ಟಿ ನೋಡಿದ ಕೂಡಲೇ ಏಕೆ ಅರಸಲು ಶುರುವಿಟ್ಟುಕೊಂಡೆ ಎಂದು ಕೇಳಲು, ಆಗ ಆ ನಾಯಿ ನೀನು ಸುಮ್ಮನೆ ಮನೆ ಮುಂದೆ ಬಂದು ನಿಂತಾಗ ನೀನು ಈ ಮನೆಯವರ ಬಂಧುವೋ ಅಥವಾ ಪರಿಚಯದವನೋ ಎಂದುಕೊಂಡು ಸುಮ್ಮನಿದ್ದೆ ಆದರೆ ಯಾವಾಗ ನೀನು ಸುಖಾಸುಮ್ಮನೆ ಉಚಿತವಾಗಿ ರೊಟ್ಟಿಯ ತುಂಡನ್ನು ಎಸೆದೆಯೋ ಆಗಲೇ ನೀನೊಬ್ಬ ಕಳ್ಳ ಎಂದರ್ಥವಾಯಿತು.

**"ಆಲೋಚಿಸುವ ವಿಷಯವಲ್ಲವೇ ಇದು"**

ಉಚಿತ ಎಂದ ಕೂಡಲೇ ಮರು ಆಲೋಚನೆಯಿಲ್ಲದೆ ಮುಗಿಬೀಳುತ್ತಿರುವೆವು ನಾವು ಸುಮ್ಮನೇ ರೊಟ್ಟಿ ಕೊಡುತ್ತಿದ್ದಾನೆಂದರೆ ಅದರ ಹಿಂದಿನ ಸ್ವಾರ್ಥ/ಲಾಭವನ್ನು ಗ್ರಹಿಸಿತು ಆ ನಾಯಿ. ಆದರೆ ಮನುಷ್ಯರಾದ ನಾವು ಏನು ಮಾಡುತ್ತಿದ್ದೇವೆ, ಅದರಲ್ಲೂ ಈ ಪ್ರಜಾಪ್ರಭುತ್ವದಲ್ಲಿ "ಉಚಿತ"ಕ್ಕೆ ಮರುಳಾಗಿ ಉಚಿತದ ದಾಸರಾಗಿ ನಮ್ಮತನವನ್ನು ಕಳೆದುಕೊಳ್ಳುತ್ತಿದ್ದೇವೆ ಎಂದು ಅನಿಸುವುದಿಲ್ಲವೇ? ॐ

# ದೀಪ-ತತ್ತ್ವ ಪ್ರದೀಪ



**ಶುಭಂ ಕರೋತಿ ಕಲ್ಯಾಣಂ ಆರೋಗ್ಯಂ ಧನಸಂಪದಃ ।**
**ಮಮಬುದ್ಧಿಪ್ರಕಾಶಾಯ ದೀಪಜ್ಯೋತಿರ್ನಮೋಸ್ತುತೇ ॥**

---

ಭಾರತೀಯ ಸನಾತನ ಸಂಸ್ಕೃತಿಯಲ್ಲಿ ದೀಪಬೆಳಗುವುದು ಒಂದು ಮುಖ್ಯ ಆಚರಣೆ. ಅದರಲ್ಲಿಯೂ ಕಾರ್ತಿಕ ಮಾಸದಲ್ಲಿ ಎಲ್ಲೆಡೆಯೂ ದೀಪೋತ್ಸವಗಳ ಸಂಭ್ರಮ. ದೀಪ ಅಂದರೆ ಬೆಳಕು, ಅಜ್ಞಾನವೆಂಬ ಕತ್ತಲೆಯನ್ನು ಕಳೆಯುವ ಬೆಳಕು. ಪ್ರಜ್ವಾಲಿತೋ ಜ್ಞಾನಮಯಃ ಪ್ರದೀಪಃ ಎಂದಿದ್ದಾರೆ. ಅಂದರೆ ವ್ಯಾಸಮಹರ್ಷಿಗಳು ಮಹಾಭಾರತವೆಂಬ ಜ್ಞಾನಜ್ಯೋತಿಯನ್ನು ಬೆಳಗಿ ನಮ್ಮನ್ನು ಅಜ್ಞಾನಂಧಕಾರದಿಂದ ಪಾರು ಮಾಡಿದ್ದಾರೆ ಎಂದರ್ಥ.

ನಮ್ಮಲ್ಲಿ ದೀಪಬೆಳಗುವುದು ನಿತ್ಯಕಟ್ಟಲೆ. ಬೆಳಿಗ್ಗೆ ಎದ್ದು ನಿತ್ಯಕರ್ಮಗಳ ನಂತರ, ದೇವಪೂಜೆಯ ಪ್ರಾರಂಭದಲ್ಲಿ ಮೊದಲ ಕೆಲಸ ದೀಪಬೆಳಗುವುದೇ ಆಗಿದೆ.



**ಭೋ ದೀಪ ದೇವರೂಪಸ್ತ್ವಂ ಕರ್ಮ ಸಾಕ್ಷೀ ಹ್ಯವಿಘ್ನಕೃತ್ ।**
**ಯಾವತ್ಕರ್ಮಸಮಾಪ್ತಿಃ ಸ್ಯಾತ್ ತಾವತ್ತ್ವಂ ಸುಸ್ಥಿರೋ ಭವ ॥**

ದೀಪವು ದೇವರರೂಪವೇ ಆಗಿದೆ. ಮತ್ತು ನಾವು ಮಾಡುವ ಕರ್ಮಕ್ಕೆ ಸಾಕ್ಷಿಯೂ ಆಗಿದೆ. ಆದ್ದರಿಂದ ದೇವಪೂಜೆಯಲ್ಲಿ ದೀಪಪ್ರಜ್ವಲನವೂ ಒಂದು ಅಂಗವಾಗಿದೆ. ಅಷ್ಟುಮಾತ್ರವಲ್ಲದೆ ಎಲ್ಲ ಧಾರ್ಮಿಕ ಸಭೆಸಮಾರಂಭಗಳಲ್ಲೂ ದೀಪ ಹಚ್ಚುವುದರಿಂದಲೇ ಕಾರ್ಯಕ್ರಮದ ಆರಂಭವಾಗುತ್ತದೆ. ಇದರಿಂದಲೇ ನಮ್ಮ ಹಿರಿಯರು ದೀಪಕ್ಕೆ ಕೊಟ್ಟಿರುವ ಮಹತ್ವದ ಅರಿವಾಗುತ್ತದೆ.

ಸನಾತನ ಧರ್ಮದ ಎಲ್ಲ ಹಬ್ಬಗಳಿಗೂ ಕಾಲಕ್ಕೂ ಅವಿನಾಭಾವ ಸಂಬಂಧವಿದೆ. ನಿರ್ದಿಷ್ಟ ಕಾಲಾವಧಿಯಲ್ಲೇ ನಿರ್ದಿಷ್ಟ ಹಬ್ಬಗಳು ಬರುತ್ತವೆ. ಅದೇ ರೀತಿ ಕಾರ್ತಿಕಮಾಸವು ದೀಪಗಳ ಹಬ್ಬವಾದ ದೀಪಾವಳಿಯಿಂದಲೇ ಆರಂಭವಾಗುತ್ತದೆ. ಯಾವ ಚಾಂದ್ರಮಾಸದಲ್ಲಿನ ಹುಣ್ಣಿಮೆಯು ಕೃತ್ತಿಕಾನಕ್ಷತ್ರದಿಂದ ಕೂಡಿರುತ್ತದೆಯೋ ಅದೇ ಕಾರ್ತಿಕಮಾಸ. ಕೃತ್ತಿಕಾ ನಕ್ಷತ್ರವು ಅಗ್ನಿದೇವತಾ ನಕ್ಷತ್ರವೆಂದು ವೇದಗಳಿಂದಲೇ ಪ್ರಸಿದ್ಧಿಯಾಗಿದೆ. ಆದ್ದರಿಂದಲೇ ಕಾರ್ತಿಕಮಾಸದಲ್ಲಿ ದೀಪಪ್ರಜ್ವಲನವು ವಿಶೇಷ ಮಹತ್ವವನ್ನು ಹೊಂದಿದೆ.

ದೀಪದಲ್ಲಿನ ಜ್ಯೋತಿಯು ಮೇಲ್ಮುಖವಾಗಿಯೇ ಉರಿಯುವಂಥದ್ದು. ಪಂಚಭೂತಗಳಲ್ಲಿ ಇಂಥ ವಿಶಿಷ್ಟವಾದ ಗುಣಹೊಂದಿರುವುದು ಅಗ್ನಿ ಮತ್ತು ತೇಜಸ್ಸು ಕೂಡ ಅಂತಹ ಅಗ್ನಿಯ ಆರಾಧನೆಯಿಂದಲೇ ದೊರಕುವಂಥದ್ದು. ಆದ್ದರಿಂದಲೇ ವೇದಗಳಲ್ಲಿ ಕೂಡಾ ಅಗ್ನ್ಯಾರಾಧನೆ ವಿಶೇಷವಾಗಿ ಹೇಳಲ್ಪಟ್ಟಿದೆ.

**ಮನೆ ಮದ್ದು**

ಗೋಧಿಯನ್ನು ಮೊಳಕೆ ಕಟ್ಟಿ ಅದನ್ನು ರುಬ್ಬಿ ಹಾಲು ತೆಗೆದು ಅದಕ್ಕೆ ಕಲ್ಲುಸಕ್ಕರೆ ಹಾಕಿ ಕುಡಿಯುತ್ತಿದ್ದರೆ ಹೃದಯದ ದೌರ್ಬಲ್ಯ ಉಂಟಾಗುವುದಿಲ್ಲ.

ತುಪ್ಪದ ದೀಪವು ಶ್ರೇಯಸ್ಕರ ಮತ್ತು ಸಾತ್ವಿಕವಾದದ್ದು. ಎಳ್ಳೆಣ್ಣೆಯ ದೀಪವು ಪಾಪನಿವಾರಕ ಎಂಬ ನಂಬಿಕೆಯಿದೆ. ಆದ್ದರಿಂದಲೇ ಗ್ರಹಚಾರ ಶಾಂತಿಗಾಗಿ ಕೂಡ ತೈಲದೀಪಪ್ರಜ್ವಲನವನ್ನು ಮಾಡುತ್ತಾರೆ. ನೀರಾಜನಕ್ಕಾಗಿ ಉಪಯೋಗಿಸುವ ದೀಪವೇ ಆರತಿದೀಪ. ದೇವರ ಮುಂದೆ ಶಾಶ್ವತವಾದ ಬೆಳಗುವ ದೀಪವೇ ನಂದಾದೀಪ. ಸರಪಳಿಗಳಿಂದ ತೂಗುಹಾಕಿದ ದೀಪ ತೂಗುದೀಪವಾದರೆ, ಪುಟ್ಟಸ್ತಂಭದಂಥ ಪೀಠದ ಮೇಲಿರುವ ದೀಪವೇ ಕಾಲುದೀಪ. ಇವೆಲ್ಲವುಗಳ ರಚನೆ, ವಿನ್ಯಾಸ ಮಾದರಿಗಳಲ್ಲಿ ನಾನಾ ನಮೂನೆಗಳೂ, ಕಲಾಕುಸುರಿಗಳೂ ಕಂಡುಬರುತ್ತವೆ.

ತಮಸೋಮಾ ಜ್ಯೋತಿರ್ಗಮಯ ಎಂಬ ವೈದಿಕ ಪ್ರಾರ್ಥನೆಯೂ ಕತ್ತಲಿನಿಂದ ಬೆಳಕಿನೆಡೆಗೆ ಸಾಗುವ ಉದಾತ್ತ ಆಶಯವನ್ನು ಹೊಂದಿದೆ. ದೀಪಬೆಳಗುವುದು ಅಂತಹ ಆಶಯದ ಕ್ರಿಯಾರೂಪ.

ದೇವಾಲಯಗಳಲ್ಲಿ ಕಾರ್ತಿಕಮಾಸದ ಪುಣ್ಯತಮ ದಿನಗಳಲ್ಲಿ ದೀಪೋತ್ಸವ ನಡೆಸುವುದು ಪವಿತ್ರವಾದದ್ದೆಂಬ ನಂಬಿಕೆ ಹೀಗೆ ಚಾಲ್ತಿಯಲ್ಲಿ ಬಂದಿದೆ. ನಿಜವಾದ ಬೆಳಕನ್ನು ಅರಸುವಲ್ಲಿ ಈ ರೀತಿಯ ಆಚರಣೆಗಳು ಪೂರಕವಾಗಿರುತ್ತವೆ, ಹಾಗಾದರೆ ಯಾವುದೇ ಭೌತಿಕವಸ್ತುಗಳ ಸಹಾಯವಿಲ್ಲದೆ ಬೆಳಗುವ ನಿಜವಾದ ಬೆಳಕು ಯಾವುದು?

ಭಾರತೀಯ ತತ್ವಪರಂಪರೆಯನ್ನು ಬೆಳಗಿದ ಶಂಕರಭಗವತ್ಪಾದರ ಏಕಶ್ಲೋಕೀ ಇದಕ್ಕೆ ಉತ್ತರವಾಗಬಲ್ಲದು..



**ಕಿಂ ಜ್ಯೋತಿಸ್ತವ ಭಾನುಮಾನಹನಿ ಮೇ ರಾತ್ರೌ ಪ್ರದೀಪಾದಿಕಂ**
**ಸ್ಯಾದೇವಂ ರವಿದೀಪದರ್ಶನವಿಧೌ ಕಿಂ ಜ್ಯೋತಿರಾಖ್ಯಾಹಿ ಮೇ ।**
**ಚಕ್ಷುಸ್ತಸ್ಯ ನಿಮೀಲನಾದಿ ಸಮಯೇ ಕಿಂ ಧೀರ್ಧಿಯೋದರ್ಶನೇ**
**ಕಿಂ ತತ್ರಾಹಮತೋ ಭವಾನ್ ಪರಮಕಂ ಜ್ಯೋತಿಸ್ತದಸ್ಮಿ ಪ್ರಭೋ ॥**

ಗುರು: ಯಾವುದು ಬೆಳಕು ನಿನಗೆ?

ಶಿಷ್ಯ: ಹಗಲಿನಲ್ಲಿ ನನಗೆ ಸೂರ್ಯನೇ ಬೆಳಕು, ರಾತ್ರಿ ಚಂದ್ರ, ದೀಪ ಇತ್ಯಾದಿಗಳು.


ಗುರು: ಸೂರ್ಯ, ಚಂದ್ರ, ದೀಪಗಳನ್ನು ನೋಡಲು ಯಾವುದು ಬೆಳಕು?

ಶಿಷ್ಯ: ಅವುಗಳನ್ನು ನೋಡಲು ಕಣ್ಣೇ ನನಗೆ ಬೆಳಕು.

ಗುರು: ಕಣ್ಣುಮುಚ್ಚಿದಾಗಲೂ ವಸ್ತು ಗೋಚರಿಸುತ್ತದೆ. ಕಣ್ಣು ಮುಚ್ಚಿದಾಗ ಬೆಳಕು ಕೊಡುವುದಾವುದು?

ಶಿಷ್ಯ: ಅರಿಯುವ ಮನಸ್ಸೇ ಬೆಳಕು.

ಗುರು: ಹಾಗೆ ಅರಿಯಲು ಮನಸ್ಸಿಗೆ ಯಾವುದು ಬೆಳಕು? ಮನಸ್ಸಿಗೂ ಅರಿವಾಗುವುದು ಸ್ವಯಂಜ್ಯೋತಿಯಾದ ಆತ್ಮದಿಂದ. ಅಂದರೆ ಎಲ್ಲಾ ಬೆಳಕುಗಳಿಗೂ ಬೆಳಕು ನಾನೇ (ಆತ್ಮನು, ಬ್ರಹ್ಮವು, ಬೆಳಕಿನ ಬೆಳಕು). ಸಕಲ ಶಾಸ್ತ್ರಗಳ, ಸಕಲ ಉಪನಿಷತ್ತುಗಳ ರಹಸ್ಯವನ್ನೊಳಗೊಂಡ, ಏಕಶ್ಲೋಕೀ ಎಂದೇ ಪ್ರಸಿದ್ಧವಾದ ಶ್ರೀಶಂಕರ ಭಗವತ್ಪಾದರ ರಚನೆ ಇದು. ಆದ್ದರಿಂದ ಕಾರ್ತಿಕಮಾಸದ ಪುಣ್ಯಕಾಲ ದೀಪೋತ್ಸವಗಳ ಸಡಗರದಲ್ಲಿ ನಮ್ಮೊಳಗಿನ ನಿಜದ ಬೆಳಕನ್ನು ಅರಿಯೋಣ. ॐ



# ನಿಷ್ಠೆ, ಪ್ರಾಮಾಣಿಕತೆಯ ಬಹದ್ದೂರ್..! ನದಿ ಈಜಿದ ಬಾಲಕ.. ಮುಂದೊಂದಿನ ನಾಯಕ..

ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಮಾತಿಗೆ ಅನ್ವರ್ಥರಾದವರು ಹಲವರು. ಶಿವಾಜಿಯದು ಎತ್ತರದ ನಿಲುವಲ್ಲ, ಆದರೆ ತನ್ನ ಧೈರ್ಯ, ಸಾಹಸಗಳಿಂದ ಸಾಮ್ರಾಜ್ಯವನ್ನು ಕಟ್ಟಿ ಜನರ ಮನಸಿನಾಳದಲ್ಲಿ ನೆಲೆಯಾದವನು. ನೆಪೋಲಿಯನ್ ಕುಳ್ಳ ಜಗತ್ತನ್ನೇ ನಡುಗಿಸಿದವನು. ಲಾಲ್ ಬಹದ್ದೂರ್ ರವರು ಇವರೆಲ್ಲರಿಗಿಂತ ಎತ್ತರದವರೂ ಅಲ್ಲ, ಆದರೆ ಸಾಹಸ, ಸಹನೆ, ಚಾತುರ್ಯ, ಬುದ್ಧಿವಂತಿಕೆ ಹಾಗೂ ಕೌಶಲ್ಯಗಳಿಗೆ ಇವರಾರಿಗೂ ಕಮ್ಮಿಯಿಲ್ಲ. ಈ ಎಲ್ಲಾ ಗುಣಗಳು ಒಂದೆರಡು ದಿನಗಳಲ್ಲಿ ಬೆಳೆಸಿಕೊಂಡಂತಹ ಗುಣಗಳಲ್ಲ. ಅವರು ಬೆಳೆದು ಬಂದ ಪರಿಸರ ಹಾಗೂ ಪರಿಸ್ಥಿತಿಯ ಪರಿಣಾಮವಾಗಿ ಮೈಗೂಡಿಸಿಕೊಂಡ ಗುಣಗಳೇ ಕಾರಣ.

ಲಾಲ್ ಬಹದ್ದೂರ್ ರವರಿಗಿನ್ನೂ ಒಂದು ವರ್ಷವಿದ್ದಾಗಲೇ ತಂದೆಯನ್ನು ಕಳೆದುಕೊಂಡರು. ಮುಂದೆ ಇವರ ಅಜ್ಜ ಜವಾಬ್ದಾರಿ ತೆಗೆದುಕೊಂಡರು. ಅಜ್ಜ ಇವರನ್ನು 6 ನೇ ತರಗತಿಯವರೆಗೆ ಅವರ ಊರಿನಲ್ಲಿ ವಿದ್ಯಾಭ್ಯಾಸ ಕೊಡಿಸಿದರು. ಆಮೇಲೆ ಕಾಶಿಯಲ್ಲಿ ಓದಲು ವ್ಯವಸ್ಥೆ ಮಾಡಿದರು. ಅವರಲ್ಲಿದ್ದ ಧೈರ್ಯ, ಆತ್ಮಾಭಿಮಾನ ಬಾಲ್ಯದಿಂದಲೇ ಬಂದ ಗುಣಗಳು. ಬಾಲ್ಯದ ಘಟನೆಗಳು ಮಕ್ಕಳ ಮನಸ್ಸಿನ ಮೇಲೆ ಯಾವಾಗಲೂ ಅಳಿಸಲಾಗದ ಪರಿಣಾಮವನ್ನುಂಟು ಮಾಡುತ್ತವೆ.

**ಮಾವಿನಮರ ಕಲಿಸಿದ ಪಾಠ :**

ಲಾಲ್ ಬಹಾದ್ದೂರ್ ರವರ ಜೀವನದ ಮೇಲೆ ಪ್ರಭಾವ ಬೀರಿದ ಒಂದು ಘಟನೆ ಹೀಗಿದೆ ನೋಡಿ. ಒಂದಷ್ಟು ಹುಡುಗರು ಹಣ್ಣಿನ ತೋಟಕ್ಕೆ ನುಗ್ಗಿದರು. ಅವರಲ್ಲಿ ಸಣ್ಣ ಹುಡುಗ ಲಾಲ್ ಬಹಾದ್ದೂರ್. ಉಳಿದವರೆಲ್ಲಾ ಮರ ಹತ್ತಿ ಹಣ್ಣುಗಳನ್ನು ಕೊಯ್ದು ಗಲಾಟೆ ಮಾಡುತ್ತಿದ್ದರೆ ಈ ಪುಟ್ಟ ಬಾಲಕ ಪಕ್ಕದಲ್ಲಿದ್ದ ಹೂವನ್ನು ಕೊಯ್ದು ಕೈಯಲ್ಲಿ ಹಿಡಿದುಕೊಂಡು ನೋಡುತ್ತಿದ್ದ. ಅದೇ ಹೊತ್ತಿಗೆ ತೋಟದ ಮಾಲಿ ಕೋಲು ಹಿಡಿದುಕೊಂಡು ಬಂದ. ಅವನನ್ನು ನೋಡಿ ದೊಡ್ಡ ಮಕ್ಕಳು ಓಡಿ ಹೋಗಿ ಪೆಟ್ಟಿನಿಂದ ತಪ್ಪಿಸಿಕೊಂಡರು. ಕೈಗೆ ಸಿಕ್ಕ ಹುಡುಗನಿಗೆ ಚೆನ್ನಾಗಿ ಬಾರಿಸಿದನು ಮಾಲಿ. ಹುಡುಗ ಅಳುತ್ತಾ ನಾನು ತಂದೆ ಇಲ್ಲದ ಹುಡುಗ ಹೊಡೆಯಬೇಡಿ ಎಂದು ಅಳಲಾಂಭಿಸಿದ, ಕರುಣೆಯಿಂದ ನೋಡುತ್ತಾ

ಮಾಲಿ "ತಂದೆಯಿಲ್ಲದ ಹುಡುಗನಾದ್ದರಿಂದ ಒಳ್ಳೆಯ ಗುಣ, ನಡತೆ ಕಲಿಯಬೇಕಪ್ಪಾ" ಎಂದ ಮಾಲಿಯ ಮಾತು ಗಾಢವಾದ ಪರಿಣಾಮವನ್ನು ಬೀರಿತು. ಇನ್ನು ಮುಂದೆ ಯಾವತ್ತೂ ಕೆಟ್ಟ ಕೆಲಸ ಮಾಡಲಾರೆ, ತಪ್ಪು ಹೆಜ್ಜೆಯನ್ನು ಇಡಲಾರೆ ಎಂಬ ಧೃಡ ನಿರ್ಧಾರವನ್ನು ಆ ಸಂದರ್ಭದಲ್ಲಿಯೇ ತೆಗೆದುಕೊಂಡರು.

**ಈಜಿ ದಡದಾಟಿದ ನಾವಿಕ :**


ಮತ್ತೊಂದು ದಿನ ಶಾಲೆಯನ್ನು ಬಿಟ್ಟು ಸಂಜೆ ಮನೆಗೆ ಬರುವಾಗ ದೋಣಿಯಲ್ಲಿ ಹೋಗಲು ದುಡ್ಡಿಲ್ಲದೆ ಹೋದಾಗ, ಸಹಪಾಠಿಗಳು ಭಿಕ್ಷೆ ಬೇಡಿ ದುಡ್ಡು ಸಂಗ್ರಹಿಸಿ ದೋಣಿಯಲ್ಲಿ ದಡ ಮುಟ್ಟುತ್ತಾರೆ. ವಾಮನ ಮೂರ್ತಿ ಲಾಲ್‌ಬಹುದ್ದೂರ್ ಬೇರೆಯವರ ಬಳಿ ಹಣಕ್ಕಾಗಿ ಕೈ ಚಾಚದೆ, ಪುಸ್ತಕ ಚೀಲವನ್ನು ತಲೆಯಮೇಲಿಟ್ಟುಕೊಂಡು ನದಿಯನ್ನೇ ಈಜಿ ದಡಸೇರಿದ ಅವರ ಬಾಲ್ಯದ ನಿಷ್ಠೆ ಇಂದಿನ ಭ್ರಷ್ಟರಿಗೆ ಪಾಠವೇ ಸರಿ. ದೇಶದ ಏಳಿಗೆಗಾಗಿ ಒಬ್ಬ ವ್ಯಕ್ತಿ ಎಷ್ಟೆಲ್ಲಾ ತ್ಯಾಗ ಮಾಡಬಹುದೋ ಅದೆಲ್ಲವನ್ನೂ ಮಾಡಿದವರು ಲಾಲ್ ಬಹಾದ್ದೂರ್ ಶಾಸ್ತ್ರಿಯವರು ಸ್ವಂತಕ್ಕಾಗಿ ಮನೆಯನ್ನೂ ಬಯಸದ ವ್ಯಕ್ತಿ. "ಗೃಹವಿಲ್ಲದ ಗೃಹಮಂತ್ರಿ" ಎಂದೇ ಖ್ಯಾತರಾದವರು. ತೀವ್ರ ಸ್ವರೂಪದ ಸ್ವತಂತ್ರ ಹೋರಾಟದಲ್ಲಿ ಭಾಗಿಯಾಗುತ್ತಿದ್ದ ಬಹದ್ದೂರ್ ರವರು ಒಟ್ಟು ಏಳು ಬಾರಿ ಜೈಲು ಶಿಕ್ಷೆ ಅನುಭವಿಸಿದರು. ಮಗಳ ಅಸೌಖ್ಯ ಮಗನ ಕಾಯಿಲೆ ಯಾವುದಕ್ಕೂ ಜೈಲು ಶಿಕ್ಷೆಯಲ್ಲಿ ರಿಯಾಯಿತಿ ಇರಲಿಲ್ಲ. ಮಗಳಿಗೆ ಹುಷಾರಿಲ್ಲವೆಂದು ರಜೆ ಕೇಳಿ, ಅದು ಸಿಕ್ಕಿ ಮನೆಗೆ ಬಂದಾಗ ಮಗಳು ಇಹಲೋಕ ತ್ಯಜಿಸಿಯಾಗಿತ್ತು. ಇನ್ನು ಮಗನ ಆರೋಗ್ಯ ಸುಧಾರಣೆ ಯಾಗುವುದರೊಳಗೆ ಜೈಲಿಗೆ ಮತ್ತೆ ಹೋಗಬೇಕಾಯಿತು. ವೈಯಕ್ತಿಕ ವಿಷಯಗಳನ್ನೆಲ್ಲಾ ಬದಿಗಿಟ್ಟು ದೇಶವೇ ಮುಖ್ಯವಾಗಿತ್ತು ಲಾಲ್ ಬಹದ್ದೂರ್ ರವರಿಗೆ. ದೇಶದ ನಾಯಕನಿಗೆ ಇರಲೇ ಬೇಕಾದ ಗುಣಗಳು ನಿಷ್ಠೆ ಮತ್ತು ದಕ್ಷತೆ. ಎಂತಹ ಕಠಿಣ ಸಮಯದಲ್ಲೂ ಕೂಡ ತಮ್ಮ ಗುರಿಯನ್ನು ಬಿಟ್ಟು ಕೊಡದ ನಿಶ್ಚಲತೆ ಲಾಲ್ ಬಹಾದ್ದೂರ್ ರವರದ್ದು.

ರಾಜಕೀಯ ಜೀವನದಲ್ಲಿ ಮುಂದೆ ಮಂತ್ರಿಯಾದಾಗ, ಆಮೇಲೆ ಭಾರತದ ಪ್ರಧಾನ ಮಂತ್ರಿಯಾದಾಗಲೂ ವೈಭವದ ಜೀವನಕ್ಕೆ ಮನಸೋಲಲಿಲ್ಲ. ದೇಶದ ಆರ್ಥಿಕ ವ್ಯವಸ್ಥೆ ಹೀನಾಯ ಸ್ಥಿತಿಗೆ ತಲುಪಿದಾಗ ವಾರದ ಒಂದು ಹೊತ್ತು ಉಪವಾಸ ಮಾಡುವ ನಿರ್ಧಾರ ಕೈಗೊಂಡರು, ಅಲ್ಲದೇ ದೇಶವಾಸಿಗಳಲ್ಲೂ ಮನವಿ ಮಾಡಿದರು. ಅದಕ್ಕೆ ದೇಶದ ಜನತೆ ಸ್ಪಂದಿಸಿದರು. ಪ್ರತಿ ಸೋಮವಾರದಂದು ಉಪವಾಸ ಮಾಡಲು ಇಡೀ ದೇಶವೇ ಕೈ ಜೋಡಿಸಿತು.

ಭಾರತ–ಪಾಕ್, ಭಾರತ–ಚೈನಾ ಯುದ್ಧಗಳ ನಿರ್ಣಾಯಕ ಸಂಧರ್ಭದಲ್ಲಿ ಯಾವುದೇ ಅಂಜಿಕೆ ಅಳುಕಿಲ್ಲದೆ ಧೃಡ ನಿರ್ಧಾರ ತೆಗೆದುಕೊಂಡು ಸಫಲನಾದ ನಾಯಕ. ಯುದ್ಧದ ಸಂಧರ್ಭದಲ್ಲಿ ವಿಶ್ವಸಂಸ್ಥೆಯ ಕದತಟ್ಟದೆ, ಅಂತರಾಷ್ಟ್ರೀಯ ಬೆದರಿಕೆಗಳಿಗೆ ಬಗ್ಗದೆ ತಕ್ಷಣ ಸೈನ್ಯಗಳಿಗೆ ಮಾರ್ಗದರ್ಶನ ಮಾಡಿದವರು. "ಜೈ ಜವಾನ್ ಜೈ ಕಿಸಾನ್" ಎಂಬ ಧ್ಯೇಯ ವಾಕ್ಯದಂತೆ ನಡೆದವರು. ಮಾತು, ಮನಸ್ಸು ಹಾಗೂ ಕೆಲಸ ಮೂರನ್ನು ಶುದ್ಧವಾಗಿಟ್ಟುಕೊಂಡ ನಾಯಕನ ಕೇವಲ 17 ತಿಂಗಳು ಪ್ರಧಾನ ಮಂತ್ರಿ ಪಟ್ಟದಲ್ಲಿದ್ದರು ಯಾರಿಂದಲೂ ಮಾಡಲಾಗದ ಸಾಧನೆಗಳನ್ನು ಮಾಡಿ ಇತಿಹಾಸದ ಪುಟದಲ್ಲಿ ಅಚ್ಚಳಿಯದ ನೆನಪಾಗಿ ಕಾಡುವವರು ನಮ್ಮ ನೆಚ್ಚಿನ ಆದರ್ಶ ನಾಯಕ ಲಾಲ್ ಬಹದ್ದೂರ್ ಶಾಸ್ತ್ರಿ, ಅವರಿಗೆ ಅವರ ಬಾಲ್ಯದ ಮಹತ್ವ ಘಟನೆಗಳೇ ಅವರನ್ನು ಇಂತಹದೊಂದು ಮಹಾನ್ ಕಾರ್ಯಮಾಡಲು ದಾರಿ ತೋರಿಸಿತೆಂದರೆ ತಪ್ಪಾಗದು. ॐ

**ಸಮೃದ್ಧಿ ಸುಜ್ಞಾನ**

ಆರ್ಥಿಕ ಸ್ಥಿತಿ ಎಷ್ಟೇ ಚೆನ್ನಾಗಿದ್ದರೂ ಕೂಡ
ಜೀವನದ ನಿಜವಾದ ಸಂತೋಷ ಅನುಭವಿಸಲು
ಮಾನಸಿಕ ಸ್ಥಿತಿ ಚೆನ್ನಾಗಿರಬೇಕು.




# ಪುತ್ರಕಾಮೇಷ್ಠಿ ಯಾಗದಿಂದ ಬಂದ ಪುತ್ರ

ಅಯೋಧ್ಯೆ ಕೋಸಲ ದೇಶದ ಸರಯೂ ನದಿಯ ದಡದಲ್ಲಿರುವ ಭವ್ಯವಾದ ನಗರ. ವಿಶಾಲವಾದ ರಸ್ತೆಗಳು, ಬೃಹತ್ ಕಟ್ಟಡಗಳು, ಸುಂದರವಾದ ಉದ್ಯಾನವನಗಳು ಮತ್ತು ಹೊಳೆಯುವ ಅಂಗಡಿಗಳನ್ನು ಹೊಂದಿತ್ತು. ದಶರಥ ಎಂಬ ಅದ್ಭುತ ರಾಜನಿಂದ ಆಳಲ್ಪಟ್ಟದ್ದರಿಂದ ನಗರದ ಜನರು ಸಂತೋಷದ ಮತ್ತು ಸಂತೃಪ್ತಿಯ ಜೀವನವನ್ನು ನಡೆಸುತ್ತಿದ್ದರು. ಅವನು ತನ್ನ ಜನರನ್ನು ಬಹಳ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದನು.

ರಾಜ ದಶರಥನಿಗೆ ಕೌಸಲ್ಯ, ಸುಮಿತ್ರಾ ಮತ್ತು ಕೈಕೇಯಿ ಎಂಬ ಮೂವರು ಹೆಂಡತಿಯರು ಇದ್ದರು. ಕೌಸಲ್ಯ ಹಿರಿಯ ರಾಣಿ. ಈ ರೀತಿಯಲ್ಲಿ ಅವನ ಉಳಿದ ಹೆಂಡತಿಯರನ್ನು ಬಹಳ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದನು.

ಆದರೆ ಅಂತಹ ಉತ್ತಮ ಜೀವನವನ್ನು ನಡೆಸುತ್ತಿದ್ದರೂ ಸಹ, ದಶರಥನು ಇನ್ನೂ ಅತೃಪ್ತಿ ಹೊಂದಿದ್ದನು. ಅವನಿಗೆ ವಯಸ್ಸಾಗುತ್ತಿದ್ದು ಸಿಂಹಾಸನವನ್ನೇರಲು ಮಕ್ಕಳಿಲ್ಲದ ಕಾರಣ ತುಂಬಾ ದುಃಖಿತನಾಗಿದ್ದನು. ರಾಜನ ದುಃಖವನ್ನು ನೋಡಲು ಸಾಧ್ಯವಾಗಲಿಲ್ಲ, ಋಷಿಮುನಿಗಳು ಯಜ್ಞವನ್ನು ಕೈಗೊಳ್ಳಲು ಮತ್ತು ಮಕ್ಕಳಿಗಾಗಿ ಪ್ರಾರ್ಥಿಸುವಂತೆ ಸಲಹೆ ನೀಡಿದರು. ಅವರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ದಶರಥನು ಯಜ್ಞವನ್ನು ಮಾಡಿ ಸಂತೋಷಪಟ್ಟನು, ಅಗ್ನಿದೇವ ಯಜ್ಞಕುಂಡದಿಂದ ಹೊರಬಂದು, ಸಿಹಿಯಾದ ಹಾಲನ್ನು ಹೊಂದಿರುವ ಒಂದು ಬಟ್ಟಲನ್ನು ರಾಜನಿಗೆ ಹಸ್ತಾಂತರಿಸಿ ಅವನಿಗೆ "ಓ ರಾಜ! ಈ ಪಾಯಸವನ್ನು ಸ್ವರ್ಗದಲ್ಲಿರುವ ದೇವರುಗಳು ಸಿದ್ಧಪಡಿಸಿದ್ದಾರೆ. ನೀನು ಈ ಪಾಯಸವನ್ನು ನಿನ್ನ ಹೆಂಡತಿಯರಿಗೆ ಕುಡಿಸು ಮಕ್ಕಳ ಭಾಗ್ಯ ಪ್ರಾಪ್ತವಾಗುವುದೆಂದು ಹೇಳಿ ಹೊರಟುಹೋದರು. ದಶರಥನು ಸಂತೋಷಪಟ್ಟನು. ಈ ವರಕ್ಕಾಗಿ ಅಗ್ನಿದೇವನಿಗೆ ಧನ್ಯವಾದಗಳನ್ನು ಅರ್ಪಿಸಿ ಪಾಯಸದ ಅರ್ಧಭಾಗವನ್ನು ಕೌಸಲ್ಯಳಿಗೆ ನೀಡಿ ಉಳಿದ ಅರ್ಧಭಾಗದಲ್ಲಿ ಸುಮಿತ್ರೆ ಮತು ಕೈಕೇಯಿಗೆ ನೀಡಿದನು.



ತರುವಾಯ ಮೂವರು ರಾಣಿಯರು ಗಂಡುಮಕ್ಕಳಿಗೆ ಜನ್ಮ ನೀಡಿದರು, ಕೌಸಲ್ಯ ಶ್ರೀರಾಮನಿಗೆ, ಸುಮಿತ್ರೆ ಲಕ್ಷ್ಮಣ ಮತ್ತು ಶತ್ರುಘ್ನರಿಗೆ ಮತ್ತು ಕೈಕೇಯಿ ಭರತನಿಗೆ ಜನ್ಮ ನೀಡದರು. ರಾಜ ದಶರಥನು ತುಂಬಾ ಸಂತೋಷಪಟ್ಟನು ಮತ್ತು ಅಯೋಧ್ಯೆಯ ಜನರು ಕೂಡ ಬಹಳ ಸಂತೋಷದಿಂದ, ನಾಲ್ಕು ರಾಜಕುಮಾರರ ಜನ್ಮ ದಿನವನ್ನು ಆಚರಿಸಿದರು.

**ಚಂದ್ರನ ಕೇಳಿದ್ದ ಶ್ರೀ ರಾಮಚಂದ್ರ :**

ಶ್ರೀರಾಮಚಂದ್ರ ಆಗಿನ್ನೂ ಬಾಲಕ. ಮೂವರು ತಾಯಂದಿರ ಮಡಿಲಲ್ಲಿ, ಮೂವರು ತಮ್ಮಂದಿರ ಜೊತೆಗೆ ಆಟವಾಡುತ್ತಿದ್ದ. ಅಂದು ಹುಣ್ಣಿಮೆ. ಬಾನಿನಲ್ಲಿ ಚಂದ್ರಮ ಪೂರ್ಣ ಪ್ರಭೆಯಿಂದ ಜಗಮಗಿಸುತ್ತಿದ್ದ. ಅದನ್ನು ನೋಡಿ ರಾಮ, ನನಗೆ ಚಂದಿರ ಬೇಕು ಎಂದು ಹಠ ಹಿಡಿದ. ಯಾರು ಬಂದು ಏನೇ ಸಮಜಾಯಿಷಿ ನೀಡಿದರೂ ರಾಮನಿಗೆ ಸಮಾಧಾನವಾಗಲಿಲ್ಲ. ಏನು ಮಾಡುವುದು ಎಂದೇ ಯಾರಿಗೂ ಗೊತ್ತಾಗಲಿಲ್ಲ. ಆಗ ಅಲ್ಲಿಗೆ ದಾಸಿ ಮಂಥರೆ ಬಂದಳು. ರಾಮನ ಹಠ ನೋಡಿ, ಒಂದು ಕನ್ನಡಿ ತರಿಸಿ, ರಾಮನ ಮುಖಕ್ಕೆ

ಹಿಡಿದಳು. ಅಲ್ಲಿ ಹೊಳೆಯುತ್ತಿದ್ದ ತನ್ನದೇ ಮುಖವನ್ನು ನೋಡಿದ ರಾಮ, ಚಂದ್ರನನ್ನೇ ಪಡೆದೆ ಎಂಬ ಖುಷಿಯಲ್ಲಿ ಸುಮ್ಮನೆ ಆಟವಾಡತೊಡಗಿದ. ಶ್ರೀರಾಮ ಹೀಗೆ ತನ್ನ ಬಾಲಲೀಲೆಗೆ ಆರಿಸಿಕೊಂಡಿದ್ದು ಮಂಥರೆಯನ್ನು.

ದಶರಥನು ತನ್ನ ಎಲ್ಲ ಮಕ್ಕಳನ್ನು ತುಂಬಾ ಪ್ರೀತಿಸುತ್ತಿದ್ದನು. ಆದರೆ ರಾಮನು ಅವನಿಗೆ ಪ್ರಿಯನಾಗಿದ್ದನು. ಅವನು ತನ್ನ ಸುಂದರ ಹಿರಿಯ ಮಗನ ಬಗ್ಗೆ ತುಂಬಾ ಹೆಮ್ಮೆಪಡುತ್ತಿದ್ದನು ಮತ್ತು ಒಂದು ಕ್ಷಣವೂ ಅವನಿಂದ ದೂರವಿರುವುದನ್ನು ಸಹಿಸುತ್ತಿರಲಿಲ್ಲ.

ನಾಲ್ಕು ಮಕ್ಕಳಿಗೂ ಜಾತಕರ್ಮದಿಂದ ಆರಂಭವಾಗಿ ಉಪನಯನದವರೆಗೆ ವಸಿಷ್ಠರ ನೇತೃತ್ವದಲ್ಲಿ ಸಂಸ್ಕಾರಗಳು ನಡೆದವು.

ನಾಲ್ವರು ಬಾಲಕರೂ ವೇದಗಳನ್ನು ಅಧ್ಯಯನ ಮಾಡಿದರು, ಬಿಲ್ವಿದ್ಯೆಯನ್ನೂ ಕಲಿತರು, ಪ್ರಜೆಗಳನ್ನು ಕಾಪಾಡುವುದು ತಮ್ಮ ಕರ್ತವ್ಯ ಎಂದು ಆ ವಯಸ್ಸಿನಲ್ಲಿಯೇ ಅರಿತರು. ಎಲ್ಲರಿಗೂ ಹಿರಿಯ ರಾಮ, ಅವನನ್ನು ಕಂಡರೆ ಪ್ರಜೆಗಳು ಚಂದ್ರನನ್ನು ನೋಡಿದಂತೆ ಸಂಭ್ರಮಿಸುತ್ತಿದ್ದರು. ಅವನು ಆನೆಸವಾರಿ, ಕುದುರೆಸವಾರಿ, ರಥಸಂಚಾರ ಹೀಗೆ ರಾಜಕುಮಾರರಿಗೆ ಒಪ್ಪತಕ್ಕ ಎಲ್ಲ ವಿದ್ಯೆಗಳಲ್ಲೂ ಚೆನ್ನಾಗಿ ಪಳಗಿದ್ದ. ಶೌರ್ಯವನ್ನು ಸಂಪಾದಿಸುವುದರಲ್ಲಿ ಮಾತ್ರವೇ ಅವನ ಆಸಕ್ತಿ ಇರಲಿಲ್ಲ ಪಿತೃಸೇವೆಯಲ್ಲೂ ಶ್ರದ್ಧೆಯಿಂದ ತೊಡಗಿಕೊಂಡಿದ್ದ.

ರಾಮ ಮತ್ತು ಲಕ್ಷ್ಮಣ ಇವರಿಬ್ಬರೂ ಅತ್ಯಂತ ಸ್ನೇಹದಿಂದ ಇದ್ದರು. ರಾಮ ತನ್ನನ್ನು ತಾನು ಇಷ್ಟಪಡುವುದಕ್ಕಿಂತಲೂ ಲಕ್ಷ್ಮಣನನ್ನು ಹೆಚ್ಚು ಪ್ರೀತಿಸುತ್ತಿದ್ದ ತನ್ನ ಪ್ರಾಣವೇ ಹೊರಗೆ ಲಕ್ಷ್ಮಣನ ರೂಪದಲ್ಲಿ ಸಂಚರಿಸುತ್ತಿದೆ ಎನ್ನುವಷ್ಟು ತಾದಾತ್ಮ್ಯ ಅವನಲ್ಲಿ. ಇಬ್ಬರೂ ಏನನ್ನು ತಿಂದರೂ ಜೊತೆಯಲ್ಲಿಯೇ ಹಂಚಿ ತಿನ್ನುತ್ತಿದ್ದರು. ರಾಮನು ಬೇಟೆಗೆಂದು ತೆರಳಿದರೆ ಲಕ್ಷ್ಮಣನು ಬಿಲ್ಲನ್ನು ಹಿಡಿದು ಅವನ ಹಿಂದೆಯೇ ಹೊರಟುಬಿಡುತ್ತಿದ್ದ. ಅದೇ ರೀತಿಯಲ್ಲಿ ಭರತನಿಗೆ ಶತ್ರುಘ್ನನಲ್ಲಿ ತುಂಬ ಪ್ರೀತಿ ರಾಮನಿಗೆ ಲಕ್ಷ್ಮಣನಂತೆ ಭರತನಿಗೆ ಶತ್ರುಘ್ನ. ಈ ನಾಲ್ವರು ಮುದ್ದಾದ, ಮೇಧಾವಿಗಳಾದ, ವಿನಯಶೀಲರಾದ, ಕೀರ್ತಿಶಾಲಿಗಳಾದ, ವಿವೇಕಿಗಳಾದ ಮಕ್ಕಳೊಡಗೂಡಿ ದಶರಥನು ಬ್ರಹ್ಮದೇವನಂತೆ ಹರ್ಷದಿಂದಿದ್ದ. ಹೀಗೆ ಕೆಲವು ವರ್ಷಗಳು ಕಳೆದವು.

**ಬಾಲ್ಯದಲ್ಲೇ ರಾಕ್ಷಸರ ಬಲಿ ಪಡೆದ ರಾಮಬಾಣ :**

ನಾಲ್ಕು ರಾಜಕುಮಾರರು ದಷ್ಟಪುಷ್ಟ ಮತ್ತು ಸೌಂದರ್ಯವಂತರಾಗಿ ಬೆಳೆದರು. ಋಷಿವಶಿಷ್ಠರ ಮಾರ್ಗದರ್ಶನದಲ್ಲಿ, ಅವರು ಬಿಲ್ಲುಗಾರಿಕೆ, ಸವಾರಿ ಮತ್ತು ಬೇಟೆಯಲ್ಲಿ ತಮ್ಮನ್ನು ತಾವು ಶ್ರೇಷ್ಠಗೊಳಿಸಿಕೊಂಡರು. ಅವರು ಪವಿತ್ರ ಪುಸ್ತಕಗಳ ಬಗ್ಗೆ ಮತ್ತು ಜನರ ಕಲ್ಯಾಣವನ್ನು ಹೇಗೆ ನೋಡಿಕೊಳ್ಳಬೇಕು ಎಂಬುದರ ಬಗ್ಗೆಯೂ ಕಲಿತರು. ಅವರು ತಮ್ಮ ಗುರುಗಳನ್ನು ಮತ್ತು ಹಿರಿಯರನ್ನು ಗೌರವಿಸುತ್ತಿದ್ದರು ಮತ್ತು ಅಯೋಧ್ಯೆಯ ಜನರ ಪ್ರೀತಿಯನ್ನು ಗಳಿಸಿದರು. ಸಹೋದರರು ಒಬ್ಬರನ್ನೊಬ್ಬರು ತುಂಬಾ ಪ್ರೀತಿಸುತ್ತಿದ್ದರು. ಲಕ್ಷ್ಮಣನು ರಾಮನಿಗೆ ಬಹಳ ಆಪ್ತ ಒಡನಾಡಿ ಹಾಗೆಯೆ ಭರತ ಮತ್ತು ಶತ್ರುಘ್ನರೂ ಕೂಡ.

ರಾಜ ದಶರಥನು ತನ್ನ ಪುತ್ರರ ಬಗ್ಗೆ ಬಹಳ ಹೆಮ್ಮೆಪಡುತ್ತಿದ್ದನು. ಒಂದು ದಿನ ಅವನು ತಮ್ಮ ಪುತ್ರರಿಗೆ ಸೂಕ್ತವಾದ ವಧುಗಳನ್ನು ಹುಡುಕುವ ಬಗ್ಗೆ ವಶಿಷ್ಠಮುನಿ ಅವರೊಂದಿಗೆ ಚರ್ಚಿಸುತ್ತಿದ್ದನು. ಆ ಸಮಯದಲ್ಲಿ ವಿಶ್ವಾಮಿತ್ರ ಎಂಬ ಮಹಾನ್ ಋಷಿ ದಶರಥನ ಆಸ್ಥಾನಕ್ಕೆ ಬಂದನು. ರಾಜನು ವಿಶ್ವಾಮಿತ್ರ ಮುನಿಗಳನ್ನು ಬಹಳ ವಿಜೃಂಭಣೆಯಿಂದ ತನ್ನ ಅರಮನೆಗೆ ಸ್ವಾಗತಿಸಿದನು.

ಆತ್ಮೀಯ ಆತಿಥ್ಯವನ್ನು ನೀಡಿದ ನಂತರ ಅವರು ವಿಶ್ವಾಮಿತ್ರನನ್ನು ಕೇಳಿದನು. “ಓ ಮಹಾನ್ ಋಷಿಮುನಿಗಳೇ! ನಿಮ್ಮ ಭೇಟಿ ನನಗೆ ತುಂಬಾ ಸಂತೋಷತಂದಿದೆ. ನಿಮ್ಮ ಭೇಟಿಯ ಉದ್ದೇಶವನ್ನು ಹೇಳಿ. ನಿಮ್ಮ ಆಶಯಕ್ಕೆ ಬದ್ಧರಾಗಿರುವುದು ದೊಡ್ಡ ಗೌರವವೆಂದು ನಾನು ಭಾವಿಸುತ್ತೇನೆ. ”

**ಮನೆ ಮದ್ದು**


ಕಡಲೆಕಾಳು ಗಾತ್ರದ ಇಂಗನ್ನು ಬೇವಿನ ಸೊಪ್ಪಿನ ರಸದಲ್ಲಿ ಸೇರಿಸಿ ಸೇವಿಸಿದರೆ ಮಲದೊಂದಿಗೆ ಜಂತುಹುಳು ಬೀಳುವುದು.

ರಾಜನ ಮಾತುಗಳಿಂದ ಸಂತಸಗೊಂಡ ವಿಶ್ವಾಮಿತ್ರನು ಅವನಿಗೆ “ರಾಜ ದಶರಥಾ! ನಿಮ್ಮ ಆತಿಥ್ಯದಿಂದ ನನಗೆ ಸಂತೋಷವಾಗಿದೆ. ನೀವು ಯಾವಾಗಲೂ ನಿಮ್ಮ ಮಾತನ್ನು ಉಳಿಸಿಕೊಳ್ಳುತ್ತೀರಿ ಎಂದು ನಾನು ಕೇಳಿದ್ದೇನೆ. ಅದಕ್ಕಾಗಿಯೇ ನಾನು ಇಲ್ಲಿದ್ದೇನೆ. ನಾನು ಯಜ್ಞವನ್ನು ಮಾಡಲಿದ್ದೇನೆ ಆದರೆ ಮಾರೀಚಾ ಮತ್ತು ಸುಬಾಹು ಎಂಬ ಎರಡು ರಾಕ್ಷಸರು ರಕ್ತ ಮತ್ತು ಮಾನವ ಮಾಂಸವನ್ನು ಯಜ್ಞಕುಂಡಕ್ಕೆ ಸುರಿದು ಯಜ್ಞವನ್ನು ಕಲುಷಿತಗೊಳಿಸುತ್ತಿದ್ದಾರೆ. ನಾನು ಪವಿತ್ರ ಕಾರ್ಯದಲ್ಲಿ ತೊಡಗಿರುವ ಕಾರಣ ಅವರ ಮೇಲೆ ಯಾವುದೇ ಶಾಪ ಹಾಕಲು ಸಾಧ್ಯವಿಲ್ಲ. ಆದರೆ ಈ ರಾಕ್ಷಸರನ್ನು ಕೊಲ್ಲುವವರೆಗೂ ನಾನು ಯಜ್ಞವನ್ನು ಮಾಡಲು ಸಾಧ್ಯವಿಲ್ಲ. ರಾಮ, ನಿಮ್ಮ ಮಗ, ಅವರನ್ನು ಕೊಲ್ಲಬಲ್ಲ ಒಬ್ಬ ಧೀರ ವ್ಯಕ್ತಿ. ಆದ್ದರಿಂದ, ದಯವಿಟ್ಟು ಅವನನ್ನು ನನ್ನೊಂದಿಗೆ ಹತ್ತು ದಿನಗಳವರೆಗೆ ಕಳುಹಿಸಿ. ಯಜ್ಞ ಪೂರ್ಣಗೊಂಡ ಕೂಡಲೇ ನಾನು ರಾಮನನ್ನು ಅಯೋಧ್ಯೆಗೆ ಕಳುಹಿಸುತ್ತೇನೆ. ”

**ಶ್ರೀ ರಾಮನೇ ಬೇಕೆಂದ ವಿಶ್ವಾಮಿತ್ರರು :**

ವಯಸ್ಸಾದ ಮುನಿಗಳ ಈ ವಿನಂತಿಯನ್ನು ಕೇಳಿದಾಗ, ಅವನು ತನ್ನ ಚಿಕ್ಕ ಮಗನನ್ನು ರಾಕ್ಷಸರ ವಿರುದ್ಧ ಹೋರಾಡಲು ಕಳುಹಿಸುವ ಬಗ್ಗೆ ಆತಂಕಗೊಂಡು ವಿಶ್ವಾಮಿತ್ರನನ್ನು ಬೇಡಿಕೊಂಡನು, “ನನ್ನ ಪ್ರೀತಿಯ ಮಗ ರಾಮ ಇನ್ನೂ ಚಿಕ್ಕವನು. ಅವನು ರಾಕ್ಷಸರ ವಿರುದ್ಧ ಹೇಗೆ ಹೋರಾಡಬಹುದು? ರಾಮನ ಬದಲು, ಯಜ್ಞವನ್ನು ನಡೆಸಲು ನಿಮಗೆ ಸಹಾಯ ಮಾಡಲು ನನ್ನ ಸಂಪೂರ್ಣ ಸೈನ್ಯವನ್ನು ಕಳುಹಿಸುತ್ತೇನೆ. ರಾಮನಿಂದ ಬೇರ್ಪಡಿಸುವುದನ್ನು ನಾನು ಸಹಿಸಲಾರೆ ಆದ್ದರಿಂದ ದಯವಿಟ್ಟು ಈ ಸಂಕಟವನ್ನು ಬಿಟ್ಟುಬಿಡಿ.” ದಶರಥನ ಮಾತಿಗೆ ವಿಶ್ವಾಮಿತ್ರನು ಕೋಪಗೊಂಡನು. “ಓ ರಾಜ, ನೀನು ನಿನ್ನ ಮಾತಿಗೆ ಹಿಂತಿರುಗುತ್ತಿದ್ದೀಯ. ನಾನು ರಾಮನನ್ನು ಹೊರತುಪಡಿಸಿ ಯಾರನ್ನೂ ಬಯಸುವುದಿಲ್ಲ”. ಎಂದು ಹೇಳಿ ಅವರು ಆಸ್ಥಾನದಿಂದ ಕೋಪಗೊಂಡು ಹೊರನಡೆಯಲು ನಿರ್ಧರಿಸಿದರು. ಈ ಸಮಯದಲ್ಲಿ, ವಶಿಷ್ಠ ಅವನನ್ನು ಸಮಾಧಾನಪಡಿಸಿ ದಶರಥನಿಗೆ ಹೇಳಿದನು. “ರಾಮನನ್ನು ಕಳುಹಿಸಲು ಹಿಂಜರಿಯಬೇಡಿ. ವಿಶ್ವಾಮಿತ್ರರು ಸ್ವತಃ ರಾಕ್ಷಸರನ್ನು ಕೊಲ್ಲುವುದು ಕಷ್ಟದ ಕೆಲಸವಲ್ಲ ಏಕೆಂದರೆ ಅವರು ತುಂಬಾ ಶಕ್ತಿಶಾಲಿ. ಅವರು ರಾಮನನ್ನು ತಮ್ಮೊಂದಿಗೆ ಕರೆದುಕೊಂಡು ಹೋಗಲು ಬಯಸುತ್ತಾರೆ, ಇದರಿಂದಾಗಿ ನಿಮ್ಮ ಮಗ ಈ ಚಿಕ್ಕ ವಯಸ್ಸಿನಲ್ಲಿಯೂ ರಾಕ್ಷಸರೊಂದಿಗೆ ಹೋರಾಡಲು ಕಲಿಯಬಹುದು. ರಾಮನನ್ನು ಅವರೊಂದಿಗೆ ಕಳುಹಿಸಿ. ಹೆಚ್ಚಿನ ಸಂಕೋಚವಿಲ್ಲದೆ, ರಾಜ ತನ್ನ ಸಹೋದರನೊಂದಿಗೆ ಇರಬೇಕೆಂದು ಬಯಸಿದ ರಾಮ ಮತ್ತು ಲಕ್ಷ್ಮಣನನ್ನು ಆಶೀರ್ವದಿಸಿ ವಿಶ್ವಾಮಿತ್ರರೊಂದಿಗೆ ಕಳುಹಿಸಿದನು.

ವಿಶ್ವಾಮಿತ್ರ ರಾಜಕುಮಾರರ ಜೊತೆ ಬರಿಗಾಲಿನಲ್ಲಿ ಪ್ರಯಾಣಿಸುತ್ತಿದ್ದು ಮೊದಲು ಸರಯು ನದಿಯನ್ನು ಮತ್ತು ನಂತರ ಗಂಗಾ ನದಿಯನ್ನು ದಾಟಿದರು. ರಾಮ ಮತ್ತು ಲಕ್ಷ್ಮಣರು ಕಷ್ಟಗಳನ್ನು ಪ್ರೀತಿಯಿಂದ ಸ್ವಾಗತಿಸಿದರು, ಏಕೆಂದರೆ ವಿಶ್ವಾಮಿತ್ರರಿಂದ ಅನೇಕ ವಿಷಯಗಳ ಬಗ್ಗೆ ಕಲಿಯುವ ಅವಕಾಶವಾಗಿದೆ. ಹಲವು ದಿನಗಳ ನಡಿಗೆಯ ನಂತರ, ಅವರು ದಟ್ಟ ಅರಣ್ಯವನ್ನು ಪ್ರವೇಶಿಸಿದರು, ಅಲ್ಲಿ ತಾಟಕಿ ಎಂಬ ರಾಕ್ಷಸಿ ವಾಸಿಸುತ್ತಿದ್ದಳು ವಿಶ್ವಾಮಿತ್ರರು ರಾಕ್ಷಸಿಯನ್ನು ಕೊಲ್ಲಲು ಸೂಚಿಸಿದರು. ರಾಮನು ತನ್ನ ಬಾಣವನ್ನು ಎಳೆದು ತಾಟಕಿಯನ್ನು ಗುರಿಯಾಗಿಸಿಕೊಂಡನು. ರಾಕ್ಷಸಿ ರಾಮನ ಕಡೆಗೆ ನೋಡ ನೋಡುತ್ತಲೇ ಬಾಣ ಎದೆಗೆ ನಾಟಿ ಕೊಲ್ಲಲ್ಪಟ್ಟಳು. ವಿಶ್ವಾಮಿತ್ರರು ರಾಮನ ಬಗ್ಗೆ ತುಂಬಾ ಸಂತೋಷಪಟ್ಟರು ಮತ್ತು ಅವನಿಗೆ ಶಕ್ತಿಶಾಲಿ ಆಯುಧಗಳನ್ನು ಉಡುಗೊರೆಯಾಗಿ ಕೊಟ್ಟರು. ರಾಮ ಲಕ್ಷ್ಮಣರು ಅವರನ್ನು ಮನೋಹರವಾಗಿ ಒಪ್ಪಿಕೊಂಡರು ಮತ್ತು ವಿಶ್ವಾಮಿತ್ರರಿಂದ ಅವುಗಳ ಬಳಕೆಯ ಬಗ್ಗೆ ಕಲಿತರು. ಮೂವರು ತಮ್ಮ ಪ್ರಯಾಣವನ್ನು ಮುಂದುವರೆಸಿ ಯಜ್ಞವನ್ನು ಮಾಡಬೇಕಾದ ಸ್ಥಳವನ್ನು ತಲುಪಿದರು. ಆಶ್ರಮದ ಋಷಿಗಳು ತಮ್ಮ ಜೊತೆಯಲ್ಲಿ ರಾಮನನ್ನು ಹೊಂದಿದ್ದಕ್ಕೆ ಸಂತೋಷಪಟ್ಟರು. ರಾಜಕುಮಾರರು ರಾತ್ರಿಯಿಡೀ ವಿಶ್ರಾಂತಿ ಪಡೆದರು ಮತ್ತು ಮರುದಿನ ಬೆಳಿಗ್ಗೆಯಿಂದ ಯಜ್ಞವನ್ನು ರಾಕ್ಷಸರ ವಿರುದ್ಧ ಪ್ರಾರಂಭಿಸಿ ಕೊನೆಯ ದಿನದವರೆಗೂ ಯಾವುದೇ ತೊಂದರೆ ಇಲ್ಲದೆ ಸರಾಗವಾಗಿ ನಡೆಸಲು ಪ್ರಾರಂಭಿಸಿದರು ಆದರೆ ಯಜ್ಞದ ಕೊನೆಯ ದಿನ, ಇದ್ದಕ್ಕಿದ್ದಂತೆ, ಮಾಂಸ ಮತ್ತು ರಕ್ತದ ತುಂಡು ಪವಿತ್ರ ಬೆಂಕಿಯಲ್ಲಿ ಬಿದ್ದಿತು. ರಾಮನು ಮಾರೀಚಾ ಮತ್ತು ಸುಬಾಹುರನ್ನು ನೋಡಿದನು. ಶಸ್ತ್ರಾಸ್ತ್ರಗಳು ಮತ್ತಷ್ಟು ಪ್ರಬಲ ಮತ್ತು ಶಕ್ತಿಯುತವಾಗಿದೆಯೆಂದರೆ, ಮಾರೀಚಾ ಋಷಿಗಳನ್ನು ನೂರಾರು ಮೈಲುಗಳಷ್ಟು ದೂರದಲ್ಲಿರುವ ಸಮುದ್ರಕ್ಕೆ ಎಸೆದನು, ಆದರೆ ಸುಬಾಹು ಬೆಂಕಿಯ ಚೆಂಡಿನಲ್ಲಿ ಮುಳುಗಿದ್ದರಿಂದ ಮಾರೀಚಾ ಅವನನ್ನು ಕಾಪಾಡಲು ಹೋಗಿ ಇಬ್ಬರೂ ದುಷ್ಟ ರಾಕ್ಷಸರು ರಾಮನಿಂದ ನಾಶವಾದರು ಮತ್ತು ವಿಶ್ವಾಮಿತ್ರರು ಸಂತೋಷದಿಂದ ಯಜ್ಞವನ್ನು ಪೂರ್ಣಗೊಳಿಸಿ ನಿರಾಳರಾದರು. ಯಜ್ಞವನ್ನು ನಡೆಸಿದ ನಂತರ ವಿಶ್ವಾಮಿತ್ರ ಮತ್ತು ಇತರ ಋಷಿಗಳು ಮಿಥಿಲಾ ನಗರಕ್ಕೆ ತೆರಳಿದರು. ॐ



# ವಿಶ್ವ ಅಂಚೆ ದಿನ

ವಿಶ್ವ ಅಂಚೆ ದಿನವನ್ನು ಪ್ರತಿ ವರ್ಷ ಅಕ್ಟೋಬರ್ 9 ರಂದು ಆಚರಿಸಲಾಗುತ್ತದೆ, 1874 ರಲ್ಲಿ ಸ್ವಿಸ್ ರಾಜಧಾನಿ ಬರ್ನ್‌ನಲ್ಲಿ ಯೂನಿವರ್ಸಲ್ ಪೋಸ್ಟಲ್ ಯೂನಿಯನ್ ಸ್ಥಾಪನೆಯ ವಾರ್ಷಿಕೋತ್ಸವ. 1969 ರಲ್ಲಿ ಜಪಾನ್‌ನ ಟೋಕಿಯೊದಲ್ಲಿ ನಡೆದ ಯುಪಿಯು ಕಾಂಗ್ರೆಸ್‌ನಿಂದ ಇದನ್ನು ವಿಶ್ವ ಅಂಚೆ ದಿನವೆಂದು ಘೋಷಿಸಲಾಯಿತು. ಅಂದಿನಿಂದ, ಪ್ರಪಂಚದಾದ್ಯಂತದ ದೇಶಗಳು ವಾರ್ಷಿಕವಾಗಿ ಆಚರಣೆಗಳಲ್ಲಿ ಭಾಗವಹಿಸುತ್ತವೆ. ಅನೇಕ ದೇಶಗಳಲ್ಲಿನ ಪೋಸ್ಟ್‌ಗಳು ಹೊಸ ಅಂಚೆ ಉತ್ಪನ್ನಗಳು ಮತ್ತು ಸೇವೆಗಳನ್ನು ಪರಿಚಯಿಸಲು ಅಥವಾ ಪ್ರಚಾರ ಮಾಡಲು ಈವೆಂಟ್ ಅನ್ನು ಬಳಸುತ್ತವೆ.

2015 ರಲ್ಲಿ ಪ್ರಪಂಚದಾದ್ಯಂತದ ದೇಶಗಳು ಸುಸ್ಥಿರ ಅಭಿವೃದ್ಧಿ ಮತ್ತು ಗುರಿಗಳನ್ನು ಸಾಧಿಸಲು ಒಟ್ಟಾಗಿ ಕೆಲಸ ಮಾಡಲು ತಮ್ಮನ್ನು ತಾವು ತೊಡಗಿಸಿಕೊಂಡಿವೆ, ಇದು ತೀವ್ರ ಬಡತನ ಮತ್ತು ಹಸಿವನ್ನು ಕೊನೆಗೊಳಿಸುವ ಗುರಿಯನ್ನು ಹೊಂದಿದೆ, ಅಸಮಾನತೆ ಮತ್ತು ಅನ್ಯಾಯದ ವಿರುದ್ಧ ಹೋರಾಡುವುದು ಮತ್ತು ಹವಾಮಾನ ಬದಲಾವಣೆಯನ್ನು ಹಿಮ್ಮೆಟ್ಟಿಸಲು ಕ್ರಮ ಕೈಗೊಳ್ಳುವುದು. ಕೆಲವು ಹೊಸದನ್ನು ಹೆಸರಿಸಲು ಈ ಜಾಗತಿಕ ಪ್ರಯತ್ನದಲ್ಲಿ ತನ್ನ ಪಾತ್ರವನ್ನು ನಿರ್ವಹಿಸುತ್ತಿರುವ ಪೋಸ್ಟ್ ಇಂದು ಅಭಿವೃದ್ಧಿಗೆ ಮೂಲಸೌಕರ್ಯವನ್ನು ಒದಗಿಸುವ ಮೂಲಕ ಹಿಂದೆಂದಿಗಿಂತಲೂ ಹೆಚ್ಚು ಪ್ರಸ್ತುತವಾದ ಪಾತ್ರವನ್ನು ಹೊಂದಿದೆ.

ಪೋಸ್ಟ್ ವಿಶ್ವದ ಅತಿದೊಡ್ಡ ಲಾಜಿಸ್ಟಿಕ್ಸ್ ನೆಟ್‌ವರ್ಕ್ ಆಗಿದೆ. ಈ ಜಾಲಗಳು ಒಟ್ಟಾರೆ ಆರ್ಥಿಕತೆಯ ಹಸಿರು ಪರಿವರ್ತನೆಯನ್ನು ಹೇಗೆ ವೇಗಗೊಳಿಸುತ್ತಿವೆ ಎಂದರೆ ವೃತ್ತಾಕಾರದ ಆರ್ಥಿಕತೆಯು ಇನ್ನು ಮುಂದೆ ಹೊಸ ಪರಿಕಲ್ಪನೆಯಾಗಿಲ್ಲದಿದ್ದರೂ, ನಾವು ವೃತ್ತಾಕಾರದ ಆರ್ಥಿಕತೆಯ ತತ್ವಗಳೊಂದಿಗೆ ಹೊಂದಿಕೆಯಾಗಬೇಕು ಎಂಬುದು ಹಿಂದೆಂದಿಗಿಂತಲೂ ಹೆಚ್ಚು ಸ್ಪಷ್ಟವಾಗಿದೆ; ಹವಾಮಾನ ಬಿಕ್ಕಟ್ಟನ್ನು ನಿಭಾಯಿಸಲು ಪೋಸ್ಟ್‌ನ ಸಾಮರ್ಥ್ಯದ ಬಗ್ಗೆ ನಾವು ಜಾಗೃತಿ ಮೂಡಿಸಬೇಕು; ಮತ್ತು ನಾವು ಕ್ಷೇತ್ರಗಳಾದ್ಯಂತ ಒಟ್ಟಾರೆ ಸಂಪನ್ಮೂಲ ಕ್ರೋಢೀಕರಣವನ್ನು ಚಾಲನೆ ಮಾಡಬೇಕು.

**ಅಂತರಾಷ್ಟ್ರೀಯ ಪತ್ರ-ಬರವಣಿಗೆ ಸ್ಪರ್ಧೆ**

1971 ರಲ್ಲಿ ಪ್ರಾರಂಭವಾದ ವಾರ್ಷಿಕ ಸ್ಪರ್ಧೆಯು ಪತ್ರ ಬರೆಯುವ ಕಲೆಯ ಮೂಲಕ ಮಕ್ಕಳಲ್ಲಿ ಸಾಕ್ಷರತೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ. ಪ್ರತಿ ವರ್ಷ 1.2 ಮಿಲಿಯನ್‌ಗಿಂತಲೂ ಹೆಚ್ಚು ಸಂಖ್ಯೆಯಲ್ಲಿ ಜಾಗತಿಕವಾಗಿ

ಭಾಗವಹಿಸುವವರನ್ನು ಆಕರ್ಷಿಸುವ ಸ್ಪರ್ಧೆಯು 9–15 ವರ್ಷ ವಯಸ್ಸಿನ ಯುವಕರನ್ನು ನಿರ್ದಿಷ್ಟ ವಿಷಯದ ಮೇಲೆ ಪತ್ರಗಳನ್ನು ಬರೆಯಲು ಪ್ರೋತ್ಸಾಹಿಸುತ್ತದೆ.

**ಹಿನ್ನೆಲೆ**

ವಿಶ್ವ ಅಂಚೆ ದಿನದ ಉದ್ದೇಶವು ಜನರ ಮತ್ತು ವ್ಯವಹಾರಗಳ ದೈನಂದಿನ ಜೀವನದಲ್ಲಿ ಅಂಚೆ ಕ್ಷೇತ್ರದ ಪಾತ್ರ ಮತ್ತು ದೇಶಗಳ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಅದರ ಕೊಡುಗೆಯ ಬಗ್ಗೆ ಜಾಗೃತಿ ಮೂಡಿಸುವುದು. ಈ ಆಚರಣೆಯು ಸದಸ್ಯ ರಾಷ್ಟ್ರಗಳನ್ನು ರಾಷ್ಟ್ರೀಯ ಮಟ್ಟದಲ್ಲಿ ಸಾರ್ವಜನಿಕರು ಮತ್ತು ಮಾಧ್ಯಮಗಳಲ್ಲಿ ತಮ್ಮ ಪೋಸ್ಟ್‌ನ ಪಾತ್ರ ಮತ್ತು ಚಟುವಟಿಕೆಗಳ ಬಗ್ಗೆ ವಿಶಾಲವಾದ ಅರಿವು ಮೂಡಿಸುವ ಉದ್ದೇಶದಿಂದ ಕಾರ್ಯಕ್ರಮ ಚಟುವಟಿಕೆಗಳನ್ನು ಕೈಗೊಳ್ಳಲು ಪ್ರೋತ್ಸಾಹಿಸುತ್ತದೆ.

ಪ್ರತಿ ವರ್ಷ, 150 ಕ್ಕೂ ಹೆಚ್ಚು ದೇಶಗಳು ವಿಶ್ವ ಅಂಚೆ ದಿನವನ್ನು ವಿವಿಧ ರೀತಿಯಲ್ಲಿ ಆಚರಿಸುತ್ತವೆ. ಕೆಲವು ದೇಶಗಳಲ್ಲಿ, ವಿಶ್ವ ಅಂಚೆ ದಿನವನ್ನು ಕೆಲಸದ ರಜಾದಿನವಾಗಿ ಆಚರಿಸಲಾಗುತ್ತದೆ. ಅನೇಕ ಪೋಸ್ಟ್‌ಗಳು ಹೊಸ ಅಂಚೆ ಉತ್ಪನ್ನಗಳು ಮತ್ತು ಸೇವೆಗಳನ್ನು ಪರಿಚಯಿಸಲು ಅಥವಾ ಪ್ರಚಾರ ಮಾಡಲು ಈವೆಂಟ್ ಅನ್ನು ಬಳಸುತ್ತವೆ. ಕೆಲವು ಪೋಸ್ಟ್‌ಗಳು ತಮ್ಮ ಉದ್ಯೋಗಿಗಳಿಗೆ ಉತ್ತಮ ಸೇವೆಗಾಗಿ ಬಹುಮಾನ ನೀಡಲು ವಿಶ್ವ ಅಂಚೆ ದಿನವನ್ನು ಬಳಸುತ್ತವೆ.



ಅನೇಕ ದೇಶಗಳಲ್ಲಿ ಅಂಚೆಚೀಟಿಗಳ ಸಂಗ್ರಹಕ್ಕೆ ಸಂಬಂಧಿಸಿದ ಪ್ರದರ್ಶನಗಳನ್ನು ಆಯೋಜಿಸಲಾಗಿದೆ ಮತ್ತು ಹೊಸ ಅಂಚೆಚೀಟಿಗಳು ಮತ್ತು ದಿನಾಂಕ ರದ್ದತಿ ಗುರುತುಗಳನ್ನು ನೀಡಲಾಗುತ್ತದೆ. ಇತರ ಚಟುವಟಿಕೆಗಳಲ್ಲಿ ಅಂಚೆ ಕಛೇರಿಗಳು ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ ವಿಶ್ವ ಅಂಚೆ ದಿನದ ಪೋಸ್ಟರ್‌ಗಳ ಪ್ರದರ್ಶನ, ಅಂಚೆ ಕಚೇರಿಗಳು, ಅಂಚೆ ಕೇಂದ್ರಗಳು ಮತ್ತು ಅಂಚೆ ವಸ್ತುಸಂಗ್ರಹಾಲಯಗಳಲ್ಲಿ ತೆರೆದ ದಿನಗಳು, ಸಮ್ಮೇಳನಗಳು, ಸೆಮಿನಾರ್‌ಗಳು ಮತ್ತು ಕಾರ್ಯಾಗಾರಗಳನ್ನು ನಡೆಸುವುದು, ಹಾಗೆಯೇ ಸಾಂಸ್ಕೃತಿಕ, ಕ್ರೀಡೆ ಮತ್ತು ಇತರ ಮನರಂಜನಾ ಚಟುವಟಿಕೆಗಳು ಸೇರಿವೆ. ಅನೇಕ ಅಂಚೆ ಆಡಳಿತಗಳು ಟಿ–ಶರ್ಟ್‌ಗಳು ಮತ್ತು ಬ್ಯಾಡ್ಜ್‌ಗಳಂತಹ ವಿಶೇಷ ಸ್ಮಾರಕಗಳನ್ನು ನೀಡುತ್ತವೆ. ॐ


**ಸಂಪ್ರೀತಿ ಸಮೃದ್ಧಿ** ಮಾಸ ಪತ್ರಿಕೆ

#66, ಸಂಪ್ರೀತಿ – ಸದನ, ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ, ಮಾಗಡಿ ಟೌನ್, ರಾಮನಗರ ಜಿಲ್ಲೆ – 562 120

ದೂರವಾಣಿ : 8971608213. ಇ–ಮೇಲ್ : sampreethisamruddhi@gmail.com

**ಪತ್ರಿಕೆಯ ಚಂದಾವಿವರ**

10 ವರ್ಷಕ್ಕೆ ರೂ. 2000/– (ಎರಡು ಸಾವಿರ ರೂಗಳು),
05 ವರ್ಷಕ್ಕೆ ರೂ. 1000/– (ಒಂದು ಸಾವಿರ ರೂಗಳು)
02 ವರ್ಷಕ್ಕೆ ರೂ. 500/– (ಐದು ನೂರು ರೂಗಳು)

ಚಂದಾ ಹಣವನ್ನು ಚೆಕ್ ಮೂಲಕ : Publisher Sampreethi Samruddhi monthly magazine,
ಅಥವಾ ಗೂಗಲ್ ಪೇ ಸಂಖ್ಯೆ : 98455 65696 ಮೂಲಕ ಸಂದಾಯ ಮಾಡಬಹುದು.
ಹೆಚ್ಚಿನ ವಿವರಗಳಿಗೆ ಈ ಸಂಖ್ಯೆಯನ್ನು ಸಂಪರ್ಕಿಸಿ : 8971608213

# ಅಂತರಾಷ್ಟ್ರೀಯ ಅಹಿಂಸಾ ದಿನ



ಅಹಿಂಸೆಯ ಮಾರ್ಗವನ್ನು ಅಳವಡಿಸಿಕೊಳ್ಳಲು ಲಕ್ಷಾಂತರ ಜನರನ್ನು ಪ್ರೇರೇಪಿಸಿದ ಗಾಂಧಿಯವರ ಬೋಧನೆಗಳ ಸಹಾಯದಿಂದ ಶಾಂತಿ, ಸಹಿಷ್ಣುತೆ ಮತ್ತು ತಿಳುವಳಿಕೆಯ ಸಂಸ್ಕೃತಿಯನ್ನು ಭದ್ರಪಡಿಸುವ ಗುರಿಯೊಂದಿಗೆ UNGA ನಲ್ಲಿ ನಿರ್ಣಯವನ್ನು ಅಂಗೀಕರಿಸಲಾಯಿತು.

ಭಾರತದ ಸ್ವಾತಂತ್ರ್ಯ ಚಳವಳಿಯ ವೀರ ಮಹಾತ್ಮಾ ಗಾಂಧಿಯವರ ಜನ್ಮದಿನವಾದ ಅಕ್ಟೋಬರ್ 2 ರಂದು ಅಂತರರಾಷ್ಟ್ರೀಯ ಅಹಿಂಸಾ ದಿನವನ್ನು ಆಚರಿಸಲಾಗುತ್ತದೆ. ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿ (UNGA), ಜೂನ್ 15, 2007 ರಂದು ಅಂಗೀಕರಿಸಿದ ನಿರ್ಣಯದಲ್ಲಿ, ಶಿಕ್ಷಣ ಮತ್ತು ಸಾರ್ವಜನಿಕ ಜಾಗೃತಿಯ ಮೂಲಕ ಅಹಿಂಸೆಯ ಸಂದೇಶವನ್ನು ಹರಡುವ ಸಂದರ್ಭವಾಗಿ ಸ್ಮರಣಾರ್ಥವನ್ನು ಸ್ಥಾಪಿಸಿತು. ನಿರ್ಣಯವು ಅಹಿಂಸೆಯ ತತ್ವದ ಸಾರ್ವತ್ರಿಕ ಪ್ರಸ್ತುತತೆಯನ್ನು ಮತ್ತು ಶಾಂತಿ, ಸಹಿಷ್ಣುತೆ, ತಿಳುವಳಿಕೆ ಮತ್ತು ಅಹಿಂಸೆಯ ಸಂಸ್ಕೃತಿಯನ್ನು ಭದ್ರಪಡಿಸುವ ಬಯಕೆಯನ್ನು ಪುನರುಚ್ಚರಿಸುತ್ತದೆ. "ಅಹಿಂಸೆಯು ಮನುಕುಲದ ವಿಲೇವಾರಿಯಲ್ಲಿ ಅತ್ಯಂತ ದೊಡ್ಡ ಶಕ್ತಿಯಾಗಿದೆ. ಇದು ಮಾನವನ ಜಾಣ್ಮೆಯಿಂದ ರೂಪಿಸಲಾದ ವಿನಾಶದ ಅತ್ಯಂತ ಶಕ್ತಿಶಾಲಿ ಅಸ್ತ್ರಕ್ಕಿಂತ ಪ್ರಬಲವಾಗಿದೆ" ಎಂದು ಗಾಂಧಿ ಹೇಳಿದ್ದರು.


**ಅಂತರಾಷ್ಟ್ರೀಯ ಅಹಿಂಸಾ ದಿನದ ಇತಿಹಾಸ**

ಅಹಿಂಸೆಯ ಮಾರ್ಗವನ್ನು ಅಳವಡಿಸಿಕೊಳ್ಳಲು ಲಕ್ಷಾಂತರ ಜನರನ್ನು ಪ್ರೇರೇಪಿಸಿದ ಗಾಂಧಿಯವರ ಬೋಧನೆಗಳ ಸಹಾಯದಿಂದ ಶಾಂತಿ, ಸಹಿಷ್ಣುತೆ ಮತ್ತು ತಿಳುವಳಿಕೆಯ ಸಂಸ್ಕೃತಿಯನ್ನು ಭದ್ರಪಡಿಸುವ ಗುರಿಯೊಂದಿಗೆ ಗಟಿಉಂ ನಲ್ಲಿ ನಿರ್ಣಯವನ್ನು ಅಂಗೀಕರಿಸಲಾಯಿತು. ಜನವರಿ 2004 ರಲ್ಲಿ ಇರಾನಿನ ನೋಬಲ್ ಪ್ರಶಸ್ತಿ ವಿಜೇತ ಶಿರಿನ್ ಎಬಾಡಿ ದಿನದ ಕಲ್ಪನೆಯನ್ನು ಪ್ರಸ್ತಾಪಿಸಿದರು. ಈ ಕಲ್ಪನೆಯು ಅನೇಕ ಕಾಂಗ್ರೆಸ್ ನಾಯಕರನ್ನು ಆಕರ್ಷಿಸಿತು, ಅವರು 2007 ರಲ್ಲಿ ಯುಎನ್ ಈ ಕಲ್ಪನೆಯನ್ನು ಅಳವಡಿಸಿಕೊಳ್ಳಲು ಕರೆ ನೀಡಿದರು.


ಅಂದಿನ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಆನಂದ್ ಶರ್ಮಾ ಅವರು ಸಹ ಪ್ರಾಯೋಜಕರ ಪರವಾಗಿ ಸಾಮಾನ್ಯ ಸಭೆಯಲ್ಲಿ ನಿರ್ಣಯವನ್ನು ಮಂಡಿಸಿದರು. ನಿರ್ಣಯದ ವ್ಯಾಪಕ ಮತ್ತು ವೈವಿಧ್ಯಮಯ ಪ್ರಾಯೋಜಕತ್ವವು ಗಾಂಧಿ ಮತ್ತು ಅವರ ತತ್ವಶಾಸ್ತ್ರದ ಸಾರ್ವತ್ರಿಕ ಗೌರವದ ಅಂಗೀಕಾರವಾಗಿದೆ ಎಂದು ಶರ್ಮಾ ಹೇಳಿದರು.

**ಅಂತರಾಷ್ಟ್ರೀಯ ಅಹಿಂಸಾ ದಿನದ ಮಹತ್ವ**

ಅಹಿಂಸೆಯ ಸಂದೇಶವನ್ನು ನೀಡಲು ಪ್ರಪಂಚದಾದ್ಯಂತ ಈ ದಿನವನ್ನು ಆಚರಿಸಲಾಗುತ್ತದೆ. ಜಗತ್ತಿನಾದ್ಯಂತ ಅಹಿಂಸಾತ್ಮಕ ಚಳುವಳಿಗಳಿಗೆ ಗಾಂಧಿ ಸ್ಫೂರ್ತಿಯಾಗಿದ್ದಾರೆ. ಕಠಿಣ ಸವಾಲುಗಳ ನಡುವೆಯೂ ಅವರು ಅಹಿಂಸೆಯಲ್ಲಿ ತಮ್ಮ ನಂಬಿಕೆಗೆ ಬದ್ಧರಾಗಿದ್ದರು ಮತ್ತು ಭಾರತವನ್ನು ಸ್ವಾತಂತ್ರ್ಯದತ್ತ ಮುನ್ನಡೆಸಿದರು. 2007 ರ ನಿರ್ಣಯವನ್ನು ಸ್ಮರಿಸಲು **UN** ವಿಶ್ವದಾದ್ಯಂತ ಅಧಿಕೃತ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ.



# ಆರ್ಯ–ದ್ರಾವಿಡರೆಂಬ ಮಿಥ್ಯಾವಾದದ ಸುತ್ತಾ



ಡಾ. ರೋಹಿಣಾಕ್ಷ ಶಿರ್ಲಾಲು
ಸಹಾಯಕ ಪ್ರಾಧ್ಯಾಪಕರು, ಕಲಬುರ್ಗಿ

ಪ್ರಗತಿಪರರೆಂದು ಕರೆದುಕೊಳ್ಳುವ ಒಂದಷ್ಟು ಜನರು ಇಂದಿಗೂ ಈ ದೇಶದ ಮೇಲೆ ಆರ್ಯರು ಆಕ್ರಮಣ ಮಾಡಿದರು, ಮೂಲನಿವಾಸಿಗಳಾದ ದ್ರಾವಿಡರನ್ನು ಸೋಲಿಸಿ ದಕ್ಷಿಣದ ಕಡೆಗೆ ತಳ್ಳಿದರು ಎಂಬ ಆಧಾರವೇ ಇಲ್ಲದ ಕಲ್ಪಿತ ವಾದವನ್ನು ಮತ್ತೆ ಮತ್ತೆ ಮುನ್ನೆಲೆಗೆ ತರುವ ಪ್ರಯತ್ನವನ್ನು ಮಾಡುತ್ತಲೇ ಬರುತ್ತಿದ್ದಾರೆ. ಮೂಲಭೂತವಾದ ಪ್ರಶ್ನೆ ಎಂದರೆ, ಆರ್ಯರು ಎಂಬ ಜನಾಂಗ ಹೊರಗಿನಿಂದ ಬಂದಿರುವುದು ಹೌದೇ? ಅವರು 'ದ್ರಾವಿಡ' ಎನ್ನುವ ಮೂಲ ಜನಾಂಗವನ್ನು ಸೋಲಿಸಿ ದಕ್ಷಿಣಕ್ಕೆ ಅಟ್ಟಿದರೆ? ಆರ್ಯರು ಹೊರಗಿನಿಂದ ಬಂದರು ಎನ್ನುವ ವಾದವೇ ಅತಾರ್ಕಿಕ ಮತ್ತು ಪಶ್ಚಿಮವು ಸೃಷ್ಟಿಸಿದ ಕಲ್ಪಿತ ವಾದ ಎನ್ನುವುದನ್ನು ಹಲವು ವಿದ್ವಾಂಸರು ವೈಜ್ಞಾನಿಕವಾದ ಸಂಶೋಧನೆಗಳ ಮೂಲಕ ದತ್ತವಾದ ಪುರಾವೆಗಳನ್ನು ಮಂಡಿಸಿದ ಮೇಲೂ ಇಂತಹ ಆಧಾರ ರಹಿತ ವಾದವನ್ನು ಮುಂದಿಡುವ ಉದ್ದೇಶವೇನು? ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್ ಸಂವಿಧಾನದ ಅಡಿಯಲ್ಲಿ ಕಟ್ಟಿದ 'ಏಕ ಭಾರತದ' ಒಳಗೆ ಆರ್ಯಸ್ಥಾನ ಅಥವಾ ದ್ರಾವಿಡಸ್ಥಾನಕ್ಕೆ ಅವಕಾಶವಿಲ್ಲ.

ದೇಶವನ್ನು ಹೀಗೆ ಜನಾಂಗಗಳ ಹೆಸರಿನಲ್ಲಿ ವಿಂಗಡಿಸುವುದು ಸಂವಿಧಾನ ವಿರೋಧಿಯಲ್ಲವೇ? ಡಾ.ಅಂಬೇಡ್ಕರ್ ಅವರೇ ಆರ್ಯ ಆಕ್ರಮಣ ಸಿದ್ಧಾಂತ ಹೇಗೆ ಅಪ್ರಸ್ತುತ ಮತ್ತು ಅವೈಜ್ಞಾನಿಕ ಎನ್ನುವುದನ್ನು 1946ರಲ್ಲೇ ಬರೆದ ಕೃತಿಯಲ್ಲಿ ನಿರೂಪಿಸಿದ್ದಾರೆ. ಹೀಗಿದ್ದರೂ ಭಾರತದ ಬುದ್ಧಿಜೀವಿಗಳು ಅಂಬೇಡ್ಕರ್ ವಿಚಾರಕ್ಕೇಕೆ ಬೆನ್ನು ಹಾಕಿದರು? ಅಥವಾ ಅಂಬೇಡ್ಕರ್ ವಿಚಾರವನ್ನೇಕೆ ಮುಚ್ಚಿಟ್ಟರು? ಅಂಬೇಡ್ಕರ್ ಆರ್ಯ ಆಕ್ರಮಣದ ಕುರಿತಾಗಿ, ಆರ್ಯರ ದಾಳಿಯಿಂದ ಇಲ್ಲಿನ ಮೂಲ ನಿವಾಸಿಗಳನ್ನು ದಾಸ್ಯಕ್ಕೆ ಒಳಪಡಿಸಿದರೆನ್ನುವ ವಾದಗಳಿಗೆ, ತಮ್ಮ ಕಾಲದಲ್ಲಿ ಲಭ್ಯವಿದ್ದ ಎಲ್ಲಾ ಸಿದ್ಧಾಂತಗಳನ್ನೂ ಕೂಲಂಕಷವಾಗಿ ಪರಿಶೀಲಿಸಿ, ಋಗ್ವೇದವೂ ಸೇರಿದಂತೆ ವಿವಿಧ ವಿದ್ವಾಂಸರ ಅಭಿಪ್ರಾಯಗಳನ್ನು ಕ್ರೂಢೀಕರಿಸಿ "ಪಾಶ್ಚಾತ್ಯ ಲೇಖಕರು ಹುಟ್ಟು ಹಾಕಿರುವ ಈ ಆರ್ಯ ಜನಾಂಗದ ಸಿದ್ಧಾಂತ ಪ್ರತಿಯೊಂದು ಅಂಶದಲ್ಲಿಯೂ ನೆಲಕ್ಕುರುಳುತ್ತದೆ" ಎನ್ನುತ್ತಾರೆ. ಹೀಗೆ ಉರುಳುವುದಕ್ಕೆ ಕಾರಣವನ್ನು ಗುರುತಿಸಿದ ಅಂಬೇಡ್ಕರ್ "ಈ ಸಿದ್ಧಾಂತ ಊಹೆಗಳು ಮತ್ತು ಕಲ್ಪನೆಗಳ ಮೇಲೆ ಆಧಾರಿತವಾಗಿದೆ.

ಈ ಸಿದ್ಧಾಂತ ವೈಜ್ಞಾನಿಕ ಶೋಧನೆಗೆ ವಿರುದ್ಧವಾಗಿದೆ. ಅದು ವಸ್ತು ಸ್ಥಿತಿಯ ಮೇಲೆ ಬೆಳೆಯಲು ಅವಕಾಶವಾಗಿಲ್ಲ. ಬದಲಿಗೆ ಈ ಸಿದ್ಧಾಂತ ಪೂರ್ವಗ್ರಹ ಪೀಡಿತವಾಗಿದೆ" ಎಂದಿದ್ದರು. ಯಾವ ಅನುಮಾನಕ್ಕೂ ಎಡೆಯಿಲ್ಲದಂತೆ ಆರ್ಯರ ಆಕ್ರಮಣ ಸಿದ್ಧಾಂತ ಒಂದು ಕಟ್ಟುಕಥೆಯಾಗಿದೆ ಎನ್ನುತ್ತಾರೆ. ಈ ಸಿದ್ಧಾಂತ ಪಾಶ್ಚಾತ್ಯರ ಊಹೆಯ ಆಧಾರದಲ್ಲಿ ನಿಂತಿದೆ ಎನ್ನುತ್ತಾ, ಪಶ್ಚಿಮ ತನ್ನ ಸುಳ್ಳನ್ನು ಸತ್ಯವೆಂದು ಸಾಬೀತು ಮಾಡಲು ಮತ್ತೊಂದು ಸುಳ್ಳಿನ ಮೊರೆಹೋದ ಬಗೆಯನ್ನು ಬಿಡಿಸಿ ತೋರಿಸುತ್ತಾರೆ. ಆರ್ಯರ ಭಾಷೆ ಭಾರತಕ್ಕೆ ಬಂತು ಎನ್ನುವುದನ್ನು ಸಾಬೀತು ಮಾಡಲು, ಹೊರಗಿನಿಂದ ಬಂದರು ಎಂದರು. ಸ್ಥಳೀಯ ಜನಾಂಗಗಳ ಮೇಲೆ ದಾಳಿ ಮಾಡಿ ಆರ್ಯರು ಗೆದ್ದರು ಎನ್ನುವ ಸಿದ್ಧಾಂತ ಕಟ್ಟಿ, ಅಂತಿಮವಾಗಿ

ಪಾಶ್ಚಾತ್ಯ ವಿದ್ವಾಂಸರು "ಆರ್ಯರು ಭಾರತದ ಮೇಲೆ ದಾಳಿ ಮಾಡಿದರು ಮತ್ತು ದಾಸರು ಮತ್ತು ದಸ್ಯುಗಳನ್ನು ತಮ್ಮ ಅಧೀನಕ್ಕೆ ಒಳಪಡಿಸಿದರು ಎಂಬ ಕಟ್ಟು ಕಥೆಯನ್ನು ಸೃಷ್ಟಿಸಲು ಮುಂದಾದರು" ಎನ್ನುತ್ತಾರೆ.

ಆರ್ಯರು ಭಾರತಕ್ಕೆ ಬಂದಮೇಲೆ ಚಾತುರ್ವರ್ಣ್ಯ ವ್ಯವಸ್ಥೆ ಸ್ಥಾಪನೆಯಾಯಿತು ಎನ್ನುವುದನ್ನು ಪ್ರಗತಿಪರ ವೇಷಧಾರಿಗಳು ಇಂದಿಗೂ ವೇದಿಕೆಗಳಲ್ಲಿ ಲಜ್ಜೆಬಿಟ್ಟು ಘೋಷಿಸುತ್ತಿದ್ದರೆ, ಅತ್ತಕಡೆ ಅಂಬೇಡ್ಕರ್ ಎಪ್ಪತ್ತೇಳು ವರ್ಷಗಳ ಹಿಂದೆಯೇ, "ಈ ಊಹೆಗಳಲ್ಲಿ ಯಾವುದೂ ಸತ್ಯಸಂಗತಿಗಳ ಮೇಲೆ ಆಧಾರಿತವಾಗಿಲ್ಲ. ಆರ್ಯರ ಆಂತರಿಕ ವರ್ಣ ತಾರತಮ್ಯ ಪ್ರತಿಫಲನವೇ ಚಾತುರ್ವರ್ಣ್ಯ ಸಂಸ್ಥೆ ಎನ್ನುವುದು ನಿಜವಾಗಿಯೂ ವಿಪರೀತವಾಗುತ್ತದೆ. ಆರ್ಯ ಜನಾಂಗ ಸಿದ್ಧಾಂತದ ಪ್ರವರ್ತಕರು ತಮ್ಮ ವಾದ ಮಂಡಿಸುವ ಉತ್ಸಾಹದಲ್ಲಿ ತಾವು ಎಂಥ ಅರ್ಥಹೀನತೆಗೆ ಪಕ್ಕಾಗುತ್ತೇವೆ ಎಬುದನ್ನು ಗಮನಿಸದಷ್ಟೂ ಸಹನೆಯಿಲ್ಲದವರಾಗಿದ್ದಾರೆ. ಊಹೆ ವಿಜ್ಞಾನದ ವಿಷವಾಗಬಲ್ಲದು ಎಂಬುದಕ್ಕೆ ಪಾಶ್ಚಾತ್ಯ ವಿದ್ವಾಂಸರ ಆರ್ಯ ಜನಾಂಗ ಸಿದ್ಧಾಂತ ಒಂದು ಒಳ್ಳೆಯ ಉದಾಹರಣೆಯಾಗುತ್ತದೆ. ಈ ಸಿದ್ಧಾಂತ ಎಷ್ಟು ಅರ್ಥಹೀನವಾಗಿದೆಯೆಂದರೆ ಅದು ಬಹಳ ಹಿಂದೆಯೇ ಸಾಯಬೇಕಾಗಿತ್ತು. ಆದರೆ ಸಾಯುವುದಕ್ಕೆ ಬದಲು ಜನರ ಮೇಲೆ ಗಣನೀಯ ಹಿಡಿತ ಸಾಧಿಸಿದೆ" ಎಂದಿದ್ದರು. ಇದಕ್ಕೆ ನಿದರ್ಶನವನ್ನು ನಾವು ನಮ್ಮ ಕಾಲದಲ್ಲೂ ಕಾಣಬಹುದಾಗಿದೆ. ಆರ್ಯರ ಆಕ್ರಮಣವೇ ಕಾಲ್ಪನಿಕ ಸಿದ್ಧಾಂತವೆಂದಾದ ಮೇಲೆ, ದ್ರಾವಿಡವಾದವೂ ಅಷ್ಟೇ ಕಾಲ್ಪನಿಕವಾಗುತ್ತದೆ. "ಪಾಶ್ಚಾತ್ಯ ಸಿದ್ಧಾಂತವು ಅಪೂರ್ಣ ಪರೀಕ್ಷೆಗಳಿಂದ ತೆಗೆದುಕೊಂಡ ಅವಸರದ ತೀರ್ಮಾನವಾಗಿದ್ದು, ಸತ್ಯಗಳೆಂದು ನಂಬಲಾಗಿರುವ ಕೆಲವು ಆಯ್ದ ಸಂಗತಿಗಳ ಮೇಲೆ ಈ ವಾದವನ್ನು ನಿರ್ಮಿಸಲಾಗಿದೆ. ಈ ವಾದ ಇನ್ನು ಮುಂದೆ ನಿಲ್ಲಲಾರದು ಹಾಗೂ ಅದನ್ನು ತಿಪ್ಪೆಗುಂಡಿಗೆ ಎಸೆಯತಕ್ಕದ್ದು" ಎನ್ನುವ ಸ್ಪಷ್ಟ ನುಡಿ ಅಂಬೇಡ್ಕರ್ ಅವರದ್ದಾಗಿತ್ತು. ಆಧಾರವೇ ಇಲ್ಲದ ಆರ್ಯ – ದ್ರಾವಿಡದ ಭಾರವನ್ನು ಇನ್ನೆಷ್ಟು ಕಾಲ ಹೊತ್ತುಕೊಂಡು ತಿರುಗೋಣ? ಜಾತಿ ತಾರತಮ್ಯ, ವರ್ಣ ವ್ಯವಸ್ಥೆಗಳೆಲ್ಲವನ್ನೂ ಈ ಪೊಳ್ಳುವಾದದ ಮೇಲೆ ನಿಲ್ಲಿಸಲು ಪ್ರಯತ್ನಿಸಬೇಕೇ? ಈ ಕುರಿತು ಚಿಂತನೆಗಳಾಗಬೇಕಾಗಿದೆ.

ವಸಾಹತುಶಾಹಿ ಆಡಳಿತಗಾರರಿಗೆ ಈ ದೇಶವನ್ನು ಸಾಧ್ಯವಾದಷ್ಟು ಒಡೆಯುವ ಅವಶ್ಯಕತೆ ಇತ್ತು. ಈ ಕಾರಣಕ್ಕಾಗಿಯೇ ಇಂತಹ ಮಿಥ್ಯಾವಾದವನ್ನು ಮುಂದೆ ತರುವ ಪ್ರಯತ್ನ ಮಾಡಿದರು. ಈ ಪ್ರಯತ್ನದ ಮೂಲಕ ಭಾರತವನ್ನು ಒಡೆಯುವುದರಲ್ಲಿ ಶಕ್ತರೂ ಆದರು. ಇದರ ಭಾಗವಾಗಿಯೇ ಕೃತ್ರಿಮವಾಗಿಯೇ ದ್ರಾವಿಡ ಅಸ್ಮಿತೆಯನ್ನು ಹುಟ್ಟುಹಾಕಲಾಯಿತು. ಆದರೆ ವಸಾಹತುಶಾಹಿ ತಂತ್ರಗಾರಿಕೆಯನ್ನು ಅರ್ಥಮಾಡಿಕೊಳ್ಳದೆ, ನಾವು ಇನ್ನೆಷ್ಟುಕಾಲ ಇಂತಹ ಪೊಳ್ಳುವಾದಗಳನ್ನು ಪ್ರಚುರ ಪಡಿಸುತ್ತಿರುವುದು? ಇಂದಿಗೂ ಭಾಷೆ, ಜನಾಂಗವನ್ನು ಮುಂದೆ ತಂದು, ಅದಕ್ಕೊಂದು ವೈಜ್ಞಾನಿಕತೆಯ ಮುಖವಾಡವನ್ನು ತೊಡಿಸಿ, ದೇಶದೊಳಗೆ ಜನರ ನಡುವೆ ವೈಮನಸ್ಸನ್ನು ಹುಟ್ಟುಹಾಕಲು ಒಂದು ತಂತ್ರವಾಗಿ ಬಳಸಲಾಗುತ್ತಿದೆ. 'ದ್ರಾವಿಡ ಅಸ್ಮಿತೆ'ಯು ನಮಗೆ ಸಂವಿಧಾನಾತ್ಮಕವಾಗಿಯೇ ಪ್ರಾಪ್ತವಾದ 'ಭಾರತೀಯತೆಯ ಅಸ್ಮಿತೆ'ಯನ್ನು ಭಂಗಗೊಳಿಸಲು ಬಳಕೆಯಾಗಬಾರದು. ವಿದ್ವಾಂಸರಾದ ಶ್ರೀ ರಾಜೀವ್ ಮಲ್ಹೋತ್ರ ಮತ್ತು ಶ್ರೀ ಅರವಿಂದ ನೀಲಕಂಡನ್ ಅವರುಗಳು ಗುರುತಿಸುವಂತೆ, ರಾಬರ್ಟ್ ಕಾಲ್ವೆಲ್ ಸೇರಿದಂತೆ ಕ್ರೈಸ್ತ ಮತಪ್ರಚಾರಕರ ಕಾರ್ಯತಂತ್ರದ ಭಾಗವಾಗಿ ದ್ರಾವಿಡ ಅಸ್ಮಿತೆ ಎನ್ನುವುದನ್ನು ದ್ರಾವಿಡ ಪ್ರತ್ಯೇಕವಾದದ ಬುನಾದಿಯನ್ನಾಗಿಸಲಾಗಿದೆ.

ದ್ರಾವಿಡವಾದದ ಮೂಲಕ ದಕ್ಷಿಣ ಭಾರತೀಯರ ಅನನ್ಯತೆಯನ್ನು ಪ್ರತಿಪಾದಿಸುತ್ತಾ, 'ಭಾರತೀಯ' ಎನ್ನುವ ಸಮಗ್ರತೆಗೆ ವಿರುದ್ಧವಾದ ಮತ್ತು ಪ್ರತ್ಯೇಕವಾದ ಅಸ್ತಿತ್ವವನ್ನು ಹೊಂದಿದೆ ಎಂಬಂತೆ ಬಿಂಬಿಸುತ್ತಿರುವುದರ ಕುರಿತು ಗಮನ ಸೆಳೆಯುತ್ತಾರೆ. ವಸಾಹತುಶಕ್ತಿಗಳು ರೂಪಿಸಿ ಪೋಷಿಸಿದ ಮಿಥ್ಯಾ ಕಥನಗಳನ್ನು ಇಂದಿಗೂ ನಾನಾ ರೂಪಗಳಲ್ಲಿ ಮುನ್ನಲೆಗೆ ತರುವ ಕೆಲಸವನ್ನು ಕೆಲವೊಂದು ಸ್ಥಾಪಿತ ಹಿತಾಸಕ್ತಿಗಳು ಮಾಡುತ್ತಿರುವುದನ್ನು ಅಧ್ಯಯನಪೂರ್ವಕವಾಗಿಯೇ ಸಾಬೀತುಮಾಡಿದ್ದಾರೆ. ಈಗಾಗಲೇ ಭಾರತ ಎಂದರೆ ಪರಸ್ಪರ ಸಂಬಂಧ ಇಲ್ಲದ, ಪರಸ್ಪರ ಸಂಘರ್ಷ ಇರುವ ಸಮುದಾಯಗಳು ನೆಲೆಸಿದ ಒಂದು ಭೂಪ್ರದೇಶ ಎಂಬಂತೆ ಬಿಂಬಿಸಲು ಅಕಡೆಮಿಕ್ ವಲಯದಲ್ಲಿ ಸಕ್ರೀಯವಾಗಿರುವ ಗುಂಪಿನ ಮುಂದುವರಿಕೆಯ ಭಾಗವಾಗಿಯೇ ಆರ್ಯ – ದ್ರಾವಿಡ ಚರ್ಚೆಗಳು ಕಾಣಿಸಿಕೊಂಡಿದೆ. ಇದನ್ನು ನಾವು ಅಂಬೇಡ್ಕರ್ ಪ್ರತಿಪಾದಿಸಿದ ವಿಚಾರಗಳ ಆಧಾರದಲ್ಲಿಯೇ ನಿರಾಕರಿಸಬೇಕಾಗಿದೆ. ಭಾರತವನ್ನು ಆರ್ಯ ಜನಾಂಗ ಆಕ್ರಮಣ ಮಾಡಿತು ಮತ್ತು ಭಾರತದ ಮೂಲನಿವಾಸಿಗಳಾದ ದಾಸರು ಮತ್ತು ದಸ್ಯುಗಳನ್ನು ಸೋಲಿಸಿತೆನ್ನುವುದಕ್ಕೆ ಯಾವ ಆಧಾರವೂ ಇಲ್ಲ ಎನ್ನುವುದನ್ನು ಅಂಬೇಡ್ಕರ್ ಸಾರಿಹೇಳಿದಂತೆ, ನಾವೂ ಸ್ಪಷ್ಟವಾಗಿ ಪ್ರತಿಪಾದಿಸಬೇಕಾಗಿದೆ. ॐ



### ಮುಂದಿನ ಪೀಳಿಗೆಗೆ ಒಳ್ಳೆಯ ಕನ್ನಡದುಚ್ಚಾರ ಕಲಿಸೋಣ

# ನಿತ್ಯ ಬಳಕೆ ಕನ್ನಡದಲ್ಲಿ ಅದೆಷ್ಟು ತಪ್ಪುಗಳು?

✍ **ಡಾ. ವಿ.ಬಿ. ಆರತೀ,** ಲೇಖಕಿ ಸಂಸ್ಕೃತಿ ಚಿಂತಕಿ

ಭಾಷೆಯೊಂದು ಹಾಳಾಗಬೇಕಾದರೆ ಏನು ಮಾಡಬೇಕು? ತಪ್ಪು-ತಪ್ಪಾದ ಪ್ರಯೋಗಗಳನ್ನು ಮುಂದುವರಿಸಬೇಕು ಅಷ್ಟೆ. ಕನ್ನಡದ ವಿಷಯದಲ್ಲಿ ನಾವೂ ತಿಳಿದೋ, ತಿಳಿಯದೆಯೋ ಅದನ್ನೇ ಮಾಡುತ್ತಿದ್ದೇವೆಯೇ ಎಂದು ಆತ್ಮಾವಲೋಕನವನ್ನು ಮಾಡಿಕೊಳ್ಳೋಣ. ಉದಾ: 'ಶ' ಕಾರವು ತಾಲವ್ಯವರ್ಣ (ಬಾಯೊಳಗಿನ ವಸಡುಗಳತ್ತ ನಾಲಿಗೆ ಚಾಚಿದಾಗ ಉಂಟಾಗುವ ಉಚ್ಚಾರ). 'ಷ' ಕಾರ ಮೂರ್ಧನ್ಯ (ಬಾಯೊಳಗಿನ ಮೇಲ್ಭಾಗದತ್ತ ನಾಲಿಗೆ ಚಾಚಿ ಉಂಟಾಗುವ ಉಚ್ಚಾರ). ಚಿಕ್ಕವರಿಗೆ ಚಿಕ್ಕ 'ಶ', ದೊಡ್ಡ 'ಷ' ಎಂದು ಹಾರಿಕೆಯ ವ್ಯತ್ಯಾಸವನ್ನು ಕಲಿಸುತ್ತಿದ್ದೇವೆ. ಆದರೆ, ಈ ವ್ಯತ್ಯಾಸವನ್ನು ಗಮನಿಸಲಾಗುತ್ತಿಲ್ಲ. ಅಷ್ಟೇ ಅಲ್ಲದೆ ಈಗೀಗ 'ಶ' ಕಾರ-'ಷ' ಕಾರಗಳನ್ನು 'ಸ' ಕಾರದಲ್ಲಿ ಲೀನಗೊಳಿಸಿ ಉಚ್ಚರಿಸಲಾಗುತ್ತಿದೆ.

ಪರಿಣಾಮ ಈಗೀಗ ಬಹಳ ಮಂದಿಗೆ 'ಷ್ಟ' ಎಂಬ ಸಂಯುಕ್ತಾಕ್ಷರವನ್ನು ಉಚ್ಚರಿಸಲಾಗದೆ 'ಸ್ಟ' ಎಂದೇ ಉಚ್ಚರಿಸುವುದು ಮೊದಲಾಗಿದೆ. ಅಷ್ಟು, ಇಷ್ಟು, ಎಷ್ಟು, ಕಷ್ಟ, ನಷ್ಟ, ಇಷ್ಟ.. ಪದಗಳನ್ನು ಅಸ್ಟು, ಇಸ್ಟು, ಎಸ್ಟು, ಕಸ್ಟ, ನಸ್ಟ, ಇಸ್ಟ.. ಎಂದು ಉಚ್ಚರಿಸುವುದು ವ್ಯಾಪಕವಾಗುತ್ತಿದೆ. ಶಿಕ್ಷಕರಿಂದಲೂ, ಪೋಷಕರಿಂದಲೂ ಉಚ್ಚಾರಗಳನ್ನು ಕಲಿಯುತ್ತಾ ಬರುತ್ತಿದ್ದೇವೆ. ಈಗ ಚಲನಚಿತ್ರ-ಧಾರವಾಹಿಗಳ ನಟ-ನಟಿ-ನಿರೂಪಕ-ನಿರೂಪಕಿಯರ ಪ್ರಭಾವವೂ ಹೆಚ್ಚು. ಇವರುಗಳು ಎಸ್ಟು ಚೆನ್ನಾಗಿತ್ತು! ಅಸ್ಟು ಕಸ್ಟ ಆಯ್ತು! ತುಂಬ ನಸ್ಟ! ಎಂಬ ಈತರಹದ ತಪ್ಪು ಉಚ್ಚಾರಗಳನ್ನೇ ಪ್ರಸಿದ್ಧಗೊಳಿಸಿಬಿಟ್ಟಿದ್ದು ಈ ವಾಗ್ದೋಷಕ್ಕೆ 'ಪುಸ್ಟಿ' (ಪುಷ್ಟಿ) ಸಿಕ್ಕಿಬಿಟ್ಟಿದೆ. ಅಂತೂ ಈ ಅಬದ್ಧ ಪ್ರಯೋಗವೂ ನಮ್ಮ ಆಡುಭಾಷೆಯಲ್ಲೂ ಸಂಕ್ರಮಿಸಿ ಮನೆ-ಕಚೇರಿ-ಸಾರ್ವಜನಿಕ ಸ್ಥಳಗಳಲ್ಲಿ ಸಾಮಾನ್ಯವಾಗಿಬಿಟ್ಟಿವೆ.

ಇನ್ನೂ ಹಲವು ಅಪಪ್ರಯೋಗಗಳು ನಮ್ಮಲ್ಲಿ ಬೆಳೆದಿವೆ. ಅನನುಕೂಲ (ಅನ್+ಅನುಕೂಲ) ಎಂಬ ಪದವು 'ಅನಾನುಕೂಲ' ಎಂದೂ, ದುರದೃಷ್ಟ (ದುರ್+ಅದೃಷ್ಟ) ಎನ್ನುವ ಪದವು 'ದುರಾದೃಷ್ಟ' ಎಂದು, ಜಾತ್ಯತೀತ (ಜಾತಿ+ಅತೀತ) ಎನ್ನುವ ಸರಳ ಯಣ್ ಸಂಧಿಯ ಪದವು ಜಾತ್ಯಾತೀತ ಎಂಬುದಾಗಿಯೂ ವಿಕಾರಗೊಂಡಿವೆ. "ಜಾತ್ಯಾತೀತ" ಎಂಬ ಪ್ರಯೋಗದಲ್ಲಿ ಎಂತಹ ಅರ್ಥಾಭಾಸವಿದೆ! 'ಜಾತ್ಯತೀತ (ಜಾತಿಭೇದಕ್ಕೆ ಅತೀತರು) ಎನ್ನುವ ಅರ್ಥ ಬರುವ ಬದಲು ಜಾತ್ಯಾತೀತ (ಜಾತಿ ಬೇಧಕ್ಕೆ ಅತೀತರಲ್ಲ) ಎನ್ನುವ ಅರ್ಥವನ್ನೇ ಇದು ಕೊಡುತ್ತಿದೆ.

ಅಂತೆಯೇ "ಕೋಟ್ಯಧಿಪತಿ" ಪದವು ತಪ್ಪಾಗಿ "ಕೋಟ್ಯಾಧಿಪತಿ" ಆಯ್ತು, ಜಯಂತ್ಯುತ್ಸವ (ಜಯಂತಿ+ಉತ್ಸವ) ಪದವು 'ಜಯಂತ್ಯೋತ್ಸವ' ಆಯ್ತು, ಶಕ್ತ್ಯುಪಾಸನೆ (ಶಕ್ತಿ+ಉಪಾಸನೆ) ಪದವು "ಶಕ್ತ್ಯೋಪಾಸನೆ" ಎಂದಾಯ್ತು, ನವರಾತ್ರ 'ನವರಾತ್ರಿ' ಆಯ್ತು, ಹಿಂದು-ಇತರ ಎಂದೇ ಇರಬೇಕಾದ ಬಳಕೆ 'ಹಿಂದುಯೇತರ' ಆಯ್ತು, ಯಶಸೂತ್ರ (ಯಶಸ್+ಸೂತ್ರ), ತಪಸ್ಸೂರ್ಯ ಮುಂತಾದ ಪದಗಳು 'ಯಶೋಸೂತ್ರ ತಪೋಸೂರ್ಯ ಎಂದು ವಿಕಾರಗೊಂಡಿದೆ. ಬೆಳ್ಳಿತೆರೆ-ಕಿರುತೆರೆಗಳಲ್ಲೂ ಇಂತಹ ಪದವಿಕಾರಗಳು ಭರದಿಂದ ಹರಡಿವೆ. ಹೀಗೆ ವಿಕಾರಗೊಂಡ ಕನ್ನಡ ಪದಗಳ ಪಟ್ಟಿಯು ದೊಡ್ಡದೇ ಆಗಿದೆ.

ಬಾಲ್ಯದಲ್ಲೇ ಸಂಯುಕ್ತಾಕ್ಷರಗಳನ್ನು ಚೆನ್ನಾಗಿ ಹೇಳಿಕೊಟ್ಟು ತಿದ್ದದೇ ಇದ್ದ ಬೇಜವಬ್ದಾರಿಯಿಂದಾಗಿ ಬಹಳ ಜನರು ಉತ್ಸವವನ್ನು 'ಉಸ್ತವ' ಎಂದೂ, ಸೃಷ್ಟಿಯನ್ನು 'ಸೃಸ್ಟಿ' ಎಂದೂ, ಷಷ್ಠಿಯನ್ನು 'ಸ್ರಸ್ಟಿ' ಎಂದೂ, ಹೃದಯವನ್ನು 'ಹ್ರದಯ'

ಎಂದೂ, ಗೃಹವನ್ನು 'ಗ್ರುಹ/ಗ್ರಹ' ಎಂದೂ ಉಚ್ಚರಿಸುವುದು ಕಾಣಬರುತ್ತದೆ. ಸನ್ಮಾನ್ಯ (ಸತ್+ಮಾನ್ಯ) ಪದಕ್ಕೆ 'ಸಂಭಾವಿತ ವ್ಯಕ್ತಿ' ಎನ್ನುವ ಭಾವಾರ್ಥವಿದೆ. ಉದಾ: ಸನ್ಮಾನ್ಯ ಶ್ರೀಯುತ.. ರವರು. ಆದರೆ ಗಣ್ಯರನ್ನು ಸಮ್ಮಾನಿಸುವಾಗ (ಸಮ್ಯಕ್+ಮಾನ=ಸನ್ಮಾನ) 'ಸಮ್ಮಾನ ಸಮಾರಂಭ' ಎನ್ನುವ ತಪ್ಪು ಬಳಕೆ ವಾಡಿಕೆಯಾಗಿದೆ. ಪತ್ರಿಕೆಗಳಲ್ಲೂ ಹಾಗೆ ಮುದ್ರಣವಾಗುತ್ತಿದೆ.

'ಕ' ವರ್ಗದ ಅನುಸ್ವಾರವಾದ ಙ್ ಉಚ್ಚಾರ 'ಚ' ವರ್ಗದ ಅನುಸಾರವಾದ 'ಞ್' ಉಚ್ಚಾರಗಳ ವಿಧಾನವನ್ನು ಪುಟ್ಟ ಮಕ್ಕಳಿಗೆ ಮನೆಯಲ್ಲೂ, ಪಾಠಶಾಲೆಗಳಲ್ಲೂ ಒತ್ತಿ ಹೇಳಿಕೊಡುವ ಕಾಲವು ಹೋಯಿತು. ಈಗೀಗ ಎಲ್ಲಕ್ಕೂ 'ತ' ವರ್ಗದ ಅನುಸ್ವಾರವಾದ 'ನ' ಕಾರವನ್ನೇ ಉಚ್ಚರಿಸಿ 'ಅಡ್ಜಸ್ಟ್' ಮಾಡುವುದು ಕಾಣಬರುತ್ತದೆ.

ಮತ್ತೆ ಕೆಲವರಿಗೆ ಸುಷ್ಟುಕನ್ನಡ ಎಂದರೆ 'ಎಲ್ಲ ಕಡೆ ಮಹಾಪ್ರಾಣ ಹಾಕಬೇಕು' ಎನ್ನುವ ಭ್ರಾಂತಿ! ವಿದ್ಯೆಯನ್ನು "ವಿಧ್ಯೆ", ವಿದ್ಯಾಲಯವನ್ನು "ವಿಧ್ಯಾಲಯ" ಎಂದು ಉಚ್ಚರಿಸುತ್ತಾರೆ. 'ವಿದ್' ಎಂದರೆ ಅರಿವು, ವಿಧ್ ಎಂದರೆ ಸೀಳು. ವಿದ್ಯಾಲಯವು 'ವಿಧ್ಯಾಲಯ'ವಾದರೆ ಎಂಥ ಅರ್ಥಾಭ್ಯಾಸ? ಅಂತೆಯೇ ಆದಿಶಕ್ತಿಯನ್ನು 'ಆಧಿಶಕ್ತಿಯೆಂದೂ, ಆದಿಶಕಂಕರನನ್ನು 'ಆಧಿ'ಶಂಕರನೆಂದೂ ಉಚ್ಚರಿಸುವುದುಂಟು. 'ಆದಿ' ಎಂದರೆ 'ಮೊದಲು', 'ಆಧಿ' ಎಂದರೆ 'ಅನಾರೋಗ್ಯ' ಎಂದರ್ಥ. ಬೋಧನೆ ಪದವು ವ್ಯತ್ಯಾಸವಾಗಿ 'ಭೋದನೆ'ಯಾಗಿಬಿಡುತ್ತದೆ. ಭಾವ ಪದವು 'ಬಾವ' ಆಗುವುದು, 'ಧನ' (ಹಣ) ಎಂಬ ಪದವು 'ದನ' (ಆಕಳು) ಆಗುವುದುಂಟು. 'ಧನ ಕಾಯುವುದು' 'ದನಕಾಯವುದು' ಆದರೆ ಅರ್ಥಾಭ್ಯಾಸ ಸರ್ಜನಶೀಲತೆಯು 'ಸೃಜನಶೀಲತೆ' ಎಂದೂ, ಕರುಳು 'ಕರಳು' ಎಂದೂ ಆಗಿಬಿಟ್ಟಿವೆ. ಆಶ್ಚರ್ಯವೇನೆಂದರೆ ವ್ಯಾಪಕವಾಗಿ ಬಳಕೆಯಲ್ಲಿರುವಂಥ 'ಮಾಡುವುದರಿಂದ' ಎನ್ನುವುದೂ ತಪ್ಪು ಪ್ರಯೋಗ. ಮಾಡುವುದರಿಂದ (ಮಾಡುವ ಅದರಿಂದ) ಎನ್ನುವುದೇ ಸರಿ! 'ಫಲ' ಎಂದರೆ ಹಣ್ಣು, 'ಪಲ' ಎಂದರೆ ಮಾಂಸ. "ಇವತ್ತು ಏಕಾದಶಿ, ಹಾಗಾಗಿ ನನ್ನದು ಕೇವಲ ಪಲಾಹಾರ" ಎಂದು ಬಿಟ್ಟರೆ ಏನು ಗತಿ? ಇನ್ನು ಹ ಕಾರ–ಅ ಕಾರಗಳನ್ನು ಬದಲಿಸಿ ಹೇಳುವ ದೋಷವನ್ನು ಚಿಕ್ಕಂದಿನಲ್ಲೇ ತಿದ್ದಿಸಿಕೊಳ್ಳದಿದ್ದಲ್ಲಿ ಅಭಾಸವಾಗುತ್ತದೆ. ಹಾಸನಕ್ಕೆ 'ಆಸನ' ಅರಸೀಕೆರೆಗೆ 'ಹರಸೀಕೆರೆ' ಎನ್ನುತ್ತಿದ್ದವನ ತಮಾಷೆಯ ಕಥೆಯನ್ನು ಮಲೆನಾಡಿನಲ್ಲಿ ಇಂದಿಗೂ ಹೇಳುತ್ತಾರಷ್ಟೆ.

ಇಂಥ ಮಾತೃಭಾಷೆಯನ್ನು ನುಡಿದರೂ ಕಾಳಜಿಯಿಲ್ಲದೆ ನುಡಿಯುವವರ ವಾಗ್ದೋಷಗಳಿಂದಾಗಿಯೇ ಒಂದೆರೆಡು ಶತಮಾನಗಳಲ್ಲಿ ಭಾಷೆಗಳು ಗಮನೀಯ ಬದಲಾವಣೆಗಳಿಗೆ ತುತ್ತಾಗಿ ಬಡವಾಗುವುದು. ತಿದ್ದಿದರೆ ಮಕ್ಕಳು ತಿದ್ದಿಕೊಳ್ಳುತ್ತಾರೆ. ಆದರೆ ದೊಡ್ಡವರಾದ ಮೇಲೆ ತಿದ್ದಹೋದರೆ ಅಭಿಮಾನ ಕೆರಳುತ್ತದೆ. "ನಿಮ್ಮ ವ್ಯಾಕರಣ ಬೇಕಿಲ್ಲ ರೀ, ನಮ್ಮದು ಜಾನಪದ ಪ್ರಯೋಗ" ಎಂದು ಸಮರ್ಥಿಸಿಕೊಳ್ಳುತ್ತಾರೆ. ಜಾನಪದ ನುಡಿಯು ಸರಳ, ಸುಂದರ, ಆತ್ಮೀಯ ನಿಜ. ಆದರೆ ನಮ್ಮ ತಪ್ಪು ಉಚ್ಚಾರಗಳನ್ನೆಲ್ಲ ಸಮರ್ಥಿಸಿಕೊಳ್ಳುವ ಸಲುವಾಗಿ ಜಾನಪದದ ಹೆಸರನ್ನು ಬಳಸುವುದು ಜಾನಪದಕ್ಕೆ ಎಸಗುವ ಅನಾದರವೇ ಸರಿ.

ನಮ್ಮ ಕನ್ನಡ ನುಡಿಯಲ್ಲಿ ನಮಗೆ ಪ್ರಾಮಾಣಿಕವಾದ ಆದರಸಕ್ತಿಗಳಿದ್ದಲ್ಲಿ ತಡಮಾಡದೆ ಇಂಥ ದೋಷಗಳನ್ನು ತಿದ್ದಿಕೊಳ್ಳೋಣ. ದೊಡ್ಡವರಾಗಲಿ ಚಿಕ್ಕವರಾಗಲಿ ಭಾಷಾಸರಸ್ವತಿಯ ಮುಂದೆ ನಾವೆಲ್ಲರೂ ತೊದಲುವ ಹಸುಳೆಗಳೇ. ಸದಾ ಕಲಿಯುತ್ತಿರೋಣ.. ಮುಂದಿನ ಪೀಳಿಗೆಗೆ ಒಳ್ಳೆಯ ಕನ್ನಡದುಚ್ಚಾರವನ್ನು ಕಲಿಸೋಣ. ನವೆಂಬರ್ ತಿಂಗಳಲ್ಲಿ ಕನ್ನಡಾಂಬೆಗೆ ಘೋಷಣೆ ಕೂಗಿ ಸುಮ್ಮನಾದರಾಯ್ತೆ? ದಿನನಿತ್ಯದ ಬಳಕೆಯಲ್ಲಿ ಕನ್ನಡವನ್ನು ಉಲಿಯಬೇಕು, ಸರಿಯಾಗಿ ಉಲಿಯಬೇಕು, ತನ್ಮೂಲಕ ಉಳಿಸಬೇಕು, ಬೆಳೆಸಬೇಕು. ॐ

Printed by Arvind, Published Edited and Owned by Dr. D.C. Ramachandra, No.66, Doddasomanahalli, Magadi Tq, Ramanagar Dist. and Printed at Computer World, Near G.T. Mall, Mallige Thota, Magadi Road, Bengaluru - 560 023. **Editor: Dr. C. Nanjundaiah.**



|| Jai Sri Gurudev ||

Sri Adichunchanagiri Shikshana Trust(R)



# ADICHUNCHANAGIRI INSTITUTE OF TECHNOLOGY

Jyothinagar,
Chikkamagaluru - 577 102
"www.aitckm.in"

ESTD: 1980

GRADED A BY NAAC

GOVERNMENT OF KARNATAKA "SUPER" 30



CERTIFICATE OF ACCREDITATION

## Our Top Recruiters

NTT, Cognizant, TCS Tata Consultancy Services, Deloitte., wipro, HCL, Mindtree, NTT Data, accenture, Infosys, ZenSar Technologies, SCIL

Training and Placement
22 Batch Highlights

- 40+ Campus Placemnt Drives
- 450+ Job Offers
- Minimum Package 3 LPA
- Highest Package 11.77 LPA

# COURSES OFFERED

## B.E. Courses (Under Graduate)

- Civil Engineering
- Mechanical Engineering
- Electrical and Electronics Engineering
- Electronics and Communication Engineering
- Computer Science and Engineering
- Computer Science and Engineering (Data Science)
- Information Science and Engineering
- Artificial Intelligence & Machine Learning

## Masters Degree Courses (Post Graduate)

- Digital Electronics and Communication Systems (E & C Engg.)
- Structural Engineering (Civil Engg.)
- Computer Science and Engineering (C S & E)
- M B A (Master of Business Administration)

**Recognised Research Center Doctoral Programms**

- Department of Civil Engineering - Department of Mechanical Engineering
- Department of information science and Engineering
- Department of Electronics and Communication Engineering
- Department of Computer Science and Engineering
- Department of Physics - Department of Chemistry - Department of Mathematics
- Department of Electrical and Electronics Engeeneering

**OUR PLACEMENT HIGHLIGHTS**

- MINIMUM 500+ JOB OFFERS EVERY YEAR
- 50+ CAMPUS DRIVES EVERY YEAR
- MINIMUM 3.25 LPA TO MAXIMUM 15 LPA PACKAGE OFFERS
- 50 + PLACEMENTS IN FORTUNE 500 COMPANIES
- TRAINING AND PLACEMENT CELL FOR STUDENTS

200+ UNIVERSITY RANKS

B.E
CET CODE-E064, COMEDK CODE -E004
M.Tech
CET CODE - T803
MBA
CET CODE - B109

Registered with Registrar of News Papers for India No.KARKAN/2018/76081, **Sampreethi Samruddhi,** October - 2023.
License to post without prepayment. License No.**KA/BG/CNA/119/2022-2024,**
Date of publication: **28.09.2023.** Posted at **Magadi Sub Post Office-562120** on **29th** of every month

|| Jai Sri Gurudev ||



# Adichunchanagiri University

## BGS Institute of Technology

BG Nagara-571448, Nagamangala Taluk, Mandya District, Karnataka-NH-75



# Admissions Open

BGSIT CET Code: E142



**BE Courses:**

- Civil Engg.
- Mechanical Engg.
- Computer Science & Engg.
- Information Science & Engg.
- Electronics & Communication Engg.
- Artificial Intelligence & Machine Learning(AI&ML)

**P.G Courses:**

- MBA
- Structural Engg.
- Computer Science & Engg.
- Infrastructure Management
- VLSI Design & Embedded Systems

**Ph.D. Programmes**

- Civil Engineering
- Mechanical Engg
- Computer Science & Engineering
- Electronics & Communication Engineering

**For Admissions Contact**

**Dr. M.B. Anandaraju**
Admission Officer
9886108095

**Dr. B.K. Narendra**
Principal
9880100556

**www.bgsit.ac.in | CET Code: E142**

To,

If undelivered please return to :
The Editor
**Sampreethi Sadan**
Govt. Hospital Parallel Road,
Magadi Town, Magadi - 562120